ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 5 ಶನಿವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 111 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com





ಮೈಸೂರಿನ ಯಾದವಗಿರಿಯಲ್ಲಿ ರೈಲ್ವೆ ನೌಕರರಿಗೆ 350 ಕೋಟಿ ವೆಚ್ಚದಲ್ಲಿ ವಸತಿ ಸೌಕರ್ಯ

● ಚಾಮರಾಜನಗರ, ಹಾಸನ ನಿಲ್ದಾಣಗಳು ಮೇಲ್ದರ್ಜೆಗೆ ● ಇವುಗಳಲ್ಲಿ ಪ್ರಯಾಣಿಕರಿಗೆ ಅತ್ಯಾಧುನಿಕ ಸೌಕರ್ಯ ● ವಾಣಿಜ್ಯ ಸಂಕೀರ್ಣಗಳಿಂದಾಗಿ ಸಾಕಷ್ಟು ಉದ್ಯೋಗಾವಕಾಶ



ಮೈಸೂರು, ಆ.4(ಬಿಎಲ್‌ಯು)– ಮೈಸೂರಿನ ಯಾದವಗಿರಿಯಲ್ಲಿ ರೈಲ್ವೆ ನೌಕರರಿಗೆ 350 ಕೋಟಿ ರೂ. ವೆಚ್ಚದಲ್ಲಿ ವಸತಿ ಗೃಹ ನಿರ್ಮಾಣ ಮಾಡಲಾಗುತ್ತಿದೆ ಎಂದು ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ತಿಳಿಸಿದರು.

ಮೈಸೂರು ರೈಲ್ವೆ ವಿಭಾಗೀಯ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ ಅವರು, ಮೈಸೂರಿನ ಯಾದವಗಿರಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ರೈಲ್ವೆ ಸಮುದಾಯ ಭವನ ಹಾಗೂ ನೌಕರರ 9 ವಸತಿ ಗೃಹಗಳನ್ನು ನೆಲಸಮ ಗೊಳಿಸಲಾಗುವುದು. ಅಲ್ಲಿ 350 ಕೋಟಿ ರೂಪಾಯಿ ವೆಚ್ಚದಲ್ಲಿ ರೈಲ್ವೆ ನೌಕರರಿಗೆ ಹೊಸದಾಗಿ ವಸತಿ ಗೃಹಗಳನ್ನು ನಿರ್ಮಾಣ ಮಾಡಲಾಗುವುದು ಎಂದರು.

ಆಗಸ್ಟ್ ಅಂತ್ಯಕ್ಕೆ ಟೆಂಡರ್ ಪ್ರಕ್ರಿಯೆ ಆರಂಭವಾಗಲಿದೆ. ಕಟ್ಟಡ ನಿರ್ಮಾಣ ಆರಂಭವಾದ 36 ತಿಂಗಳ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂದು ಶಿಲ್ಪಿ ಅಗರವಾಲ್ ಹೇಳಿದರು.

ಮೈಸೂರಿನ ಅಶೋಕಪುರಂ ರೈಲ್ವೆ ನಿಲ್ದಾಣದ ನವೀಕರಣ ಕಾರ್ಯ ಪೂರ್ಣಗೊಂಡಿದೆ. ಆಗಸ್ಟ್ 15 ರಂದು ನವೀಕೃತ ಅಶೋಕಪುರಂ ರೈಲ್ವೆ ನಿಲ್ದಾಣವನ್ನು ಉದ್ಘಾಟಿಸಲಾಗುವುದು. ಮೈಸೂರು ವಿಭಾಗದಲ್ಲಿ ಹೊಸ ರೈಲುಗಳನ್ನು ಪರಿಚಯಿಸುವ ಪ್ರಸ್ತಾವನೆ ಸದ್ಯಕ್ಕೆ ಇಲ್ಲ ಎಂದು ಇದೇ ವೇಳೆ ಶಿಲ್ಪಿ ಅಗರವಾಲ್ ಸ್ಪಷ್ಟಪಡಿಸಿದರು.

ಚಾ.ನಗರ, ಹಾಸನ ನಿಲ್ದಾಣ ಮೇಲ್ದರ್ಜೆಗೆ: ಚಾಮರಾಜನಗರ, ಹಾಸನ, ತಿಪಟೂರು ಸೇರಿದಂತೆ ಮೈಸೂರು ವಿಭಾಗದ 15 ರೈಲು ನಿಲ್ದಾಣಗಳನ್ನು ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ ಅಭಿವೃದ್ಧಿ ಮಾಡಲು ಗುರುತಿಸಲಾಗಿದೆ. ನವೀಕೃತ ರೈಲ್ವೆ ನಿಲ್ದಾಣದಲ್ಲಿ ಆಧುನಿಕ ಸಂವಹನ ವ್ಯವಸ್ಥೆ, ವೈಫೈ., ಸಿಸಿ ಕ್ಯಾಮರಾ ಅಳವಡಿಕೆ, ಸ್ವಯಂ ಚಾಲಿತ ಟಿಕೆಟಿಂಗ್, ವಿದ್ಯುದೀಕರಣ ಪ್ರದರ್ಶನ ಫಲಕಗಳ ಅಳವಡಿಕೆ ಸೇರಿದಂತೆ ಸುಧಾರಿತ ತಂತ್ರಜ್ಞಾನವನ್ನು ಪರಿಚಯಿಸಲಾಗುವುದು ಎಂದರು.

ಅಮೃತ್ ಭಾರತ್ ನಿಲ್ದಾಣ ಯೋಜನೆಯಿಂದ ಇಂಜಿನಿಯರಿಂಗ್, ನಿರ್ವಹಣೆ, ಭದ್ರತೆ, ಆತಿಥ್ಯ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ನವೀಕೃತ ರೈಲ್ವೆ ನಿಲ್ದಾಣದಲ್ಲಿ ಮಾರಾಟ ಮಳಿಗೆಗಳ ಸಂಕೀರ್ಣ ಕೂಡ ನಿರ್ಮಾಣವಾಗುವ ಕಾರಣ ಹಲವರಿಗೆ ಉದ್ಯೋಗ ದೊರೆಯುತ್ತದೆ ಎಂದು ಅಭಿಪ್ರಾಯಪಟ್ಟರು. ಈ ಬಾರಿಯ ರೈಲ್ವೆ ಬಜೆಟ್‌ನಲ್ಲಿ ಕರ್ನಾಟಕದ ರೈಲ್ವೆ ಅಭಿವೃದ್ಧಿಗೆ 7,561 ಕೋಟಿ ರೂಪಾಯಿ ಮೀಸಲಿಡಲಾಗಿದೆ. ಇದರಲ್ಲಿ ಮೈಸೂರು ವಿಭಾಗದ ರೈಲ್ವೆ ನಿಲ್ದಾಣದ ಅಭಿವೃದ್ಧಿಗಾಗಿ 347 ಕೋಟಿ ರೂಪಾಯಿ ನೀಡಲಾಗಿದೆ. ಇದರಿಂದ ರೈಲ್ವೆ ನಿಲ್ದಾಣಗಳು ಆಧುನಿಕರಣಗೊಳ್ಳಲಿವೆ. ಜೊತೆಗೆ ಮಾಹಿತಿ ಕೇಂದ್ರ, ಐಷರಾಮಿ ವಿಶ್ರಾಂತಿ ಕೊಠಡಿ ಸೇರಿದಂತೆ ಹಲವು ಗುಣಮಟ್ಟದ ಸೌಲಭ್ಯಗಳು ಪ್ರಯಾಣಿಕರಿಗೆ ದೊರೆಯಲಿದೆ ಎಂದು ಶಿಲ್ಪಿ ಅಗರವಾಲ್ ತಿಳಿಸಿದರು.

ಹೆಚ್ಚುವರಿ ರೈಲ್ವೆ ವಿಭಾಗೀಯ ವ್ಯವಸ್ಥಾಪಕಿ ವಿಜಯ, ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಜೆ.ಲೋಹಿತೇಶ್ವರ, ಗತಿಶಕ್ತಿ ಮುಖ್ಯಸ್ಥ ವಿಷ್ಣುಭೂಷಣ್, ಸಹಾಯಕ ವಾಣಿಜ್ಯ ವ್ಯವಸ್ಥಾಪಕ ಡಿ.ರಾಜ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರಲ್ಲಿ ಇಂದಿನಿಂದ ಪ್ರತಿ ತಿಂಗಳ ಮೊದಲ ಶನಿವಾರ ಪಾರಂಪರಿಕ ನಡಿಗೆ

ಮೈಸೂರು, ಆ. 4(ಆರ್‌ಕೆ)– ವರ್ಷವಿಡೀ ಪ್ರತೀ ತಿಂಗಳ ಮೊದಲನೇ ಶನಿವಾರ ಮೈಸೂರಿನಲ್ಲಿ ಪಾರಂಪರಿಕ ನಡಿಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾಡಳಿತ ಹಾಗೂ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪಾರಂಪರಿಕ ಇಲಾಖೆ ವತಿಯಿಂದ ಏರ್ಪಡಿಸಿರುವ ಪಾರಂಪರಿಕ ನಡಿಗೆ ಮಾರ್ಗವು ಪ್ರತೀ ಶನಿವಾರ ವಿಭಿನ್ನವಾಗಿರುತ್ತದೆ ಎಂದು ಪಾರಂಪರಿಕ ಆಯುಕ್ತ ದೇವರಾಜು ತಿಳಿಸಿದ್ದಾರೆ. ನಾಳೆ (ಆ.5) ಬೆಳಗ್ಗೆ 6.30 ಗಂಟೆಗೆ ಮೈಸೂರಿನ ರಂಗಾಚಾರ್ಲು ಪುರಭವನದಿಂದ ಆರಂಭವಾಗುವ ಪಾರಂಪರಿಕ ನಡಿಗೆಯು ಚಾಮರಾಜ ಸರ್ಕಲ್, ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಅರಮನೆ ಉತ್ತರ ದ್ವಾರ, ಕೆ.ಆರ್. ಸರ್ಕಲ್, ಸಯ್ಯಾಜಿ ರಾವ್ ರಸ್ತೆ, ದೇವರಾಜ ಮಾರುಕಟ್ಟೆ, ಕೆ.ಆರ್. ಆಸ್ಪತ್ರೆ, ಸರ್ಕಾರಿ ಆಯುರ್ವೇದ ಕಾಲೇಜು, ಕಾವಾ ಕಟ್ಟಡದ ಮೂಲಕ ಓಲ್ಡ್ ಬ್ಯಾಂಕ್ ರಸ್ತೆ ಮಾರ್ಗವಾಗಿ ಸಾಗಿ ಪುರಭವನ ಬಳಿ ಅಂತ್ಯಗೊಳ್ಳಲಿದೆ ಎಂದು ಅವರು ತಿಳಿಸಿದ್ದಾರೆ. ಆ ಮಾರ್ಗದಲ್ಲಿ ಸಿಗುವ ಪಾರಂಪರಿಕ ಕಟ್ಟಡಗಳ ಇತಿಹಾಸ, ಹಿನ್ನೆಲೆ, ಮೈಸೂರು ಅರಸರ ಆಡಳಿತದ ಮಾದರಿಯನ್ನು ಸ್ಮರಿಸುತ್ತಾ ಪಾರಂಪರಿಕ ತಜ್ಞರು ಮಾಹಿತಿಯನ್ನು ನೀಡಲಿದ್ದಾರೆ. ಸಾರ್ವಜನಿಕರು ಹಾಗೂ ಪ್ರವಾಸಿಗರು ಪಾರಂಪರಿಕ ನಡಿಗೆಯಲ್ಲಿ ಪಾಲ್ಗೊಳ್ಳುವಂತೆ ದೇವರಾಜು ತಿಳಿಸಿದರು.

ಈವರೆಗೆ ಕೇವಲ ದಸರಾ ಮಹೋತ್ಸವದ ಸಂದರ್ಭದಲ್ಲಿ ಮಾತ್ರ ಪಾರಂಪರಿಕ ನಡಿಗೆ ಕಾರ್ಯಕ್ರಮ ಆಯೋಜಿಸಲಾಗುತ್ತಿತ್ತು. ಆದರೆ ಈಗ ವರ್ಷ ಪೂರ್ತಿ ಪ್ರತೀ ತಿಂಗಳ ಮೊದಲ ಶನಿವಾರ ಕಾರ್ಯಕ್ರಮ ವಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು, ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ಪಾರಂಪರಿಕ ಕಟ್ಟಡ, ಸ್ಮಾರಕಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ನಡಿಗೆಯನ್ನು ನಿರಂತರವಾಗಿ ನಡೆಲಾಗುತ್ತಿದೆ ಎಂದು ಅವರು ತಿಳಿಸಿದರು.

ಭಾವಗೀತೆ, ಜನಪದ ಗೀತೆಗಳ ಶಿಬಿರ

ಮೈಸೂರು, ಆ.4– ಮೈಸೂರಿನ ಮಹಾರತ್ನ ಟ್ರಸ್ಟ್ ವತಿಯಿಂದ ಆ. 7 ರಿಂದ 11 ರವರೆಗೆ ಖ್ಯಾತ ಗಾಯಕ ಮೈಸೂರು ಮಹಾಲಿಂಗ ಅವರ ನೇತೃತ್ವದಲ್ಲಿ ಭಾವಗೀತೆ, ಜನಪದಗೀತೆಗಳ ಶಿಬಿರವನ್ನು ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಆವರಣದಲ್ಲಿ ಆಯೋಜಿಸಲಾಗಿದೆ. ಶಿಬಿರವು ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ನಡೆಯಲಿದೆ. ಮೊ. 9740287860, 9945910706 ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬಹುದು.

ಅರಸೀಕೆರೆ, ಹರಿಹರ ನಿಲ್ದಾಣಗಳ ನವೀಕರಣಕ್ಕೆ ಆ.6ರಂದು ಪ್ರಧಾನಿ ಮೋದಿ ಶಂಕುಸ್ಥಾಪನೆ

ಮೈಸೂರು, ಆ.4(ಬಿಎಲ್‌ಯು)– ಅಮೃತ್ ಭಾರತ್ ನಿಲ್ದಾಣ ಯೋಜನೆಯಲ್ಲಿ ಅರಸೀಕೆರೆ ಹಾಗೂ ಹರಿಹರ ರೈಲ್ವೆ ನಿಲ್ದಾಣಗಳನ್ನು ನವೀಕರಣ ಮಾಡುತ್ತಿದ್ದು, ಆಗಸ್ಟ್ 6 ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ತಿಳಿಸಿದರು. ಅರಸೀಕೆರೆ ರೈಲ್ವೆ ನಿಲ್ದಾಣವನ್ನು 34.13 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗುತ್ತಿದೆ. ಹಾಗೆಯೇ ಹರಿಹರ ರೈಲ್ವೆ ನಿಲ್ದಾಣವನ್ನು 25.21 ಕೋಟಿ ರೂಪಾಯಿ ವೆಚ್ಚದಲ್ಲಿ ನವೀಕರಣಗೊಳಿಸಲಾಗುತ್ತಿದೆ. ಅಂದು ಬೆಳಗ್ಗೆ 11 ಗಂಟೆಗೆ ನರೇಂದ್ರ ಮೋದಿ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಶಂಕುಸ್ಥಾಪನೆ ನೆರವೇರಿಸುವರು ಎಂದು ಹೇಳಿದರು.

ಅಮೃತ್ ಭಾರತ್ ನಿಲ್ದಾಣ ಯೋಜನೆಯಲ್ಲಿ ರೈಲ್ವೆ ನಿಲ್ದಾಣದಲ್ಲಿ ಹೊಸ ಕಟ್ಟಡ ನಿರ್ಮಾಣ, ಗ್ರಾನೈಟ್ ನೆಲಹಾಸು, ಶೌಚಾಲಯ, ವೈ ಫೈ, ಸಿಸಿಟಿವಿ ಕ್ಯಾಮರಾ ಅಳವಡಿಕೆ, ಪಾದಾಚಾರಿ ಮೇಲ್ಸೇತುವೆ, ವಿಶ್ರಾಂತಿ ಕೊಠಡಿ, ಚರಂಡಿ ಹಾಗೂ ಮಳೆ ನೀರು ಕೊಯ್ಲು ವ್ಯವಸ್ಥೆ, ಪ್ರಯಾಣಿಕ ಸೌಕರ್ಯಗಳ ಸುಧಾರಣೆ ಸೇರಿದಂತೆ ಹಲವು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಈ ಎಲ್ಲಾ ಕಾಮಗಾರಿಗಳನ್ನು ಜನವರಿ, 2024 ರೊಳಗೆ ಪೂರ್ಣಗೊಳಿಸಲಾಗುವುದು ಎಂದು ಶಿಲ್ಪಿ ಅಗರವಾಲ್ ತಿಳಿಸಿದರು.

ಬನ್ನಿಮಂಟಪದ ಜೋಡಿ ತೆಂಗಿನ ಮರ ರಸ್ತೆ ಡಾಂಬರೀಕರಣ ಆರಂಭ



ಮೈಸೂರು, ಆ. 4(ಆರ್‌ಕೆ)– ಗುಂಡಿ ಬಿದ್ದು ಹಾಳಾಗಿದ್ದ ಮೈಸೂರಿನ ಬನ್ನಿಮಂಟಪದ ಜೋಡಿ ತೆಂಗಿನ ಮರದ ರಸ್ತೆಗೆ ಡಾಂಬರೀಕರಣ ಕಾಮಗಾರಿಯನ್ನು ಮೈಸೂರು ಮಹಾ ನಗರ ಪಾಲಿಕೆಯು ಆರಂಭಿಸಿದೆ.

12 ಲಕ್ಷ ರೂ. ವೆಚ್ಚದ ಮೊದಲ ಹಂತದ ಕಾಮಗಾರಿ ಹೈವೇ ಸರ್ಕಲ್‌ನಿಂದ ಇಂದು ಆರಂಭಿಸಿದ್ದು, ಗುಂಡಿ ಮುಚ್ಚಿ ಮೆಟ್ಲಿಂಗ್ ಮಾಡಿ ಡಾಂಬರೀಕರಣ ಮಾಡಲಾಗುತ್ತಿದೆ. ಎರಡನೇ ಹಂತದಲ್ಲಿ ಮುಂದುವರೆದ ಕಾಮಗಾರಿ ಕೈಗೊಳ್ಳಲು 50 ಲಕ್ಷ ರೂ. ಟೆಂಡರ್ ಕರೆಯಲಾಗಿದ್ದು, ಶೀಘ್ರ ಉಳಿದ ಕೆಲಸವನ್ನು ಆರಂಭಿಸುತ್ತೇವೆ ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಈ ಹಿಂದೆ ಮುಡಾದಿಂದ ಹೈವೇ ಸರ್ಕಲ್‌ನಿಂದ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮಹಿಳಾ ಹಾಸ್ಟೆಲ್‌ವರೆಗೆ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿಪಡಿಸಲಾಗಿತ್ತಾದರೂ, ಅಧಿಕ ವಾಹನ ಸಂಚಾರ ದಟ್ಟಣೆಯಿಂದಾಗಿ ಗುಂಡಿ ಬಿದ್ದು ಹಾಳಾಗಿತ್ತು.

ಕಳೆದ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದು ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿರುವುದನ್ನು ಮನಗಂಡು ತಾವು ಪಾಲಿಕೆ ಅನುದಾನದಲ್ಲಿ ಡಾಂಬರೀಕರಣ ಕಾಮಗಾರಿಯನ್ನು ಆರಂಭಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಮಣಿಪುರ ಹಿಂಸಾಚಾರ ಕುರಿತು ನೈಜ ವಿಚಾರ ಅನಾವರಣ

ಮೈಸೂರು, ಆ.4– ಮೈಸೂರಿನ ವೀರ ಸಾವರ್ಕರ್ ಯುವ ಬಳಗದ ವತಿಯಿಂದ ಕೃಷ್ಣ ವಿಲಾಸ ರಸ್ತೆಯಲ್ಲಿರುವ ಐಡಿಯಲ್ ಜಾವಾ ರೋಟರಿ ಶಾಲೆಯ ಸಭಾಂಗಣದಲ್ಲಿ ಆ. 6 ರಂದು ಬೆಳಗ್ಗೆ 11 ಗಂಟೆಗೆ ಮಣಿಪುರ ಹಿಂಸಾಚಾರ ಕುರಿತು ನೈಜ ವಿಚಾರ ಅನಾವರಣ ಕಾರ್ಯಕ್ರಮ ಆಯೋಜಿಸಲಾಗಿದೆ. ವಿಧಾನಪರಿಷತ್ ಮಾಜಿ ಸದಸ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ವಿಷಯ ಕುರಿತು ಮಾತನಾಡಲಿದ್ದಾರೆ. ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ವೀರ ಸಾರ್ವಕರ್ ಯುವ ಬಳಗದ ಅಧ್ಯಕ್ಷ ರಾಕೇಶ್ ಭಟ್ ಉಪಸ್ಥಿತರಿರಲಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ನೋಂದಣಿ

ಮೈಸೂರು,ಆ.4– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕರ್ನಾಟಕ ಸರ್ಕಾರ ನಡೆಸಲು ಇರುವ ಪಿ.ಡಿ.ಓ, ಎಫ್.ಡಿ.ಎ, ಎಸ್.ಡಿ.ಎ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ನೀಡಲಾಗುತ್ತದೆ.

ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಆಗಸ್ಟ್ 14 ರೊಳಗಾಗಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4 ವರೆಗೆ ದೂ.ಸಂ: 0821– 2515944 ಅನ್ನು ಸಂಪರ್ಕಿಸಬಹುದು ಎಂದು ಕುಲಸಚಿವ ಪ್ರೊ. ಕೆಎಲ್‌ಎನ್ ಮೂರ್ತಿ ತಿಳಿಸಿದ್ದಾರೆ.

ಅನ್ನದಾತರನ್ನು ನಿರ್ಲಕ್ಷ್ಯ ಮಾಡದೆ ಗೌರವಿಸಿ

ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಕೃಷಿ ಸಂಯೋಜಕ ಡಾ.ಗಂಗಯ್ಯ ಎಸ್ ಕುಲಕರ್ಣಿ



ಮೈಸೂರು, ಆ. 4– ಹಗಲಿರುಳು ಎನ್ನದೆ ನಿರಂತರ ಬೆವರು ಸುರಿಸಿ ಶ್ರಮಿಸಿ ವಿಶ್ವಕ್ಕೆ ಆಹಾರ ನೀಡುವ ಅನ್ನದಾತನನ್ನು ನಿರ್ಲಕ್ಷ ಮಾಡದೆ ಗೌರವಿಸಿ, ಪ್ರೋತ್ಸಾಹಿಸಬೇಕು ಎಂದು ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಕೃಷಿ ಸಂಯೋಜಕ ಡಾ.ಗಂಗಯ್ಯ ಎಸ್.ಕುಲಕರ್ಣಿ ಹೇಳಿದರು.

ಮೈಸೂರಿನ ಕೃಷ್ಣಮೂರ್ತಿಪುರಂನ ನಮನ ಕಲ್ಯಾಣ ಮಂಟಪದಲ್ಲಿ ಕಚುಸಾಪ ಮತ್ತು ಎನ್.ವ್ಹಿ. ರಮೇಶ್ ಅವರ ಅಭಿರುಚಿ ಬಳಗದ ಸಂಯುಕ್ತ ಆಶ್ರಯದಲ್ಲಿ ಜರುಗಿದ ಮೈಸೂರು ವಲಯ ಮಟ್ಟದ ಪ್ರಥಮ ಸಮ್ಮೇಳನದ ರೈತ ಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರು ರಾಸಾಯನಿಕ ಬಳಕೆ ಕಡಿಮೆ ಮಾಡಿ ಸಾವಯವ ಕೃಷಿ ಮಾಡುವುದರ ಮೂಲಕ ಭೂಮಿಯ ಫಲವತ್ತತೆ ಕಾಯ್ದುಕೊಳ್ಳಬೇಕು ಎಂದರು.

ಸಾವಯವ ಕೃಷಿ ತಜ್ಞ ಶೇಖರಗೌಡ ಪಾಟೀಲ್ ಮಾತನಾಡಿ, ಇಂದು ರೈತರು ಅದಿಕ ಲಾಭಕ್ಕಾಗಿ ರಾಸಾಯನಿಕ ಗೊಬ್ಬರ, ಕೀಟನಾಶಕ ಮತ್ತು ಕಳೆನಾಶಕಗಳನ್ನು ಬಳಸುತ್ತಿದ್ದಾರೆ, ಇದರಿಂದ ಮಣ್ಣಿನಲ್ಲಿರುವ ಸೂಕ್ಷ್ಮಾಣು ಜೀವಿಗಳು ನಾಶವಾಗಿ ಭೂಮಿಯ ಫಲವತ್ತತೆ ಕಡಿಮೆಯಾಗಿ ಇಳುವರಿಯು ಕಡಿಮೆಯಾಗುತ್ತದೆ, ಆದ್ದರಿಂದ ರೈತರು ಭೂಮಿಯ ಫಲವತ್ತತೆಗೆ ಸಾವಯವ ಕೃಷಿ ಮಾಡುವುದು ಅನಿವಾರ್ಯ ಎಂದರು. ಇದೇ ಸಂದರ್ಭದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ಕೃಷಿ ಸಲಹೆಗಾರರಾಗಿ ಸೇವೆ ಸಲ್ಲಿಸಿದ ಚಾಮರಾಜನಗರ ಜಿಲ್ಲೆಯ ಹೊಮ್ಮ ಗ್ರಾಮದ ನಿವಾಸಿ ಪಾಲಾಕ್ಷ ಎಂ, ಹಿರಿಯ ರೈತರಾದ ಮಾದೇಶ ನಾಯಕ ಹಾಗೂ ಪರಶುರಾಮ ಶಿವನಗೌಡ ದಂಪತಿಯನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಚುಸಾಪ ರಾಜ್ಯ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ, ಮೈಸೂರು ವಿಭಾಗದ ಅಧ್ಯಕ್ಷ ಎನ್.ವಿ.ರಮೇಶ್, ಹಾವೇರಿ ಜಿಲ್ಲಾಧ್ಯಕ್ಷ ವಿರೂಪಾಕ್ಷ ಲವಾಣಿ, ಬೆಂಗಳೂರು ಘಟಕದ ಅಧ್ಯಕ್ಷ ಕೆ.ವಿ. ಶ್ರೀಕಾಂತ, ಶ್ರೀಮತಿ ಉಮಾ ರಮೇಶ್, ಲತಾ ಮೋಹನ, ತುಮಕೂರಿನ ಜಿ.ಕೆ. ಕುಲಕರ್ಣಿ ಮತ್ತಿತರರು ಉಪಸ್ಥಿತರಿದ್ದರು.

ಡಾ.ಕೆ.ಕೃಷ್ಣಮೂರ್ತಿಯವರ ಶತಮಾನೋತ್ಸವ ಆಚರಣೆ



ಮೈಸೂರು, ಆ. 4–ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಹಾಗೂ ಡಾ.ಕೆ. ಕೃಷ್ಣಮೂರ್ತಿ ಶತಮಾನೋತ್ಸವ ಸಮಿತಿ ವತಿಯಿಂದ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ತ್ರಿಭಾಷಾ ಪಂಡಿತ ಡಾ. ಕೆ.ಕೃಷ್ಣಮೂರ್ತಿ ಅವರ ಶತಮಾನೋತ್ಸವ ಸಮಾರಂಭ ಆಯೋಜಿಸಲಾಗಿತ್ತು.


ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಡಾ.ನಿರಂಜನ ವಾನಳ್ಳಿ, ಕೃಷ್ಣಮೂರ್ತಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು. ಅವರ ಬಾಲ್ಯ, ಜೀವನ ಹಾಗೂ ಅಪ್ರತಿಮ ಸಾಧನೆಗಳ ಬಗ್ಗೆ ಮಾತನಾಡಿದ ಅವರು, ವಿದ್ಯಾರ್ಥಿಗಳು, ಪ್ರಾಚಾರ್ಯಗಳೆಲ್ಲರೂ ಅವರನ್ನು ಅನುಸರಿಸಬೇಕಾದ ಅವಶ್ಯಕತೆ ಬಗ್ಗೆ ವಿವರಿಸಿದರು. ಡಾ.ಕೆ.ಕೃಷ್ಣ ಮೂರ್ತಿ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕರಾದ ಡಾ.ಕೆ.ಲೀಲಾ ಪ್ರಕಾಶ್, ಪ್ರಾಸ್ತಾವಿಕ ಸ್ವಾಗತವನ್ನು ಮಾಡುತ್ತಾ, ಹೊರತಂದಿರುವ ಡಾ.ಕೆ.ಕೃಷ್ಣಮೂರ್ತಿಯವರ ಸುಮಾರು 50 ಪುಸ್ತಕಗಳನ್ನು ಹಾಗೂ ಸಂಸ್ಥೆಯ ಕಾರ್ಯವೈಖರಿಯನ್ನು ವಿವರಿಸಿದರು.

ಅಭಿನವ ಆನಂದವರ್ಧನ ಎಂದೇ ಖ್ಯಾತನಾಮರಾದ ಡಾ.ಕೆ. ಕೃಷ್ಣಮೂರ್ತಿಯವರ ಸಿದ್ಧಿ, ಸಾಧನೆಗಳ ಬಗ್ಗೆ, ಅವರ ದಾರ್ಶನಿಕ ಮನೋಭಾವ, ಕಾವ್ಯಸಿದ್ಧಿಯ ಬಗ್ಗೆ ಪಂಚಭಾಷಾ ಪರಿಣಿತರಾದ ಡಾ. ಶತಾವಧಾನಿ ಆರ್. ಗಣೇಶ್‌ರವರು ಅವರ ಎಲ್ಲಾ ಕೃತಿಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿದರು.

ಶತಮಾನೋತ್ಸವ ಸಮಿತಿಯ ಅಧ್ಯಕ್ಷರೂ ಹಾಗೂ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾದ ಡಾ.ಕೆ.ಕೃಷ್ಣಮೂರ್ತಿಯವರನ್ನು ಕೊಂಡಾಡಿ ಅವರ ಬಗ್ಗೆ ನಾಡಿನಾದ್ಯಂತ ವರ್ಷಪೂರ್ತಿ ವಿಚಾರಸಂಕಿರಣಗಳನ್ನು ವಿವಿಧ ವಿಶ್ವವಿದ್ಯಾಲಯ ಹಾಗೂ ಸಂಘ ಸಂಸ್ಥೆಗಳಲ್ಲಿ ಏರ್ಪಡಿಸುವುದಾಗಿ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಅಹಲ್ಯ ಶರ್ಮಾ ಮಾತನಾಡಿ ಇಂತಹ ಘನ ವಿದ್ವಾಂಸರನ್ನು ಪಡೆದ ನಮ್ಮ ನಾಡು ನಿಜಕ್ಕೂ ಹೆಮ್ಮೆಯ ವಿಷಯ. ಇವರ ಹೆಸರಿನಲ್ಲಿ ನಮ್ಮ ನೂತನ ಭವನದ ಸಭಾಂಗಣಕ್ಕೆ ನಾಮಾಂಕಿತ ಮಾಡುವುದಾಗಿ ತಿಳಿಸಿದರು. ಡಾ. ಡಿ. ತೇಜಸ್ವಿ ನಿರೂಪಿಸಿದರು. ಡಾ. ಪ್ರಭುಸ್ವಾಮಿ ವಂದಿಸಿದರು.

ನಿಧನ



ಬನ್ನೂರು: ತಿ. ನರಸೀಪುರ ತಾಲೂಕು, ಸೋಸಲೆ ಹೋಬಳಿಯ ಕೇತುಪುರ ಗ್ರಾಮದ ನಿವಾಸಿ ಹಾಗೂ ರಂಗಭೂಮಿ ಕಲಾವಿದ ಟಿ. ಸ್ವಾಮಿ (68) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸಂಜೆ ಕೇತುಪುರ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.8.2023 ಶನಿವಾರ, ಮಳೆ ನಕ್ಷತ್ರ: ಆಶ್ಲೇಷ 04.08.2023 ರಿಂದ 16.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಪೂಭಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಕೇನ್ಸ್ ಟೆಕ್ನಾಲಜಿ ಇಂಡಿಯಾ ಲಿಮಿಟೆಡ್ :** ಸ್ಥಾಪಕರ ದಿನಾಚರಣೆ ಸ್ಮರಣಾರ್ಥ ರಕ್ತದಾನ ಶಿಬಿರ, ಸ್ಥಳ: ಕೇನ್ಸ್ ಟೆಕ್ನಾಲಜಿ ಇಂಡಿಯಾ ಲಿಮಿಟೆಡ್, ಬೆಳಗೊಳ ಕೈಗಾರಿಕಾ ಪ್ರದೇಶ, ಬೆಳಗ್ಗೆ 9 ರಿಂದ.

■ **ದಿ ಏನ್ಷಿಯೆಂಟ್ ಟೈಮ್ಸ್ :** ಕಾಯಿನ್ ಶೋ ಇಂಡಿಯಾ–2023, ಸ್ಥಳ: ಕನ್ಯಾಕಾ ಮಹಲ್, ಅಶೋಕ ರಸ್ತೆ, ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಹತ್ತಿರ, ಬೆಳಗ್ಗೆ 10 ರಿಂದ.

■ **ಫೆಸ್ಟಿವಾ :** ಫ್ಯಾಷನ್ ಮತ್ತು ಲೈಫ್‌ಸ್ಟೈಲ್ ಕರಕುಶಲ ಉಡುಪಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ವಿಂಡ್ ಚಿಮ್ಸ್ ಹೋಟೆಲ್, ವಸಂತ ಮಹಲ್ ರಸ್ತೆ, ಬೆಳಗ್ಗೆ 10 ರಿಂದ.

■ **ಎನ್‌ಎಸ್‌ಯುಐ :** ಮಾಜಿ ಸಂಸದ ದಿವಂಗತ ಆರ್. ಧ್ರುವನಾರಾಯಣ್ ನೆನಪಿನೋತ್ಸವದ ಅಂಗವಾಗಿ ರಕ್ತದಾನ, ನೇತ್ರದಾನ, ಕಣ್ಣಿನ ತಪಾಸಣೆ ಶಿಬಿರ, ಸ್ಥಳ: ಕಾಂಗ್ರೆಸ್ ಭವನ, ಬೆಳಗ್ಗೆ 10 ರಿಂದ.

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಮಹಾಬೋಧಿ ಶಾಲೆ :** ಸ್ಟೆಮ್ ಫಿಟ್ ಪಾರಿತೋಷಕ ವಿತರಣಾ ಸಮಾರಂಭ, ಸಾನ್ನಿಧ್ಯ : ಆನಂದ ಭಂತೇಜಿ, ಮುಖ್ಯ ಅತಿಥಿಗಳು : ಡಾ. ಜಿಮ್ ಲೀ, ಗಣೇಶ್ ಕೋರಮನ್ನಿಲ್, ಪುಷ್ಪ ರಿಚರ್ಡ್ಸ್, ಉಪಸ್ಥಿತರು : ಭಿಕ್ಕು ಧಮ್ಮಬೋಧಿ, ಭಿಕ್ಕು ಶೋಭನಾ, ಜಿಕ್‌ಮೆಟ್ ವಾಂಗ್‌ಡಸ್ ಜ್ಯೋತಿ, ವಿ. ವೆಂಕಟೇಶ್ವರಲು, ಪಿ.ಆರ್. ದ್ವಾರಕೀಶ್, ಸ್ಥಳ: ಮಹಾಬೋಧಿ ಶಾಲೆ ಆವರಣ, ಬೆಳಗ್ಗೆ 10.30ಕ್ಕೆ.

■ **ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು :** ಲೇಖಕ, ಚಿಂತಕ, ವಿಮರ್ಶಕರಾದ ಡಾ. ಪುರುಷೋತ್ತಮ ಬಿಳಿಮಲೆಯವರಿಂದ ವಿಶೇಷ ಉಪನ್ಯಾಸ, ಸ್ಥಳ: ಲಲಿತ ಕಲಾ ಕಾಲೇಜು ಆವರಣ, ಬೆಳಗ್ಗೆ 10.30 ರಿಂದ.

■ **ಅಭಿವೃದ್ಧಿ :** ಸಿಲ್ಕ್ ಇಂಡಿಯಾ–2023, ಪರಿಶುದ್ಧ ಸಿಲ್ಕ್ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ ರಾತ್ರಿ 8.30ರವರೆಗೆ.

■ **ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ :** ಗೃಹ ಜ್ಯೋತಿ ಯೋಜನೆಗೆ ಚಾಲನೆ, ಉಚಿತ ಬೆಳಕು, ಸುಸ್ಥಿರ ಬದುಕು, ಉದ್ಘಾಟನೆ : ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು: ಸಚಿವರಾದ ಕೆ. ವೆಂಕಟೇಶ್, ಕೆ.ಜೆ. ಜಾರ್ಜ್, ಅಧ್ಯಕ್ಷತೆ: ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಶ್ರೀಮತಿ ಸುಮಲತಾ ಅಂಬರೀಷ್, ಸ್ಥಳ: ಕಲಾಮಂದಿರ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಕನ್ನಡ ಚಳವಳಿ ಕೇಂದ್ರ ಸಮಿತಿ, ಕನ್ನಡ ಸಾಹಿತ್ಯ ಕಲಾಕೂಟ :** ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮ, ಚಾಲನೆ : ಹಿರಿಯ ರಂಗಕರ್ಮಿ ಜನಾರ್ಧನ್ (ಜನ್ನಿ), ನಿವೃತ್ತ ಪ್ರಾಧ್ಯಾಪಕ ಡಾ. ಪುರುಷೋತ್ತಮ ಬಿಳಿಮಲೆ ಅವರಿಂದ ರಾಜಧಾನಿಯಲ್ಲಿ ಕನ್ನಡ–ಕರ್ನಾಟಕ ಕುರಿತು ಉಪನ್ಯಾಸ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ಮೂಗೂರು ನಂಜುಂಡಸ್ವಾಮಿ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಶೋಧ ಅನುಶೋಧ–ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರ್ ಉಮೇಶ್, 7.15 ಭಾವಗೀತೆಗಳು –ಆರ್. ರಮಾದೇವಿ, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಬಾನುಲಿ ಸರಣಿ. ನೆಲೆ ಸಂಸ್ಥೆ ಕುರಿತು ಶ್ರೀಪತಿ ಎ. ಅವರೊಂದಿಗೆ ಸಂವಾದ, ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 9.05 ವಸುಧೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00ಕೆ.ಎಸ್. ಹೇರಂಬ ಮತ್ತು ಹೇಮಂತ್ ಕೆ.ಎಸ್.–ಯುಗಳ ವೇಣುವಾದನ, 11.00 ಸ್ವರಾಜ್– ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ

ಮಧ್ಯಾಹ್ನ: 12.30 ದೇವರನಾಮ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಎಸ್.ಜಿ. ರಘುರಾಂ, ರೋಹಿಣೀ ಮೋಹನ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30 ಮಕ್ಕಳ ಮಂಟಪ–ವಿಶ್ವ ಪ್ರಜ್ಞಾ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.30 ನೆನಪಿನಂಗಳ–ಖ್ಯಾತ ಸಂಗೀತ ವಿದ್ವಾಂಸರಾದ ಡಾ.ಬಿ.ದೇವೇಂದ್ರಪ್ಪ ಅವರೊಂದಿಗೆ ಆರ್. ಗುರುರಾಜುಲು ನಾಯ್ಡು ಅವರು ನಡೆಸಿದ್ದ ಸಂವಾದ. ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ–ಎನ್. ಕೇಶವಮೂರ್ತಿ, ಡಾ. ಮೈಸೂರು ಉಮೇಶ್, ಆರ್. ಲೋಕೇಶ್ವರಿ, ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.00 ಇಸ್ ಸಪ್ತಾಹ್ ಸಂಸದ್ ಮೇ, 8.15 ಯುವವಾಣಿ–ಮೈಸೂರಿನ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ವಿದ್ಯಾರ್ಥಿಗಳಿಂದ ಸಂಗೀತ ವೈವಿಧ್ಯ, 9.30 ಕೈಮಗ್ಗದ ಉದ್ಯಮಿ ಜಿ. ಶ್ರೀಧರ ಅವರೊಡನೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

■ **ಐಇಇಇ, ಮೈಸೂರು ಉಪ ವಿಭಾಗ :** ಐಇಇಇ ಇಂಡಿಸ್‌ಕಾನ್–2023 ಅಂತಾರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ : ಡಾ. ಸೈಫುರ್ ರೆಹಮಾನ್, ಸ್ಥಳ: ಜಿಎಸ್‌ಎಸ್‌ಎಸ್ ಮಹಿಳಾ ಇಂಜಿನಿಯರಿಂಗ್ ಕಾಲೇಜು, ಮಧ್ಯಾಹ್ನ 2ಕ್ಕೆ.

■ **ಮಂಥನ ಮೈಸೂರು :** ಜನಸಂಖ್ಯೆ ಅಸಮತೋಲನ ಹಾಗೂ ರಾಷ್ಟ್ರೀಯ ಸುರಕ್ಷತೆ ಮೇಲೆ ಅದರ ಪರಿಣಾಮ ಕುರಿತು ಕೇರಳದ ನಿವೃತ್ತ ಡಿಜಿಪಿ ಎಂ.ಎನ್.ಕೃಷ್ಣಮೂರ್ತಿ ಹಾಗೂ ಕರ್ನಾಟಕ ಸರಕಾರದ ಮಾಜಿ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಎಂ ಮದನ್ ಗೋಪಾಲ್ ಅವರೊಂದಿಗೆ ಸಂವಾದ, ಸ್ಥಳ: ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಎಸ್.ಪಿ. ಭಟ್ ಹಾಲ್, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸರಗೂರು ರಮೇಶ್ ಅವರಿಂದ ಪತಿತಪಾವನ ಶ್ರೀರಾಮಕೃಷ್ಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಯಜ್ಞ, ವಿದ್ವಾನ್ ಬಿದರಹಳ್ಳಿ ಕೃಷ್ಣಾಚಾರ್ಯ ಅವರಿಂದ ಅರಣ್ಯಕಾಂಡ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಕೃಷ್ಣಮೂರ್ತಿಪುರಂ. ಸಂಜೆ 6 ರಿಂದ 7ರವರೆಗೆ.

■ **ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ನೂಪುರೋತ್ಸವ, ಸಂಜೆ 6.30 ರಿಂದ ವಿದ್ವಾನ್ ಕೆ.ಆರ್. ವಿಶ್ವದೀಪ್ ಅವರಿಂದ (ಪ್ರೊ. ಕೆ. ರಾಮಮೂರ್ತಿರಾವ್ ಅವರ ಪುತ್ರ ಮತ್ತು ಶಿಷ್ಯ) ಭರತನಾಟ್ಯ, ಸಂಜೆ 7.30 ರಿಂದ ಅಂತಾರಾಷ್ಟ್ರೀಯ ಕಲಾವಿದ ಆಪ್ತಮಿತ್ರ ಖ್ಯಾತಿಯ ವಿದ್ವಾನ್ ಶ್ರೀಧರ್ ಜೈನ್‌ರವರ ಶಿಷ್ಯ ವೃಂದದವರಿಂದ ನೃತ್ಯ ವೈಭವ, ಸ್ಥಳ: ಗಾನಭಾರತೀ, ರಮಾಗೋವಿಂದ ಕಲಾವೇದಿಕೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಸೈಡ್ ವಿಂಗ್ ತಂಡ, ಬೆಂಗಳೂರು :** ಬೀಚಿ ರಚನೆಯ 'ಸೀತೂ ಮದುವೆ' ನಾಟಕ ಪ್ರದರ್ಶನ, ನಿರ್ದೇಶನ ; ಎಂ.ಎಂ. ಶೈಲೇಶ್‌ಕುಮಾರ್, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 6.30ಕ್ಕೆ

■ **ಸಂಚಲನ ಮೈಸೂರು :** ಬೆಂಗಳೂರಿನ ರಂಗಚಕ್ರ ಕಲಾವಿದರಿಂದ ಬಿ.ಎಂ.ಶ್ರೀಯವರ ಅಶ್ವತ್ಥಾಮನ್ ನಾಟಕ ಪ್ರದರ್ಶನ, ನಿರ್ದೇಶನ : ಮಧು ಮಳವಳ್ಳಿ, ಉಪಸ್ಥಿತರು : ರಂಗಾಯಣ ಮಾಜಿ ನಿರ್ದೇಶಕ ಹೆಚ್. ಜನಾರ್ಧನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಡಾ. ವಿದುಷಿ ಶಾಂಭವಿಸ್ವಾಮಿ, ರಂಗನಿರ್ದೇಶಕರಾದ ಶ್ರೀಮತಿ ರಜನಿ ಗರುಡ, ಸಂಚಲನ ಅಧ್ಯಕ್ಷ ದೀಪಕ್ ಮೈಸೂರು, ಸ್ಥಳ: ಕಿರು ರಂಗಮಂದಿರ, ಸಂಜೆ 6.30ಕ್ಕೆ.

TVS Ambari TVS Ride With Pride
StaR city+
₹ 2500/- CASH BACK OFFER
*T & C Apply
Low Down Payment of ₹ 7999/-*
Main Branch: New Sayyaji Rao Road,Bamboo Bazar
Kadakola Branch: KIADB main road,Kadakola
9019172160, 9964021500 | www.ambaritvs.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 5 ಶನಿವಾರ 2023

ಸಂಪುಟ: 44 | ಸಂಚಿಕೆ: 111 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಸ್ಪೆಕ್ ಟ್ರಾ ಕನ್ವೆನ್ಷನ್ ಸೆಂಟರ್
Hunsur Road, MYSORE
Ph: 0821-2416419 / 95354 91919

ಸರ್ಕಾರಿ ಭೂಮಿ ಒತ್ತುವರಿ ತೆರವಿಗೆ ಕಟ್ಟುನಿಟ್ಟಿನ ಕ್ರಮ

● ಅಧಿಕಾರಿಗಳಿಗೆ ಗಡುವು ನಿಗಧಿ ● ಸಮಿತಿಗಳ ವರದಿ, ದಾಖಲೆ ಆಧರಿಸಿ ತೆರವು ಕಾರ್ಯಾಚರಣೆ
● ರೆವೆನ್ಯೂ ಇನ್ಸ್‌ಪೆಕ್ಟರ್‌ಗಳಿಗೆ ತೆರವು, ಸಂರಕ್ಷಣೆ ಅಧಿಕಾರ ● ಕಂದಾಯ ಸಚಿವ ಕೃಷ್ಣಬೈರೇಗೌಡ ಮಾಹಿತಿ



ಬೆಂಗಳೂರು, ಆ.4(ಕೆಎಂಶಿ)–ರಾಜ್ಯಾದ್ಯಂತ ಒತ್ತುವರಿಯಾಗಿರುವ ಸರ್ಕಾರಿ ಭೂಮಿಯನ್ನು ತೆರವುಗೊಳಿಸಲು ಅಧಿಕಾರಿಗಳಿಗೆ ಗಡುವು ನಿಗದಿ ಮಾಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಇಂದಿಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಲಸುಬ್ರಮಣ್ಯಂ, ಎ.ಟಿ.ರಾಮಸ್ವಾಮಿ ಹಾಗೂ ನಮ್ಮಲ್ಲಿರುವ ದಾಖಲೆಗಳನ್ನು ಮುಂದಿಟ್ಟುಕೊಂಡು ಒತ್ತುವರಿ ತೆರವುಗೊಳಿಸಲಾಗುವುದು. ಯಾರು, ಎಷ್ಟೇ ಪ್ರಭಾವಿಗಳು ಒತ್ತುವರಿ ಮಾಡಿದ್ದರೂ ಅವುಗಳನ್ನು ತೆರವುಗೊಳಿಸಿ ಸಂರಕ್ಷಣೆ ಮಾಡುವ ಅಧಿಕಾರವನ್ನು ರೆವೆನ್ಯೂ ಇನ್ಸ್‌ಪೆಕ್ಟರ್‌ಗಳಿಗೆ ನೀಡಲಾಗುವುದು. ಈಗಾಗಲೇ ನಾವು ರಾಜ್ಯಾದ್ಯಂತ ಪ್ರವಾಸ ಕೈಗೊಂಡು, ವಿಭಾಗ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಸಭೆ ನಡೆಸಿ ಒತ್ತುವರಿ ತೆರವಿಗೆ ಸಲಹೆ ಸೂಚನೆ ಹಾಗೂ ಗಡುವು ನೀಡಲಾಗಿದೆ. ಬೆಂಗಳೂರು ನಗರ ● 6ನೇ ಪುಟಕ್ಕೆ

ರಾಜ್ಯಾದ್ಯಂತ 14.62 ಲಕ್ಷ ಎಕರೆ ಸರ್ಕಾರಿ ಭೂಮಿ ಕಬಳಿಕೆ

ಮೈಸೂರು ಜಿಲ್ಲೆಯಲ್ಲಿ 42,621 ಎಕರೆ, ಚಾಮರಾಜನಗರದಲ್ಲಿ 11,355 ಎಕರೆ, ಕೊಡಗಿನಲ್ಲಿ 42887 ಎಕರೆ, ಮಂಡ್ಯದಲ್ಲಿ 33,547, ಹಾಸನದಲ್ಲಿ 74737 ಎಕರೆ

■ ಇದರ ಮೌಲ್ಯ ಲಕ್ಷಾಂತರ ಕೋಟಿ
■ ಬೆಂಗಳೂರು ಜಿಲ್ಲೆಯಲ್ಲೇ ಹೆಚ್ಚು



ಬೆಂಗಳೂರು, ಆ.4(ಕೆಎಂಶಿ)–ರಾಜ್ಯಾದ್ಯಂತ 14.62ಲಕ್ಷ ಎಕರೆ ಸರ್ಕಾರಿ ಭೂಮಿ ಒತ್ತುವರಿಯಾಗಿದೆ. ಇದರ ಬೆಲೆ ಲಕ್ಷಾಂತರ ಕೋಟಿ ರೂ. ಆಗಲಿದೆ. ಇದನ್ನು ತೆರವುಗೊಳಿಸಲು ಕಂದಾಯ ಇಲಾಖೆ ಕಠಿಣ ನಿರ್ಧಾರ ಕೈಗೊಳ್ಳಲು ಮುಂದಾಗಿದೆ. ಬಾಲಸುಬ್ರಮಣ್ಯ, ಎ.ಟಿ.ರಾಮಸ್ವಾಮಿ ಹಾಗೂ ಇತರೆ ಸರ್ಕಾರಿ ವರದಿಗಳ ಆಧಾರದ ಮೇಲೆ ಇಷ್ಟು ದೊಡ್ಡ ಪ್ರಮಾಣದ ಒತ್ತುವರಿಯಾಗಿರುವುದು ಪತ್ತೆಯಾಗಿದೆ. ಬೆಂಗಳೂರು ಮತ್ತು ಗ್ರಾಮಾಂತರ ಜಿಲ್ಲೆಯಲ್ಲೇ ಅಧಿಕ ಪ್ರಮಾಣದಲ್ಲಿ ಬಲಾಢ್ಯರು ಒತ್ತುವರಿ ಮಾಡಿದ್ದಾರೆ. ರಾಜ್ಯದ ಸಾಂಸ್ಕೃತಿಕ ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲೂ ಭಾರೀ ಬೆಲೆ ಬಾಳುವ ಭೂಮಿ ಒತ್ತುವರಿಯಾಗಿದೆ.

ಆ.8ಕ್ಕೆ ಮೈಸೂರಲ್ಲಿ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆ

ಮೈಸೂರು, ಆ.4–ಮೈಸೂರು ವಿಭಾಗದ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆ ಕಂದಾಯ ಸಚಿವ ಕೃಷ್ಣಬೈರೇಗೌಡ ಅಧ್ಯಕ್ಷತೆಯಲ್ಲಿ ಆ.8 ರಂದು ಮೈಸೂರಿನಲ್ಲಿ ನಡೆಯಲಿದೆ.

ಅಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯ ಚಾಮುಂಡೇಶ್ವರಿ ಸಭಾಂಗಣದಲ್ಲಿ ನಡೆಯಲಿರುವ ಈ ಸಭೆಯಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಕಂದಾಯ ಇಲಾಖೆ ವಿಪತ್ತು ನಿರ್ವಹಣೆ ವಿಭಾಗದ ಪ್ರಧಾನ ಕಾರ್ಯದರ್ಶಿಗಳು ಉಪಸ್ಥಿತರಿರುವರು. ಕಂದಾಯ ಇಲಾಖೆಯ ವಿವಿಧ ಯೋಜನೆಗಳ ಕುರಿತು ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರು ಹಾಗೂ ಈ ವಿಭಾಗದ ಎಲ್ಲಾ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ರಾಹುಲ್ ಗಾಂಧಿಗೆ ಬಿಗ್ ರಿಲೀಫ್

2 ವರ್ಷದ ಜೈಲು ಶಿಕ್ಷೆಗೆ 'ಸುಪ್ರೀಂ' ಮಧ್ಯಂತರ ತಡೆ



ನವದೆಹಲಿ, ಆ.4–ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ 'ಮೋದಿ ಉಪನಾಮ' ಹೇಳಿಕೆಗೆ ಸಂಬಂಧಿಸಿದಂತೆ ಮಾನನಷ್ಟ ಮೊಕದ್ದಮೆಯಲ್ಲಿ ಗುಜರಾತ್ ಹೈಕೋರ್ಟ್ ನೀಡಿದ್ದ 2 ವರ್ಷಗಳ ಶಿಕ್ಷೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆ ನೀಡಿದೆ.

ಇದೀಗ ರಾಹುಲ್ ಗಾಂಧಿ ಸಂಸದ ಸ್ಥಾನದ ಅನರ್ಹತೆಯಿಂದ ಬಚಾವ್ ಆಗಿದ್ದು, ಕೇರಳದ ವೈಯನಾಡು ಲೋಕಸಭಾ ಕ್ಷೇತ್ರದ ಸಂಸದರಾಗಿ ಮುಂದುವರಿಯಲಿದ್ದಾರೆ. ಪ್ರಕರಣ ಸಂಬಂಧ ಗುಜರಾತ್ ಹೈಕೋರ್ಟ್ ನೀಡಿದ್ದ ಶಿಕ್ಷೆಗೆ ತಡೆ ಕೋರಿ ರಾಹುಲ್ ಗಾಂಧಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಮೋದಿ ಉಪನಾಮ ಟೀಕೆಗೆ ಸಂಬಂಧಿಸಿದಂತೆ ಮಾನನಷ್ಟ ಮೊಕದ್ದಮೆಯಲ್ಲಿ ಶಿಕ್ಷೆಯನ್ನು ತಡೆಹಿಡಿಯಲು ನಿರಾಕರಿಸಿದ ಗುಜರಾತ್ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಲ್ಲಿಸಿದ ● 6ನೇ ಪುಟಕ್ಕೆ



ನವದೆಹಲಿಯಲ್ಲಿ ಕಾಂಗ್ರೆಸ್ ಪ್ರಧಾನ ಕಚೇರಿಗೆ ಆಗಮಿಸಿದ ರಾಹುಲ್‌ಗಾಂಧಿ ಅವರನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಭಿನಂದಿಸಿದರು.

ಸತ್ಯಕ್ಕೆ ಇಂದಲ್ಲಾ ನಾಳೆ ಗೆಲುವು ಸಿಕ್ಕೇ ಸಿಗುತ್ತೆ

ನವದೆಹಲಿ: ಮಾನನಷ್ಟ ಮೊಕದ್ದಮೆಯಲ್ಲಿ ರಾಹುಲ್ ಗಾಂಧಿ ಅವರಿಗೆ ಗುಜರಾತ್ ಹೈಕೋರ್ಟ್ ನೀಡಿದ್ದ 2 ವರ್ಷಗಳ ಜೈಲು ಶಿಕ್ಷೆಗೆ ಸುಪ್ರೀಂಕೋರ್ಟ್ ಶುಕ್ರವಾರ ತಡೆ ನೀಡಿರುವುದಕ್ಕೆ ಕಾಂಗ್ರೆಸ್ ಪಾಳಯದಲ್ಲಿ ಸಂಭ್ರಮ ಮನೆ ಮಾಡಿದೆ. ಸುಪ್ರೀಂಕೋರ್ಟ್ ತೀರ್ಪು ಹೊರಬೀಳುತ್ತಿದ್ದಂತೆಯೇ ಎಐಸಿಸಿ ಪ್ರಧಾನ ಕಚೇರಿ ಬಳಿ ಜಮಾಯಿಸಿದ್ದ ಪಕ್ಷದ ಸಾವಿರಾರು ಕಾರ್ಯಕರ್ತರು ಸಿಹಿ ಹಂಚಿ, ಡೊಳ್ಳು ಬಾರಿಸುತ್ತಾ ಕುಣಿದು, ಕುಪ್ಪಳಿಸಿದರು. ಪ್ರಿಯಾಂಕಾ ಗಾಂಧಿ ಅವರೊಂದಿಗೆ ಎಐಸಿಸಿ ಕಚೇರಿಗೆ ಆಗಮಿಸಿದ ರಾಹುಲ್ ಗಾಂಧಿ ಅವರಿಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಿಹಿ ತಿನ್ನಿಸುವ ಮೂಲಕ ಸಂಭ್ರಮ ಹಂಚಿಕೊಂಡರು. ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಹುಲ್ ಗಾಂಧಿ, ಒಂದಲ್ಲಾ ಒಂದು ದಿನ ಸತ್ಯಕ್ಕೆ ಗೆಲುವು ಸಿಕ್ಕೆ ಸಿಗುತ್ತೆ ಇವತ್ತಲ್ಲದಿದ್ದರೆ ನಾಳೆ ಅಥವಾ ನಾಡಿದ್ದು ಜಯ ಸಿಗುತ್ತದೆ. ● 6ನೇ ಪುಟಕ್ಕೆ

22 ಕ್ಯಾರೆಟ್ ಚಿನ್ನದ ದರ @ ತೊಳಸಿ
ತೊಳಸಿ THOLASI JEWELS
₹ 5495/-
ಆಶೋಕ ರಸ್ತೆ, ಮೈಸೂರು. ಫೋ: 0821-2521926,
ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು.
ಫೋ: 0821-2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು.
ನಂಜನಗೂಡು. ಫೋ: 08221-200926

DGF JEWELLERS
NO Wastage Making Charges ₹ 5350
916 Hall Mark
ಚಿನ್ನದ ಒಡವೆಗಳನ್ನು ಖರೀದಿಸಿಕೊಳ್ಳಿ
8884171888

SDJ GOLD
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ 6600
8884304444

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ, ಮಹಿಳೆ ಮತ್ತು ಪುರುಷರು ಟೆಲಿಕಾಲರ್ಸ್ ಬೇಕಾಗಿದ್ದಾರೆ.
ಸಮಯ: 6-2 ಮತ್ತು 2-10 ರವರೆಗೆ ಶಿಫ್ಟ್‌ನಲ್ಲಿ ಕೆಲಸ.
ಸಂಬಳ:15,000-16,000
9743000798

ಬಿಪಿಎಲ್ ಪಡಿತರ ಚೀಟಿ ದುರುಪಯೋಗ: ಸಮಗ್ರ ತನಿಖೆ

● ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ಎಚ್ಚರಿಕೆ ● ಅನ್ನಭಾಗ್ಯ ದುರುಪಯೋಗ ಸಂಬಂಧವೂ ಕಠಿಣ ಕ್ರಮ ● ಬಿಪಿಎಲ್ ಕಾರ್ಡ್ ಕೋರಿ ಜುಲೈ ಅಂತ್ಯಕ್ಕೆ 318907 ಅರ್ಜಿ ● ಪಡಿತರ ಚೀಟಿ ತಿದ್ದುಪಡಿ, ಸೇರ್ಪಡೆ ರದ್ದತಿಗೆ ತಿಂಗಳು ಕಾಲಾವಕಾಶ ● ಸೆಪ್ಟೆಂಬರ್‌ನಿಂದ ಹಣದ ಬದಲು ಅಕ್ಕಿ ವಿತರಣೆ

ಬೆಂಗಳೂರು, ಆ.4(ಕೆಎಂಶಿ)–ಅನ್ನಭಾಗ್ಯ ಯೋಜನೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಪ್ರಕಟಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲಾಖೆಗಿರುವ ಪ್ರಾಥಮಿಕ ಮಾಹಿತಿ ಆಧಾರದ ಮೇಲೆ ಬಿಪಿಎಲ್ ಪಡಿತರ ಚೀಟಿ ದುರುಪಯೋಗದ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು ಎಂದರು. ತನಿಖಾ ವರದಿ ಬರುತ್ತಿದ್ದಂತೆ ಸರ್ಕಾರದ ನಿಯಮಾವಳಿಗೆ ವಿರುದ್ಧವಾಗಿ ಪಡಿತರ ಚೀಟಿ ಪಡೆದಿದ್ದರೆ, ಅಂಥವರಿಗೆ ಶಿಕ್ಷೆ ಕಾದಿದೆ. ಬಿಪಿಎಲ್ ಪಡಿತರ ಚೀಟಿ ಕೋರಿ ಜುಲೈ ಅಂತ್ಯಕ್ಕೆ 318907 ಅರ್ಜಿಗಳು ಬಾಕಿ ಇವೆ. ಅದರ ಜತೆಗೆ ಪಡಿತರ ಚೀಟಿಯಲ್ಲಿ ತಿದ್ದುಪಡಿ, ಸೇರ್ಪಡೆ, ರದ್ದತಿಗೆ ಒಂದು ತಿಂಗಳ ಕಾಲಾವಕಾಶ ನೀಡಲಾಗುವುದು.



ಇದೇ ವೇಳೆಗೆ ಅರ್ಜಿದಾರರಿಗೆ ಹೊಸ ಪಡಿತರ ಚೀಟಿ ನೀಡಲು ಕ್ರಮ ಕೈಗೊಳ್ಳಲಾಗುವುದು. ಈ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಉಳ್ಳವರು ಪಡಿತರ ಚೀಟಿ ಹೊಂದಿದ್ದರೆ, ಅಂಥವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ತಿದ್ದುಪಡಿ, ಸೇರ್ಪಡೆ ಮತ್ತು ರದ್ದತಿಗೆ ಇದೇ ಕಾರಣಕ್ಕೆ ಕಾಲಾವಕಾಶ ನೀಡಿದ್ದೇವೆ. ಆ ಸಮಯದಲ್ಲಿ ಅರ್ಹರಲ್ಲದವರು, ಸ್ವ ಇಚ್ಛೆಯಿಂದ ಪಡಿತರ ಚೀಟಿಗಳನ್ನು ಹಿಂದಿರುಗಿಸಬೇಕು ಎಂದು ಸಲಹೆ ಮಾಡಿದರು.

ಕೇವಲ 25 ದಿನದಲ್ಲೇ ಒಂದು ಕೋಟಿ ಕುಟುಂಬಗಳಿಗೆ 566 ಕೋಟಿ ರೂ.ಗಳನ್ನು ಅವರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗಿದೆ. ಹೆಚ್ಚುವರಿ 5 ಕೆ.ಜಿ. ಅಕ್ಕಿ ಬದಲು ತಲಾ 170 ರೂ.ವನ್ನು ಮಾಸಿಕವಾಗಿ ನೀಡಲಾಗುತ್ತಿದೆ. ತೆಲಂಗಾಣ ಹಾಗೂ ಆಂಧ್ರಪ್ರದೇಶ ರಾಜ್ಯಗಳು ಅಕ್ಕಿ ನೀಡಲು ಮುಂದೆ ಬಂದಿವೆ. ಭಾರತೀಯ ಆಹಾರ ನಿಗಮ ನಿಗದಿಪಡಿಸಿರುವ ದರದಲ್ಲಿ ಅಕ್ಕಿ ನೀಡಿದರೆ ಪಡೆಯಲಾಗುವುದು.

ಹಣದ ಬದಲು ಅಕ್ಕಿ: ಆ ರಾಜ್ಯಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದ್ದು, ಇನ್ನೊಂದು ವಾರದಲ್ಲಿ ಅಂತಿಮ ರೂಪ ದೊರೆಯಲಿದೆ. ಹೀಗಾಗಿ ಸೆಪ್ಟೆಂಬರ್‌ನಿಂದ ಹಣದ ಬದಲು ತಲಾ 10 ಕೆ.ಜಿ. ಅಕ್ಕಿ ನೀಡಲಾಗುವುದು ಎಂದರು. ರಾಜ್ಯದ 28 ಲಕ್ಷ ಕುಟುಂಬಗಳ ಪಡಿತರ ಚೀಟಿಗಳು ಆಧಾರ್ ಹಾಗೂ ಬ್ಯಾಂಕ್ ಖಾತೆ ಸಂಪರ್ಕ ಹೊಂದಿಲ್ಲ. ಜುಲೈನಲ್ಲಿ 170 ಕ್ಯಾಂಪ್ ಮಾಡಿ 119502 ಹೊಸ ಬ್ಯಾಂಕ್ ಖಾತೆ ತೆರೆಯಲಾಗಿದೆ.

ವೈದ್ಯಕೀಯ ಕಾರಣಕ್ಕೆ ಹೊಸ ಪಡಿತರ ಚೀಟಿ: ತುರ್ತು ವೈದ್ಯಕೀಯ ಕಾರಣಗಳಿಗೆ ಹೊಸ ಪಡಿತರ ಚೀಟಿ ನೀಡಲು ಅನುಮತಿ ನೀಡಲಾಗುವುದು. ಆಂಧ್ರಪ್ರದೇಶದಲ್ಲಿ ಆಹಾರಧಾನ್ಯ ಪಡೆಯುವವರಿಗೆ ಎ ಕಾರ್ಡ್, ವೈದ್ಯಕೀಯ ಚಿಕಿತ್ಸೆಗಾಗಿ ಬಿ ಕಾರ್ಡ್ ನೀಡಲಾಗುತ್ತಿದೆ.

ಬೆಂಬಲ ಬೆಲೆಗೆ ಕೋರಿಕೆ: ಇಲಾಖೆ ಅಧಿಕಾರಿಗಳ ತಂಡ ಕಳುಹಿಸಿ ವರದಿ ಪಡೆದು ರಾಜ್ಯದಲ್ಲೂ ಅನುಷ್ಠಾನ ಮಾಡಲು ಕ್ರಮ ವಹಿಸಲಾಗುವುದು. ರಾಗಿ ಬೆಂಬಲ ಬೆಲೆ 5ಸಾವಿರ ರೂ.ಗೆ ಹಾಗೂ ಜೋಳ ಬೆಂಬಲ ಬೆಲೆಯನ್ನು 4500 ರೂ.ಗೆ ಹೆಚ್ಚಿಸಲು ಕೇಂದ್ರ ಸಚಿವರನ್ನು ಕೋರಲಾಗಿದೆ. ಪಡಿತರ ವಿತರಣಾ ವ್ಯವಸ್ಥೆಯಡಿ ವಿತರಿಸಲು 8 ಲಕ್ಷ ಟನ್ ರಾಗಿ ಹಾಗೂ 3 ಲಕ್ಷಟನ್ ಜೋಳ ಖರೀದಿಸುವ ಬಗ್ಗೆ ಚರ್ಚೆ ನಡೆದಿದೆ ಎಂದರು. ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮೂಲಕ ರಾಜ್ಯ ಸರ್ಕಾರ ನೀಡುವ 14 ಲಕ್ಷ ಬಿಪಿಎಲ್ ಪಡಿತರ ಚೀಟಿದಾರರಿಗೆ 20 ಲಕ್ಷ ಟನ್ ಆಹಾರಧಾನ್ಯ ಖರೀದಿಸುತ್ತಿರುವುದಾಗಿ ಅವರು ಹೇಳಿದರು.

ಲೋಕಸಭಾ ಚುನಾವಣೆಗೆ ತಿಂಗಳಲ್ಲಿ ಅಭ್ಯರ್ಥಿಗಳ ಆಯ್ಕೆ ಮಾಡಿ

ಬೆಂಗಳೂರು, ಆ.4(ಕೆಎಂಶಿ)–ಮುಂಬರುವ ಲೋಕಸಭಾ ಚುನಾವಣೆಗೆ ಇನ್ನೊಂದು ತಿಂಗಳೊಳಗೆ ಸಂಭವನೀಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಎಂದು ಕಾಂಗ್ರೆಸ್ ವರಿಷ್ಠರು ರಾಜ್ಯ ನಾಯಕರಿಗೆ ತಾಕೀತು ಮಾಡಿದ್ದಾರೆ. ಲೋಕಸಭೆ ಚುನಾವಣೆ ಹಾಗೂ ರಾಜ್ಯ ಸರ್ಕಾರದ ಕಾರ್ಯವೈಖರಿಗೆ ಸಂಬಂಧಿಸಿದಂತೆ ಕಳೆದ ಬುಧವಾರ ದೆಹಲಿಯಲ್ಲಿ ಪಕ್ಷದ ವರಿಷ್ಠರು ನಡೆಸಿದ ಸಭೆಯಲ್ಲಿ ಈ ಆದೇಶ ಮಾಡಲಾಗಿದೆ. ಕಾಂಗ್ರೆಸ್ ಅಧಿನಾಯಕ ರಾಹುಲ್‌ಗಾಂಧಿ ಲೋಕಸಭಾ ಚುನಾವಣೆಗೆ ಏನೇನು ತಯಾರು ಮಾಡಿದ್ದೀರಿ. ರೂಟ್‌ಮ್ಯಾಪ್ ಸಿದ್ಧವಿದೆಯೇ ಎಂದು ಪ್ರಶ್ನಿಸಿದ್ದಾರೆ. ಅಭ್ಯರ್ಥಿ ಯಾರೆಂಬುದನ್ನು ಮೊದಲೇ ಗುರುತಿಸಿ ಚುನಾವಣಾ ಕಣಕ್ಕಿಳಿಸುವುದರಿಂದ ● 6ನೇ ಪುಟಕ್ಕೆ

ಗೃಹ ಇಲಾಖೆಯಲ್ಲಿ ವೈಎಸ್‌ಟಿ ಟ್ಯಾಕ್ಸ್ ದಂಧೆ; ಬಿಡಿಎಗೆ 250 ಕೋಟಿ ಟಾರ್ಗೆಟ್ ಫಿಕ್ಸ್

● ವಿದೇಶಿ ಪ್ರವಾಸದಿಂದ ಹಿಂದಿರುಗುತ್ತಲೇ ಕಾಂಗ್ರೆಸ್ ಸರಕಾರದ ವಿರುದ್ಧ ಹೆಚ್‌ಡಿಕೆ ಆರೋಪಗಳ ಸುರಿಮಳೆ ● ನಾನು ಪ್ರವಾಸ ಹೋಗಿದ್ದು ಯುರೋಪಿಗೇ ಹೊರತು ಸಿಂಗಾಪುರಕ್ಕೆ ಅಲ್ಲ...

ಬೆಂಗಳೂರು, ಆ. 4–ವಿದೇಶಿ ಪ್ರವಾಸದಿಂದ ಹಿಂದಿರುಗಿದ ತಕ್ಷಣವೇ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ವರ್ಗಾವಣೆ ದಂಧೆ, ಭ್ರಷ್ಟಾಚಾರ, ಕಮಿಷನ್ ಸಂಗ್ರಹದ ಬಗ್ಗೆ ಗುರುತರ ಆರೋಪಗಳನ್ನು ಮಾಡಿದ್ದಾರೆ.


ಕಳೆದ ರಾತ್ರಿ ಅವರು ಯುರೋಪ್ ಪ್ರವಾಸ ಮುಗಿಸಿಕೊಂಡು ಬೆಂಗಳೂರಿಗೆ ವಾಪಸ್ಸಾದರು. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತಮ್ಮನ್ನು ಭೇಟಿಯಾದ ಮಾಧ್ಯಮಗಳೊಂದಿಗೆ ಮಾತನಾಡಿದರು. ಕಾಂಗ್ರೆಸ್ ಪಕ್ಷ ಈಸ್ಟ್ ಇಂಡಿಯಾ ಪಕ್ಷದಂತೆ ರಾಜ್ಯವನ್ನು ಲೂಟಿ ಮಾಡುತ್ತಿದೆ. ಪೊಲೀಸ್ ವರ್ಗಾವಣೆಯಲ್ಲಿ ವೈಎಸ್‌ಟಿ ದಂಧೆಕೋರರು ಶಾಮೀಲಾಗಿದ್ದಾರೆ, ಬಿಡಿಎ ಅಧಿಕಾರಿಗಳಿಂದ 250 ಕೋಟಿ ರೂ. ಡಿಮ್ಯಾಂಡ್ ಮಾಡಲಾಗಿದೆ ಎಂಬುದು ಮಾಜಿ ಮುಖ್ಯಮಂತ್ರಿ ಅವರು ಮಾಡಿರುವ ಗಂಭೀರ ಆರೋಪಗಳು.

ದುಡ್ಡಿದ್ದರೆ ಮನೆ ಒಳಕ್ಕೆ ಬನ್ನಿ!: ರಾಜ್ಯದಲ್ಲಿ ಪರ್ಸಂಟೇಜ್ ಸಂಗ್ರಹ ವ್ಯಾಪಕವಾಗಿ ನಡೆಯುತ್ತಿದೆ. ಸಚಿವರೊಬ್ಬರು ನೇರವಾಗಿ ಗುತ್ತಿಗೆದಾರರಿಂದ ಕಮಿಷನ್ ಡಿಮ್ಯಾಂಡ್ ಮಾಡುತ್ತಿದ್ದಾರೆ. ಇತ್ತೀಚೆಗೆ ಆ ಸಚಿವರನ್ನು ಭೇಟಿಯಾಗಲು ಹೋಗಿದ್ದ ಗುತ್ತಿಗೆದಾರರಿಗೆ, ಹಣ ತಂದಿದ್ದರೆ ಒಳಕ್ಕೆ ಬನ್ನಿ, ಇಲ್ಲವಾದರೆ ಹೊರಗೆ ಇರಿ ಎಂದು ಆ ಸಚಿವರ ಚೇಲಾಗಳು ತಾಕೀತು ಮಾಡಿದ್ದಾರೆ. ಇವರು ಹೋಗಿ ದೆಹಲಿಯಲ್ಲಿ ಭ್ರಷ್ಟಾಚಾರ ಕಡಿಮೆ ಮಾಡುತ್ತೇವೆ ಎಂದು ರಾಹುಲ್‌ಗಾಂಧಿ ಅವರಿಗೆ ಹೇಳುತ್ತಾರೆ. ಇಂಥವರಿಂದ ರಾಜ್ಯದ ಉದ್ಧಾರ ಸಾಧ್ಯವೇ ಪಾರದರ್ಶಕ ಆಡಳಿತ ನೀಡಲು ಆಗುತ್ತದೆಯೇ ಎಂದು ಅವರು ಪ್ರಶ್ನಿಸಿದರು.

250 ಕೋಟಿಗೆ ಡಿಮ್ಯಾಂಡ್: ಬಿಡಿಎ ಅಧಿಕಾರಿಗಳಿಂದಲೂ ಹಣಕ್ಕೆ ಬೇಡಿಕೆ ಇಡಲಾಗಿದೆ. ದಿಲ್ಲಿಗೆ ಈ ಹಣ ಕಳಿಸಬೇಕು, ಕೊನೆ ಪಕ್ಷ 250 ಕೋಟಿ ರೂ. ಕಲೆಕ್ಷನ್ ಆಗಬೇಕು ಎಂದು ಅಧಿಕಾರಿಗಳಿಗೆ ಒಬ್ಬ ಮಹಾನುಭಾವ ತಾಕೀತು ಮಾಡುತ್ತಾರೆ. ದುಡ್ಡು ಯಾರಿಗೆ ಸೇರಬೇಕು ಅವರ ಪಟ್ಟಿ ಕೊಡುತ್ತೇವೆ, ಅವರಿಗೆ ನೇರವಾಗಿ ದುಡ್ಡು ತಲುಪಿಸಿ ಎಂದು ಹೇಳುತ್ತಾರಂತೆ. ನಾನು ಯುರೋಪ್‌ನಲ್ಲಿ ಇದ್ದಾಗಲೇ ಈ ಬಗ್ಗೆ ಮಾಹಿತಿ ಬಂತು ಎಂದು ಮಾಜಿ ಮುಖ್ಯಮಂತ್ರಿ ಚಾಟಿ ಬೀಸಿದರು. ಕಾಂಗ್ರೆಸ್ ಪಕ್ಷವು ಕರ್ನಾಟಕವನ್ನು ಈಸ್ಟ್ ಇಂಡಿಯಾ ಕಂಪನಿಯಂತೆ ● 6ನೇ ಪುಟಕ್ಕೆ



ಕುಮಾರಸ್ವಾಮಿಯದ್ದು ಹಿಟ್ ಅಂಡ್ ರನ್ ಕೇಸು



ಬೆಂಗಳೂರು, ಆ.4(ಕೆಎಂಶಿ)ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರದ್ದು ಯಾವಾಗಲೂ ಹಿಟ್ ಅಂಡ್ ರನ್ ಕೇಸು. ವೃಥಾ ಆರೋಪಗಳನ್ನು ಮಾಡುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿಯವರು ಇನ್ಸ್‌ಪೆಕ್ಟರ್ ವರ್ಗಾವಣೆ ವಿಚಾರದಲ್ಲಿ ವೈಎಸ್‌ಟಿ ಟ್ಯಾಕ್ಸ್ ಏಕೆ ಉಪಸ್ಥಿತರಿದ್ದರು ಎಂದು ಪ್ರಶ್ನಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಹಿಂದೆ ಪೆನ್‌ಡ್ರೈವ್ ತೋರಿಸಿದ್ದರು. ಅದನ್ನು ಸಾಬೀತು ಮಾಡಿದರೆ ಎಂದು ಪ್ರಶ್ನಿಸಿದ ಅವರು ಪೆನ್‌ಡ್ರೈವ್ ಇದ್ದರಲ್ಲವೇ ಹೊರಗೆ ಬಿಡುವುದು ಎಂದರು. ಅನ್ನಭಾಗ್ಯ ಯೋಜನೆಗೆ ಅಕ್ಕಿ ನೀಡುವ ಬಗ್ಗೆ ಈಗಾಗಲೇ ಪಿಯೂಶ್ ಗೋಯಲ್ ಅವರೊಂದಿಗೆ ಮಾತನಾಡಿದ್ದು, ಅಕ್ಕಿ ನೀಡುವುದಿಲ್ಲ ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ರಾಜಕೀಯ ಮಾಡಿದ್ದಾರೆ ಎಂದು ತಿಳಿಸಿದರು.

19 ಸ್ಥಾನ ಗೆದ್ದ ನಮ್ಮ ಕಂಡರೆ 136 ಗೆದ್ದವರಿಗೆ ಭಯ!

ನಾನು ಪ್ರವಾಸ ಹೋಗಿದ್ದು ಯುರೋಪ್ ದೇಶಗಳಿಗೆ. ನನ್ನ ಕುಟುಂಬ ಸದಸ್ಯರು, ಸಹೋದರ, ಸಹೋದರಿಯರ ಜತೆ ತೆರಳಿದ್ದೆ. ಆದರೆ ಇಲ್ಲಿ ಕುಮಾರಸ್ವಾಮಿ ಅವರು ಸಿಂಗಾಪುರಕ್ಕೆ ಹೋಗಿ ಸರಕಾರ ಕೆಡವಲು ಷಡ್ಯಂತ್ರ ಮಾಡುತ್ತಿದ್ದಾರೆ ಎಂದು ವದಂತಿ ಹಬ್ಬಿಸಿದರು. ಇದು ನಮ್ಮ ರಾಜ್ಯದ ಬೇಹುಗಾರಿಕೆ ಇಲಾಖೆ ಕೆಲಸ ಮಾಡುತ್ತಿರುವ ರೀತಿ ಎಂದು ಕುಮಾರಸ್ವಾಮಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು. ಕೇವಲ 19 ಕ್ಷೇತ್ರ ಗೆದ್ದಿರುವ ಕುಮಾರಸ್ವಾಮಿ ಬಗ್ಗೆ 136 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿರುವ ಕಾಂಗ್ರೆಸ್ ಪಕ್ಷಕ್ಕೆ ಭಯವಿದೆ. ಅವರಿಗೆ ಬಹುಮತ ಇದ್ದರೂ ಸುಸ್ಥಿರ ಸರಕಾರ ನೀಡಲು ಸಾಧ್ಯವಿಲ್ಲ. ಅವರು ಅಭದ್ರತೆಯ ಭಾವದಿಂದ ಬಳಲುತ್ತಿದ್ದಾರೆ ಎಂದು ಅವರು ಟೀಕಾ ಪ್ರಹಾರ ನಡೆಸಿದರು. ಡಿ.ಕೆ.ಶಿವಕುಮಾರ್ ಅವರು ಯಾಕೆ ಈ ರೀತಿ ಹೇಳಿಕೆ ನೀಡಿದ್ದಾರೋ ಗೊತ್ತಿಲ್ಲ. ಅವರಿಗೆ ಈ ಸರಕಾರ ಪೂರ್ಣಾವಧಿಗೆ ಇರುತ್ತದೆ ಎನ್ನುವ ನಂಬಿಕೆ ಇದ್ದಂತೆ ಇಲ್ಲ. ಅವರು ಹೆಚ್ಚಾಗಿ ಶಾಸ್ತ್ರ ಜ್ಯೋತಿಷ್ಯ ಕೇಳುತ್ತಾರೆ. ಜ್ಯೋತಿಷ್ಯದ ಮೂಲಕ ಚುನಾವಣೆಗಾಗಿ ಕೃತಕವಾದ ಶಕ್ತಿ ತುಂಬಿಕೊಂಡಿದ್ದಾರೆ. ಆ ಶಕ್ತಿ ಬಹಳ ದಿನ ಇರೋದಿಲ್ಲ ಅನ್ನುವುದು ಅವರಿಗೆ ತಲೆ ಒಳಗೆ ಇರಬಹುದು. ಅದಕ್ಕೆ ಅವರು ಈ ಹೇಳಿಕೆ ಕೊಟ್ಟಿರಬಹುದು ಎಂದು ಅವರು ಟಾಂಗ್ ಕೊಟ್ಟರು.

ಇಂದು ಮೈಸೂರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು



ಮೈಸೂರು, ಆ.4 (ಆರ್‌ಕೆ)–ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಮೈಸೂರಿಗೆ ಆಗಮಿಸುವರು. ದೆಹಲಿಯಿಂದ ವಿಶೇಷ ವಿಮಾನದಲ್ಲಿ ಹೊರಟು ಶನಿವಾರ ಮಧ್ಯಾಹ್ನ 12.30 ಗಂಟೆಗೆ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವ ರಾಷ್ಟ್ರಪತಿಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ದಕ್ಷಿಣ ವಲಯ ಡಿಐಜಿಪಿ ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಸೇರಿದಂತೆ ಹಲವರು ಪುಷ್ಪಗುಚ್ಛ ನೀಡಿ ಆತ್ಮೀಯವಾಗಿ ಬರಮಾಡಿಕೊಳ್ಳುವರು. ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ತಮಿಳುನಾಡಿನ ಮದುಮಲೈಗೆ ತೆರಳಲಿರುವ ಮುರ್ಮು ಅವರು, ಸಂಜೆ 5.45 ಗಂಟೆಗೆ ಮೈಸೂರಿಗೆ ವಾಪಸ್ಸಾಗಿ ಇಲ್ಲಿಂದ ಚೆನ್ನೈಗೆ ತೆರಳುವರು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಮ್ಮ ಕಚೇರಿಯಲ್ಲಿ ವಿಮಾನ ನಿಲ್ದಾಣ, ಕಂದಾಯ, ಆರೋಗ್ಯ, ಪೊಲೀಸ್ ಇಲಾಖೆ ಹಾಗೂ ಶಿಷ್ಟಾಚಾರ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದರು. ರಾಷ್ಟ್ರಪತಿಗಳು ಆಗಮಿಸುವ ಸಂದರ್ಭ ಯಾವುದೇ ಗೊಂದಲವಾಗದಂತೆ ಅಗತ್ಯ ಸುರಕ್ಷಾ ಕ್ರಮ ಕೈಗೊಂಡು ಶಿಷ್ಟಾಚಾರದ ಪ್ರಕಾರ ಸೌಲಭ್ಯ ಒದಗಿಸಬೇಕು, ಇಲಾಖೆ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕು, ವಿಮಾನ ನಿಲ್ದಾಣದಲ್ಲಿ ವೈದ್ಯಕೀಯ ವ್ಯವಸ್ಥೆ, ಆಂಬುಲೆನ್ಸ್, ವಿದ್ಯುತ್, ನೀರಿನ ಸೌಕರ್ಯ ಹಾಗೂ ಸ್ವಚ್ಛತೆ ಸೇರಿದಂತೆ ಎಲ್ಲಾ ಸೌಲಭ್ಯ ಕಲ್ಪಿಸಬೇಕು ಎಂದು ಅವರು ತಿಳಿಸಿದರು. ಮೈಸೂರು ನಗರ ಪೊಲೀಸ್ ಆಯುಕ್ತ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ ಅಗತ್ಯ ಭದ್ರತೆ ಮಾಡಿ ರಾಷ್ಟ್ರಪತಿಗಳು ಬಂದು ಹೋಗುವವರೆಗೆ ಕಟ್ಟೆಚ್ಚರ ವಹಿಸಬೇಕೆಂದು ಅವರು ಅಧೀನಾಧಿಕಾರಿಗಳಿಗೆ ಸೂಚಿಸಿದರು.

SALE SALE SALE
Treasures of South India Sale
upto 50% OFF
ಸಾಡೇಗಾಂವ್ ಸರ್ಕಲ್ ಮೈಸೂರು
ಸುದರ್ಶನ್ ಫ್ಯಾಮಿಲಿ ಸ್ಟೋರ್
ಮೈಸೂರು - ಹಾರ್ಡಿಂಗ್ ಸರ್ಕಲ್

ESS & ESS INFRASTRUCTURE PVT LTD
ESS & ESS INFRASTRUCTURE PVT LTD 100+ Projects
RERA No: PRM/KA/RERA/1268/378/PR/171016/001169
SHREESHA HILL VIEW
PHASE 2 & 3
NEW RELEASED PLOTS FOR SALE
ಉತ್ತನಹಳ್ಳಿ ರಿಂಗ್ ರೋಡ್ ಹತ್ತಿರ,
ಚಾಮುಂಡಿ ಬೆಟ್ಟದ ಹಿಂಭಾಗ, ಮೈಸೂರು
ನಿಮ್ಮ ಕನಸಿನ ನಿವೇಶನವನ್ನು ಈಗಲೇ
BOOK ಮಾಡಿ
LIMITED INVENTORY
APPROVED MUDA APPROVED
REGISTERED RERA REGISTERED
30X40 | 30X50 | 40X60
& Bigger Dimensions
essandess.in Upto 80% Bank Loan Available
ಉಚಿತ Site Visit ಗಾಗಿ ಕರೆ ಮಾಡಿ: 99011 64444

ನಕ್ಕರೆ ಅದೇ ಸ್ವರ್ಗ

ಗುಂಡ : ಹಲೋ... ಪಿಜ್ಜಾ ಸೆಂಟರಾ?
ಪಿಜ್ಜಾ ಸೆಂಟರ್ : ಹೌದು
ಗುಂಡ : ಒಂದು ಚೀಸ್ ಪಿಜ್ಜಾ ತಂದುಕೊಡಿ.
ಪಿಜ್ಜಾ ಸೆಂಟರ್ : ಓಕೆ ಸರ್, ಅಡ್ರೆಸ್ ಸ್ವಲ್ಪ ಹೇಳಿ
ಗುಂಡ : ನೀಲಿ ಶರ್ಟ್, ಕಪ್ಪು ಪ್ಯಾಂಟ್, ದುಂಡನೆಯ ಮುಖ, ಗೋಧಿ ಬಣ್ಣ ಎಸ್‌ಬಿಐ ಎಟಿಎಂ ಕ್ಯೂ 120ನೇ ವ್ಯಕ್ತಿ ಎಂ.ಜಿ. ರಸ್ತೆ

ಮೈಸೂರು ಮಿತ್ರ
ಶನಿವಾರ, 5 ಆಗಸ್ಟ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಆರಂಭದಲ್ಲಿ ಯೋಚಿಸದವನು ಕೊನೆಯಲ್ಲಿ ಸಂಕಟ ಪಡುತ್ತಾನೆ.

– ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬುದ್ಧಿ ಇದ್ದವನಲ್ಲಿ ಶ್ರದ್ಧೆ, ನಿದ್ದೆ ಬಾರದವನಲ್ಲಿ ವಿದ್ಯೆ

ನಿಮ್ಮ ಪತ್ರಗಳು

ಎಲ್‌ಇಡಿ ಜಾಹೀರಾತು ಅವಶ್ಯಕವಿರಲಿಲ್ಲ

ಮಾನ್ಯರೇ,

ಅಪಘಾತಕ್ಕೆ ಕಾರಣವಾಗುವ ಪ್ರಮುಖ ರಸ್ತೆಗಳ ಜಂಕ್ಷನ್‌ನಲ್ಲಿನ ಎಲ್‌ಇಡಿಗಳನ್ನು ತೆರವುಗೊಳಿಸುವುದಾಗಿ ಮೈಸೂರಿನ ಮೇಯರ್ ತಿಳಿಸಿದ್ದಾರೆ (ಮೈಮಿ. 4.8.2023). ಈ ಸುದ್ದಿಯನ್ನು ಓದಿದಾಗ ನಗಬೇಕೋ ಅಳಬೇಕೋ ತಿಳಿಯ ದಾಯಿತು. ಬಹುಶಃ ಇದನ್ನು ಅಳವಡಿಸುವಾಗ ಪಾಲಿಕೆ ಈ ಬಗ್ಗೆ ಚಿಂತನೆ ನಡೆಸದೆ ಯಾರೋ ಪಾಲಿಕೆ ಸದಸ್ಯರ ಒತ್ತಾಯದ ಮೇರೆಗೆ ಅನುಮತಿ ನೀಡಿರಲೂಬಹುದು. ಅಂದೇಕೆ ಈ ಅಪಘಾತದ ಚಿಂತನೆ ಇವರ ಮನಸ್ಸಿಗೆ ಬರಲಿಲ್ಲ. ಒಟ್ಟಾರೆ, ಇದರಿಂದ ವಾಹನ ಸವಾರರು ಟ್ರಾಫಿಕ್ ಜಂಕ್ಷನ್‌ಗಳಲ್ಲಿ ವಿಚಲಿತರಾಗುತ್ತಿದ್ದಂತೂ ನಿಜ ಮತ್ತು ಅಪಘಾತಕ್ಕೆ ಕಾರಣವೂ ಆಗುವ ಸಾಧ್ಯತೆಗಳಿದ್ದವು. ತಡವಾಗಿ ಯಾದರೂ ಪಾಲಿಕೆ ಮೆದುಳಿಗೆ ಚಿಂತಿಸುವ ಶಕ್ತಿ ಬಂದಿದೆಯಲ್ಲಾ ಎನ್ನುವುದೇ ಸಮಾಧಾನಕರ ಸಂಗತಿ.

–ವಿಜಯ್ ಹೆಮ್ಮಿಗೆ, ಮೈಸೂರು

ಮೊಬೈಲ್ ಗೀಳಿನಿಂದಾಗಿ ಜೀವ ಕಳೆದುಕೊಳ್ಳಬೇಡಿ!

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಮೊಬೈಲ್‌ಗಳಿಂದ ಸೆಲ್ಫಿ, ರೀಲ್ಸ್, ಫೋಟೋಗಳ ಹುಚ್ಚು ಹೆಚ್ಚಾಗುತ್ತಿದ್ದು, ಅದರಿಂದ ತಮ್ಮ ಪ್ರಾಣವನ್ನೇ ಯುವಕ, ಯುವತಿಯರು ಕಳೆದುಕೊಳ್ಳುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಕೊಲ್ಲೂರಿನ ಅರಿಶಿನ ಗುಂಡಿ ಜಲಪಾತದ ವೀಕ್ಷಣೆಗೆ ಸ್ನೇಹಿತರೊಂದಿಗೆ ಬಂದಿದ್ದ ಭದ್ರಾವತಿ ಮೂಲದ ಯುವಕ ಶರತ್ ರೀಲ್ಸ್ ಮಾಡಲು ಹೋಗಿ ಜಲಪಾತದಲ್ಲಿ ಬಿದ್ದು ಪ್ರಾಣವನ್ನೇ ಕಳೆದುಕೊಂಡಿದ್ದ. ಈ ಸಾವಿನಿಂದ ಕಂಗೆಟ್ಟ ಕುಟುಂಬದ ರೋದನೆ ಮುಗಿಲು ಮುಟ್ಟಿತು. ಇದರಿಂದ ಎಂಥವರ ಕರುಳು ಚುರುಕ್ ಎನ್ನುತ್ತದೆ.

ಮತ್ತೊಂದು ಘಟನೆ ಸಮುದ್ರದ ದಡದಲ್ಲಿ ಮಕ್ಕಳ ಕೈಗೆ ಮೊಬೈಲ್ ಕೊಟ್ಟು ವೀಡಿಯೋ ಮಾಡಲು ಹೇಳಿ, ಬಂಡೆ ಮೇಲೆ ಕುಳಿತು ಗಂಡ ಮತ್ತು ಹೆಂಡತಿ ಸಮುದ್ರದ ಅಲೆಯಲ್ಲಿ ಕೊಚ್ಚಿ ಹೋಗಿರುವುದನ್ನು ಸಾಮಾಜಿಕ ಜಾಲತಾಣಗಳಲ್ಲಿ ವೀಕ್ಷಿಸಿದ್ದೇವೆ. ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಬೋರ್ಗರೆದು ಉಕ್ಕಿ ಹರಿಯುವ ಜಲಪಾತದ ಮನಮೋಹಕ, ರಮಣೀಯವಾದ ದೃಶ್ಯಗಳನ್ನು ಸೆರೆ ಹಿಡಿಯುವಾಗ ಅಪಾಯಕಾರಿ ಸ್ಥಳಗಳಲ್ಲಿ ನಿಂತು ಆಯತಪ್ಪಿ ಬಿದ್ದು ಅದೆಷ್ಟೋ ಜನರು ತಮ್ಮ ಜೀವನದ ಅಂತ್ಯ ಕಂಡಿದ್ದಾರೆ. ಮೊಬೈಲ್ ಗೀಳಿನಿಂದಾಗಿ ಅತಿರೇಕದ ವರ್ತನೆಯೇ ಇದಕ್ಕೆ ಕಾರಣವಾಗಿದೆ.

ಒಂದಷ್ಟು ಜನರು ದ್ವಿಚಕ್ರ ವಾಹನ ಮೇಲೆ ಕುಳಿತು ರೀಲ್ಸ್‌ಗಾಗಿ ವೀಲಿಂಗ್ ಮಾಡುತ್ತಾ ತಮ್ಮ ಪ್ರಾಣವನ್ನು ಕಳೆದುಕೊಂಡಿ ದ್ದಾರೆ. ಪ್ರೀ ವೆಡ್ಡಿಂಗ್ ಶೋಗೆ ವೀಡಿಯೋ ಮಾಡಲು ಅಪಾಯದಂತಹ ನದಿ, ಜಲಪಾತಗಳ ಬಗ್ಗೆ ಮಾಹಿತಿ ಇಲ್ಲದೆ, ಶೂಟಿಂಗ್‌ಗಾಗಿ ಇಳಿದು, ವಿವಾಹ ಆಗುವುದಕ್ಕೂ ಮುಂಚೆಯೇ ಪ್ರಾಣ ಕಳೆದುಕೊಂಡಿದ್ದಾರೆ. ಇಂಥ ಹುಚ್ಚು ಸಾಹಸಮಯ ಪ್ರದರ್ಶನಗಳಲ್ಲಿ ಯುವಕ, ಯುವತಿಯರೇ ಹೆಚ್ಚಾಗಿದ್ದು, ಸಾಮಾಜಿಕ ಜಾಲತಾಣ ಗಳಲ್ಲಿ ರಿಲ್ಸ್‌ಗಾಗಿ ಲೈಕು, ಕಾಮೆಂಟಿಗಾಗಿ ತಮ್ಮ ಅಮೂಲ್ಯ ಜೀವವನ್ನು ಕಳೆದು ಕೊಳ್ಳಬೇಡಿ. ನಿಮಗಾಗಿ ನಿಮ್ಮ ಕುಟುಂಬ ಪಶ್ಚಾತ್ತಾಪಪಡಬೇಕಾಗುತ್ತದೆ. ಇವುಗಳನ್ನು ವೀಕ್ಷಿಸಲು ನೀವೇ ಇರುವುದಿಲ್ಲ ಎಂಬುದನ್ನು ತಿಳಿದುಕೊಳ್ಳಿ. ಆ ದೃಶ್ಯಕ್ಕಿಂತ ನಿಮ್ಮ ಜೀವ ಮುಖ್ಯ. ನೀವು ಇದ್ದರೆ ಅಂತಹ ಅದ್ಭುತ ದೃಶ್ಯಗಳನ್ನು ಯಾವಾಗಲಾದರೂ ಚಿತ್ರೀಕರಣ ಮಾಡಿಕೊಳ್ಳಬಹುದು. ಆದ್ದರಿಂದ ಪ್ರವಾಸಿ ತಾಣಗಳಲ್ಲಿ ಎಚ್ಚರಿಕೆ, ಸುರಕ್ಷತೆ, ಜಾಗರೂಕತೆಯಿಂದ ಮೊಬೈಲ್‌ನಲ್ಲಿ ಸುಂದರ ದೃಶ್ಯಗಳನ್ನು ಸೆರೆ ಹಿಡಿಯಲು ಕಳಕಳಿಯ ಮನವಿ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ರಾಷ್ಟ್ರೀಕೃತ ಬ್ಯಾಂಕ್‌ನ ಅಧಿಕಾರಿಯನ್ನು ನೇಮಕ ಮಾಡುವ ಮೂಲಕ ದಿವಾಳಿ ತಪ್ಪಿಸಲು ಸಾಧ್ಯ

ಮಾನ್ಯರೆ,

ಇತ್ತೀಚೆಗೆ ರಾಜ್ಯದಲ್ಲಿ ಕೆಲವು ಸಹಕಾರ ಬ್ಯಾಂಕ್‌ಗಳು ಮತ್ತು ಸಹಕಾರ ಸಂಘಗಳು ದಿವಾಳಿಯಾಗಲು ಕಾರಣ ಸಹಕಾರ ಬ್ಯಾಂಕ್‌ಗಳಲ್ಲಿ ಹೆಚ್ಚು ವಸೂಲಾಗದ ಸಾಲ (ಎನ್‌ಪಿಎ). ರಾಜ್ಯದ ಎಲ್ಲಾ ಸಹಕಾರ ಬ್ಯಾಂಕ್‌ಗಳು ಮತ್ತು ಸಹಕಾರ ಸಂಘಗಳು ಯಾವುದಾದರೂ ಒಂದು ರಾಜಕೀಯ ಪಕ್ಷಗಳ ಹಿಡಿದದಲ್ಲೇ ಇವೆ. ಇಲ್ಲಿಗೆ ಆಯ್ಕೆ ಆಗಿ ಬರುವ ನಿರ್ದೇಶಕರು ಮತ್ತು ಆ ಬ್ಯಾಂಕ್‌ನ ಪದಾಧಿಕಾರಿಗಳು ಅವರ ಹಿಂಬಾಲಕರಿಗೆ ಇವರ ಪ್ರಭಾವದಿಂದ ಸಾಲ ಮರುಪಾವತಿಯ ಸಾಮರ್ಥ್ಯ ಇಲ್ಲದಿದ್ದರೂ, ವಾಸ್ತವ ಸಾಲಕ್ಕಿಂತಲೂ ಹೆಚ್ಚು ಸಾಲ ಕೊಡಿಸುತ್ತಾರೆ. ಇವರು ಆರು ತಿಂಗಳು ಸಹ ಸಾಲ ಮರು ಪಾವತಿ ಮಾಡಲು ಸಾಧ್ಯವಾಗದೇ ಡಿಫಾಲ್ಟರ್ ಆಗುತ್ತಾರೆ. ಇಲ್ಲಿ ಸಾಲಗಾರರ ಮತ್ತು ಪ್ರಭಾವ ಬೀರುವ ನಿರ್ದೇಶಕರುಗಳ ನಡುವೆ ಕಣ್ಣಿಗೆ ಕಾಣದ ಒಪ್ಪಂದ ನಡೆದಿರುತ್ತದೆ. ಎಲ್ಲಾ ಸಹಕಾರ ಬ್ಯಾಂಕ್‌ಗಳ ಆಡಳಿತವು ಆರ್‌ಬಿಐ ಅಡಿಯಲ್ಲಿ ಬಂದರೂ ಎಲ್ಲವನ್ನೂ ಅವರು ನಿಯಂತ್ರಣ ಮಾಡಲು ಸಾಧ್ಯವಿಲ್ಲ. ಇನ್ನು ಸಹಕಾರ ಬ್ಯಾಂಕ್‌ಗಳು ಎನ್‌ಪಿಎಯಿಂದ ನಷ್ಟ ಅನುಭವಿಸಿದರೂ ರಾಜ್ಯ ಸರ್ಕಾರಗಳು ಹಣಕಾಸಿನ ನೆರವಿಗೆ ಬರುವುದಿಲ್ಲ. ಪ್ರತಿ ಸಹಕಾರ ಬ್ಯಾಂಕ್‌ಗಳಿಗೆ ರಾಷ್ಟ್ರೀಕೃತ ಬ್ಯಾಂಕ್‌ನ ಅಧಿಕಾರಿಯೊಬ್ಬರನ್ನು ಆರ್‌ಬಿಐ ನೇಮಕ ಮಾಡುವ ಮೂಲಕ ಸಹಕಾರ ಬ್ಯಾಂಕ್‌ಗಳು ದಿವಾಳಿಯಾಗುವುದನ್ನು ತಪ್ಪಿಸಲು ಸಾಧ್ಯ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಕೋತಿಗಳ ಹಾವಳಿ ತಪ್ಪಿಸಿ

ಮಾನ್ಯರೆ,

ಮೈಸೂರಿನ ಜೆಎಸ್‌ಎಸ್ 2ನೇ ಹಂತ ಮತ್ತು ಎಸ್‌ವಿಪಿ ನಗರದಲ್ಲಿ ಕೋತಿಗಳ ಹಾವಳಿ ಜಾಸ್ತಿಯಾಗಿದೆ. ಕೋತಿಗಳು ಕಿಟಕಿ ಮತ್ತು ಬಾಗಿಲು ಮೂಲಕ ಬಂದು ಕೈಗೆ ಸಿಕ್ಕ ಪದಾರ್ಥವನ್ನು ಬಿಡದೇ ತೆಗೆದುಕೊಂಡು ಹೋಗುತ್ತದೆ. ಕಸ ತುಂಬಿರುವ ಡಬ್ಬಿ ತೆಗೆದು ಗಲೀಜು ಮಾಡುತ್ತದೆ. ಟಿ.ವಿ. ಕೇಬಲ್ ವೈರ್‌ಗಳನ್ನು ಕಿತ್ತು ಬಿಸಾಡುತ್ತದೆ. ಇದರಿಂದ ಇಲ್ಲಿನ ನಿವಾಸಿಗಳಿಗೆ ತುಂಬಾ ತೊಂದರೆಯಾಗಿದೆ. ಕೂಡಲೇ ಸಂಬಂಧಪಟ್ಟವರು ಕ್ರಮ ಕೈಗೊಳ್ಳಲಿ.

–ಟಿ.ಪಿ. ಲೋಕೇಶಮೂರ್ತಿ, ಮೈಸೂರು.

ಕೆ.ಆರ್. ಕ್ಷೇತ್ರದ ಶಾಸಕರಲ್ಲಿ ಮನವಿ

ಮಾನ್ಯರೆ,

ಈ ಹಿಂದೆ ಜಯನಗರ ಬಡಾವಣೆಗೆ ರೂಟ್ ನಂ. 61, 67, 53 ಬಸ್‌ಗಳು ಸಂಚರಿಸುತ್ತಿದ್ದವು. ಈಗ ರೂಟ್ ನಂ. 53 ಮಾತ್ರ ಸಂಚರಿಸುತ್ತಿದೆ. ಅದೂ ಆ ಮಾರ್ಗಕ್ಕೆ ವೇಳಾ ಪಟ್ಟಿಯೇ ಇರುವುದಿಲ್ಲ. ಜಯನಗರ ಬಡಾವಣೆಗೆ ಸಮರ್ಪಕ ಬಸ್ ಸೌಕರ್ಯವೇ ಇಲ್ಲದಂತಾಗಿದೆ. ಈ ಕ್ಷೇತ್ರದ ಶಾಸಕರು ಈ ಸಮಸ್ಯೆ ಬಗೆಹರಿಸುವಂತೆ ಮನವಿ.

–ನೊಂದ ನಾಗರಿಕರು, ಜಯನಗರ, ಮೈಸೂರು.



ಕಾರ್ಕಳ ಆನಂದ ಭಟ್
ಮೊ : 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

ದಿಕ್ಸೂಚಿ

ಭಾರತವನ್ನು ಕಾಡುತ್ತಿದೆ ಬಾಲಕಾರ್ಮಿಕ ಪಿಡುಗು

ಜಾಗತಿಕವಾಗಿ ಮಾನವ ಹಕ್ಕು ಮತ್ತು ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದಂತೆ ಗಮನಾರ್ಹ ಸಾಧನೆಗಳಾಗಿವೆ. ಆದರೆ ಮನುಕುಲವು ನಾಚಿ ತಲೆ ತಗ್ಗಿಸುವಂತಹ ಬಾಲಕಾರ್ಮಿಕರ ಸಮಸ್ಯೆ ಇನ್ನೂ ಜೀವಂತವಾಗಿ ಉಳಿದಿದೆ. ವಿಶ್ವಾದ್ಯಂತ ಲಕ್ಷಾಂತರ ಬಾಲ ಕಾರ್ಮಿಕರಿಗೆ ಅಮೂಲ್ಯವಾದ ಬಾಲ್ಯತನದ ನಿರಾಕರಣೆ ವೇದನೆ ತರುವ ಸಂಗತಿಯಾಗಿದೆ. ಮಕ್ಕಳನ್ನು ಬಲವಂತವಾಗಿ ಅಪಾಯಕಾರಿ ಕೆಲಸಗಳಿಗೆ ತೊಡಗಿಸುವ ಮೂಲಕ ಅವರ ಮೇಲೆ ಶೋಷಣೆ ನಡೆಯುತ್ತಿದೆ. ಈ ಮೂಲಕ ಅವರ ಬಾಲ್ಯತನ, ವಿದ್ಯಾಭ್ಯಾಸದ ಹಕ್ಕು, ಆರೋಗ್ಯ ಹಾಗೂ ಭವಿಷ್ಯದ ಕನಸುಗಳನ್ನು ನಾಶ ಮಾಡಲಾಗುತ್ತಿದೆ.

ಬಾಲಕಾರ್ಮಿಕ ಸಮಸ್ಯೆಗೆ ಜಗತ್ತಿನಲ್ಲಿರುವ ಬಡತನ, ಶಿಕ್ಷಣಕ್ಕೆ ಅವಕಾಶವಿಲ್ಲದಿರುವುದು ಮತ್ತು ಅತ್ಯಂತ ಅವಶ್ಯಕವಾದ ಕಾನೂನಿನ ಬೆಂಬಲ ಮತ್ತು ಸಹಾಯ ದೊರೆಯದಿರುವುದು ಮುಖ್ಯ ಕಾರಣಗಳಾಗಿವೆ. ಜಗತ್ತಿನ ಸಾವಿರಾರು ದುರ್ಬಲ ಸಮುದಾಯಗಳ ಪರಿವಾರಗಳು ಜೀವನೋಪಾಯದ ಪರ್ಯಾಯ ಮಾರ್ಗಗಳು ಮುಚ್ಚಿದ ಸಂದರ್ಭಗಳಲ್ಲಿ ಅನಿವಾರ್ಯವಾಗಿ ತಮ್ಮ ಮಕ್ಕಳನ್ನು ಶ್ರಮದ ದುಡಿಮೆಗೆ ದೂಡುತ್ತಾರೆ. ಈ ಮಕ್ಕಳು ತಮ್ಮ ಬಾಲ್ಯತನ, ಮುಗ್ಧತೆ, ದೈಹಿಕ ಸಾಮರ್ಥ್ಯವನ್ನು ಮರೆತು, ಭಾವನೆಗಳಿಗೆ ಕೊಳ್ಳಿ ಇಟ್ಟು ದುಡಿಮೆ ಮಾಡಬೇಕಾಗುತ್ತದೆ. ಈ ರೀತಿ ಬಡತನವು ಮುಂದಿನ ತಲೆಮಾರಿಗೆ ಮುಂದುವರಿಯುತ್ತದೆ. ಬಾಲಕಾರ್ಮಿಕ ಪದ್ಧತಿಯ ಅತ್ಯಂತ ಹೇಯ ವಿಚಾರವೆಂದರೆ ಬಡತನದ ಸಂಕೋಲೆಗಳನ್ನು ತುಂಡರಿಸುವ ಸಶಕ್ತ ಮಾಧ್ಯಮ ಮತ್ತು ಎಲ್ಲರ ಮೂಲಭೂತ ಹಕ್ಕಾಗಿರುವ ಶಿಕ್ಷಣದ ಅವಕಾಶವನ್ನು ನಿರಾಕರಿಸುತ್ತದೆ. ಈ ಪಿಡುಗು ಸಾಮಾಜಿಕ ಅಸಮಾನತೆ ಸೃಷ್ಟಿಸುವುದರೊಂದಿಗೆ ದುರ್ಬಲರ ಶೋಷಣೆಗೆ ಅವಕಾಶ ನೀಡುತ್ತದೆ. ಬಾಲಕಾರ್ಮಿಕ ಆಧಾರಿತ ಕೈಗಾರಿಕೆಗಳು ಮುಗ್ಧರ ಹಿತಾಸಕ್ತಿ ರಕ್ಷಿಸುವುದಕ್ಕಿಂತ ತಮ್ಮ ಲಾಭ ಗಳಿಸುವತ್ತ ಗಮನ ಹೊಂದಿರುತ್ತವೆ. ಹೆಚ್ಚಿನ ಲಾಭಕ್ಕಾಗಿ ಇವರು ನೀಡುವ ಹಿಂಸೆ, ಕ್ರೌರ್ಯದಿಂದಾಗಿ ಬಾಲಕಾರ್ಮಿಕರು ಭವಿಷ್ಯದಲ್ಲಿ ಅಪರಾಧಿಗಳಾಗುವ ಸಾಧ್ಯತೆ ಅಧಿಕವಾಗುತ್ತದೆ.



> ಬಾಲಕಾರ್ಮಿಕರು ಭಾರಿ ಸಂಖ್ಯೆಯಲ್ಲಿ ಅಸಂಘಟಿತ ವಲಯದಲ್ಲಿದ್ದು, ಇಲ್ಲಿ ಕೂಲಿ ಮಾಡುತ್ತಿರುವ ಹೆಚ್ಚಿನ ಮಕ್ಕಳಿಗೆ ಕಾಯ್ದೆ ಪ್ರಕಾರ ನ್ಯಾಯ ದೊರೆತಿಲ್ಲ. ಇದಕ್ಕೆ ಪ್ರಮುಖ ಕಾರಣ ಹೆಚ್ಚಿನ ಮಕ್ಕಳು ತಮ್ಮ ಪೋಷಕರ ಸ್ವ ಉದ್ಯೋಗಗಳಲ್ಲಿ ದುಡಿಯುತ್ತಿದ್ದಾರೆ. ಇದಕ್ಕೆ ಕ್ರಮಬದ್ಧತೆ ಹಾಗೂ ಸಮ್ಮತಿಯನ್ನು ನ್ಯಾಯಿಕ ವ್ಯವಸ್ಥೆ ನೀಡುತ್ತದೆ. ಆದರೆ ಈ ಕ್ರಮದಿಂದ ಮಕ್ಕಳು ತಮ್ಮ ಶಿಕ್ಷಣದ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸರಕಾರವು ಆರರಿಂದ ಹದಿನಾಲ್ಕು ವರ್ಷ ವಯಸ್ಸಿನ ಮಕ್ಕಳಿಗೆ ಶಿಕ್ಷಣವನ್ನು ಕಡ್ಡಾಯ ಹಾಗೂ ಉಚಿತ ಮಾಡಿರುವುದು ಆಶಾಕಿರಣವಾಗಿದೆ. ಆದರೆ ಕಾರ್ಮಿಕ ಕಾಯ್ದೆ ಮತ್ತು ಕಡ್ಡಾಯ ಶಿಕ್ಷಣ ಈ ಎರಡೂ ಕಾಯ್ದೆಗಳು ಮಕ್ಕಳಿಗೆ ನ್ಯಾಯ ಒದಗಿಸುವಲ್ಲಿ ಸಂಪೂರ್ಣ ಸಫಲವಾಗಿಲ್ಲ. ಕಾರ್ಮಿಕ ಹಾಗೂ ಮಕ್ಕಳ ಕಲ್ಯಾಣ ಇಲಾಖೆಗಳು ಕಾನೂನಿನಂತೆ ನಿರ್ವಹಿಸುತ್ತಿದ್ದೇವೆಂದು ಹೇಳುತ್ತಿದ್ದರೂ ಅಸಂಘಟಿತ ವಲಯದಲ್ಲಿ ಭಿನ್ನ ಚಿತ್ರಣವಿದೆ.

ವಿಶ್ವದಲ್ಲಿರುವ ಬಾಲ ಕಾರ್ಮಿಕರು

ವಿಶ್ವಸಂಸ್ಥೆಯ ಅಂಕಿ ಅಂಶಗಳಂತೆ ಜಗತ್ತಿನಲ್ಲಿ ಅಂದಾಜು 152 ಮಿಲಿಯನ್ ಬಾಲ ಕಾರ್ಮಿಕರಿದ್ದಾರೆ. ಇವರಲ್ಲಿ 72 ಮಿಲಿಯನ್ ಮಕ್ಕಳು ಅತ್ಯಂತ ಅಪಾಯಕಾರಿ ವಲಯಗಳಲ್ಲಿ ದುಡಿಯುತ್ತಿದ್ದಾರೆ. ಬಡ ದೇಶಗಳಲ್ಲಿ 5 ರಿಂದ 17 ವರ್ಷ ವಯಸ್ಸಿನ ಪ್ರತಿ ನಾಲ್ಕರಲ್ಲಿ ಒಂದು ಮಗು ಕಾರ್ಮಿಕನಾಗಿದ್ದಾನೆ. ಆಫ್ರಿಕಾ ಖಂಡದಲ್ಲಿ ಅತೀ ಹೆಚ್ಚು ಬಾಲಕಾರ್ಮಿಕರಿದ್ದಾರೆ (72 ಮಿಲಿಯನ್). ಸುಮಾರು 62 ಮಿಲಿಯನ್ ಬಾಲಕಾರ್ಮಿಕರಿರುವ ಏಷ್ಯಾ ಹಾಗೂ ಫೆಸಿಫಿಕ್ ವಲಯಗಳು ಎರಡನೇ ಸ್ಥಾನದಲ್ಲಿವೆ. ಪ್ರತಿ ಹತ್ತರಲ್ಲಿ ಒಂಬತ್ತು ಬಾಲಕಾರ್ಮಿಕರು ಈ ಮೂರು ವಲಯಗಳಲ್ಲಿದ್ದಾರೆ. ಉಳಿದಂತೆ ಅಮೇರಿಕದಲ್ಲಿ 11 ಮಿಲಿಯನ್ ಯೂರೋಪ್ ಮತ್ತು ಮಧ್ಯ ಏಷ್ಯಾಗಳಲ್ಲಿ 6 ಮಿಲಿಯನ್ ಮತ್ತು ಅರಬ್ ರಾಷ್ಟ್ರಗಳಲ್ಲಿ ಒಂದು ಮಿಲಿಯನ್‌ನಷ್ಟು ಬಾಲಕಾರ್ಮಿಕರಿದ್ದಾರೆ. ಶೇಕಡವಾರು ಅಮೇರಿಕದಲ್ಲಿ ಶೇ.5, ಯೂರೋಪ್, ಮಧ್ಯ ಏಷ್ಯಾ ಶೇ.4 ಮತ್ತು ಅರಬ್ ದೇಶಗಳಲ್ಲಿ ಶೇ. 3ರಷ್ಟು ಬಾಲಕಾರ್ಮಿಕರಿದ್ದಾರೆ.

ಭಾರತದಲ್ಲಿ ಬಾಲಕಾರ್ಮಿಕರ ಸಮಸ್ಯೆ

ದುರದೃಷ್ಟವಶಾತ್ ಭಾರತದಲ್ಲೂ ಅತೀ ಹೆಚ್ಚು ಬಾಲಕಾರ್ಮಿಕರಿದ್ದಾರೆ. 2011ರ ಜನಗಣತಿಯಂತೆ ಭಾರತದಲ್ಲಿ ಅಂದಾಜು 5.6 ಮಿಲಿಯನ್ ಬಾಲಕರು ಹಾಗೂ 4.5 ಮಿಲಿಯನ್ ಹೆಣ್ಣು ಮಕ್ಕಳು ಒಟ್ಟು10.1 ಮಿಲಿಯನ್ ಬಾಲ ಕಾರ್ಮಿಕರಿದ್ದಾರೆ. ಯುನಿಸೆಫ್ ತಿಳಿಸಿದಂತೆ ಭಾರತದಲ್ಲಿ ಬಾಲ ಕಾರ್ಮಿಕರ ಸಂಬಂಧಿತ ಪ್ರಕರಣಗಳ ಪ್ರಮಾಣದಲ್ಲಿ ಶೇ.54 ಏರಿಕೆಯಾಗಿದೆ. ಕ್ರೈ ಸಂಸ್ಥಾನದ ಪ್ರಕಾರ ಭಾರತದಲ್ಲಿ 5 ರಿಂದ 18 ವರ್ಷದೊಳಗಿನ ಪ್ರತಿ ಹನ್ನೊಂದನೇ ಬಾಲಕ ಅಥವಾ ಬಾಲಕಿ ಬಾಲ ಕಾರ್ಮಿಕರಾಗಿದ್ದು, ಇವರಲ್ಲಿ ದುಡಿಯುವ ಪ್ರಮಾಣದಲ್ಲಿ ಶೇ. 37 ರಷ್ಟು ಏರಿಕೆಯಾಗಿದೆ. ಇವರಲ್ಲಿ ಶೇ. 80ರಷ್ಟು ಗ್ರಾಮೀಣ ಪ್ರದೇಶದಲ್ಲಿದ್ದಾರೆ. ಈ ಮಕ್ಕಳನ್ನು ಗಣಿಗಾರಿಕೆ, ಇಟ್ಟಿಗೆಗೂಡುಗಳು, ಕುಲುಮೆಗಳು, ರಸ್ತೆ, ಕಟ್ಟಡ ನಿರ್ಮಾಣ ಕಾಮಗಾರಿ ಮೊದಲಾದ ಎಳೆ ಶರೀರದ ಮಕ್ಕಳ ಸಾಮರ್ಥ್ಯಕ್ಕೆ ಮೀರಿದ ಕೆಲಸಗಳಲ್ಲಿ ತೊಡಗಿಸುತ್ತಾರೆ.

ಇನ್ನೂ ಹೆಚ್ಚಾಗಿ ಈ ಮಕ್ಕಳನ್ನು ಮಾದಕ ದ್ರವ್ಯ ಮಾರಾಟ, ವೇಶ್ಯಾವಾಟಿಕೆ, ಬಲವಂತದ ಭಿಕ್ಷಾಟನೆ, ಕಳ್ಳತನ, ಅಂಗ ಭೇದಿಸಿ ಭಿಕ್ಷಾಟನೆ ಹಾಗೂ ಇನ್ನಿತರ ಕಾನೂನುಬಾಹಿರ ಕೃತ್ಯಗಳಿಗೆ ದೂಡುವುದು ಕ್ರೌರ್ಯದ ಪರಮಾವಧಿಯಾಗಿದೆ. ಇಂತಹ ಕೃತ್ಯಗಳು ಮಕ್ಕಳ ಎಳೆ ಮನಸ್ಸಿನ ಮೇಲೆ ಆಘಾತ ಉಂಟು ಮಾಡುವುದರಿಂದ ಇವರಲ್ಲಿ ಹೆಚ್ಚಿನವರು ಭವಿಷ್ಯದಲ್ಲಿ ಸಮಾಜಘಾತುಕರಾಗುತ್ತಾರೆ. ಭಾರೀ ಪ್ರಮಾಣದ ನಿರುದ್ಯೋಗ ಹಾಗೂ ಉದ್ಯೋಗ ನಷ್ಟದಿಂದ ಪೋಷಕರು ತಮ್ಮ ಮನೆ ಮಕ್ಕಳನ್ನು ಅನಿವಾರ್ಯವಾಗಿ ಬಲವಂತದಿಂದ ದುಡಿಮೆಗೆ ದೂಡುತ್ತಿರುವುದು ಸಾಮಾನ್ಯವಾಗಿದೆ. ಮಕ್ಕಳ ಹಕ್ಕಿಗಾಗಿರುವ ಬಾಲ ಕಾರ್ಮಿಕ ವಿರೋಧಿ ಕಾಯ್ದೆಗಳು ಪರಿಣಾಮ ಕಾರಿಯಾಗಿ ಅನುಷ್ಠಾನವಾಗುತ್ತಿಲ್ಲ ಎನ್ನುತ್ತಾರೆ.

ಬಾಲಕಾರ್ಮಿಕರು ಭಾರಿ ಸಂಖ್ಯೆಯಲ್ಲಿ ಅಸಂಘಟಿತ ವಲಯದಲ್ಲಿದ್ದು, ಇಲ್ಲಿ ಕೂಲಿ ಮಾಡುತ್ತಿರುವ ಹೆಚ್ಚಿನ ಮಕ್ಕಳಿಗೆ ಕಾಯ್ದೆ ಪ್ರಕಾರ ನ್ಯಾಯ ದೊರೆತಿಲ್ಲ. ಇದಕ್ಕೆ ಪ್ರಮುಖ ಕಾರಣ ಹೆಚ್ಚಿನ ಮಕ್ಕಳು ತಮ್ಮ ಪೋಷಕರ ಸ್ವ ಉದ್ಯೋಗಗಳಲ್ಲಿ ದುಡಿಯುತ್ತಿದ್ದಾರೆ. ಇದಕ್ಕೆ ಕ್ರಮಬದ್ಧತೆ ಹಾಗೂ ಸಮ್ಮತಿಯನ್ನು ನ್ಯಾಯಿಕ ವ್ಯವಸ್ಥೆ ನೀಡುತ್ತದೆ. ಆದರೆ ಈ ಕ್ರಮದಿಂದ ಮಕ್ಕಳು ತಮ್ಮ ಶಿಕ್ಷಣದ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸರಕಾರವು ಆರರಿಂದ ಹದಿನಾಲ್ಕು ವರ್ಷ ವಯಸ್ಸಿನ ಮಕ್ಕಳಿಗೆ ಶಿಕ್ಷಣವನ್ನು ಕಡ್ಡಾಯ ಹಾಗೂ ಉಚಿತ ಮಾಡಿರುವುದು ಆಶಾಕಿರಣವಾಗಿದೆ. ಆದರೆ ಕಾರ್ಮಿಕ ಕಾಯ್ದೆ ಮತ್ತು ಕಡ್ಡಾಯ ಶಿಕ್ಷಣ ಈ ಎರಡೂ ಕಾಯ್ದೆಗಳು ಮಕ್ಕಳಿಗೆ ನ್ಯಾಯ ಒದಗಿಸುವಲ್ಲಿ ಸಂಪೂರ್ಣ ಸಫಲವಾಗಿಲ್ಲ. ಕಾರ್ಮಿಕ ಹಾಗೂ ಮಕ್ಕಳ ಕಲ್ಯಾಣ ಇಲಾಖೆಗಳು ಕಾನೂನಿನಂತೆ ನಿರ್ವಹಿಸುತ್ತಿದ್ದೆ ವೆಂದು ಹೇಳುತ್ತಿದ್ದರೂ ಅಸಂಘಟಿತ ವಲಯ ದಲ್ಲಿ ಭಿನ್ನ ಚಿತ್ರಣವಿದೆ.

ಭಾರತದಲ್ಲಿ ಬಾಲಕಾರ್ಮಿಕರಿಗೆ ಕಾನೂನಿನ ರಕ್ಷಣೆಗಳು

ಭಾರತದಲ್ಲಿ ಬಾಲ ಕಾರ್ಮಿಕರ ಪಿಡುಗನ್ನು ನಿವಾರಿಸಲು ಸರಕಾರಗಳು ಸಂವಿಧಾನಾತ್ಮಕವಾಗಿ ಅನೇಕ ಕಾನೂನುಗಳನ್ನು ಜಾರಿಗೊಳಿಸಿದೆ. ಸಂವಿಧಾನದ 24ನೇ ವಿಧಿಯು ಹದಿನಾರು ವರ್ಷ ವಯಸ್ಸಿನೊಳಗಿನ ಮಕ್ಕಳನ್ನು ಅಪಾಯಕಾರಿ ಕೈಗಾರಿಕೆಗಳಲ್ಲಿ, ಉದ್ಯಮಗಳಲ್ಲಿ ತೊಡಗಿಸುವುದು, ಅಕ್ರಮವೆಂದು ನಿಷೇದಿಸುತ್ತದೆ. ಫ್ಯಾಕ್ಟರಿ ಕಾಯ್ದೆ 1948 ರಂತೆ ಹದಿನಾಲ್ಕು ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಿಸುವಂತಿಲ್ಲ. ಹಾಗೂ 15 ರಿಂದ 18 ವರ್ಷ ವಯಸ್ಸಿನವರೆಗೆ ಅಪಾಯಕಾರಿ ಸ್ಥಳಗಳಲ್ಲಿ, ಪರಿಸ್ಥಿತಿಗಳಲ್ಲಿ ದುಡಿಯುವುದಕ್ಕೆ ಅವಕಾಶ ನೀಡುವುದಿಲ್ಲ. ಗಣಿಗಾರಿಕೆ ಕಾಯ್ದೆ 1952 ರಂತೆ ಹದಿನೆಂಟು ವರ್ಷದೊಳಗಿನವರಿಗೆ ಅಪಾಯಕಾರಿಯಾಗಿರುವ ಗಣಿಗಾರಿಕೆಯಲ್ಲಿ ತೊಡಗಿಸುವುದು ಶಿಕ್ಷಾರ್ಹ ಅಪರಾಧವಾಗಿದೆ. ಸಂಸ್ಥಾನದ 21(ಎ) ವಿಧಿಯು ಆರರಿಂದ ಹದಿನಾಲ್ಕು ವರ್ಷದವರೆಗಿನ ಮಕ್ಕಳಿಗೆ ಶಿಕ್ಷಣ ಮೂಲಭೂತ ಹಕ್ಕು ಎನ್ನುತ್ತದೆ. ಹಾಗೂ ಇದನ್ನು ಯಾವುದೇ ಕಾರಣಕ್ಕೂ ನಿರಾಕರಿ ಸುವಂತಿಲ್ಲ. ಈ ರೀತಿ ಬಾಲ ಕಾರ್ಮಿಕ ಪಿಡುಗು ನಿವಾರಿಸಲು ದೇಶದಲ್ಲಿ ಅನೇಕ ಕಾನೂನುಗಳಿದ್ದರೂ ಸುದೀರ್ಘ ಸಂಕೀರ್ಣ ನ್ಯಾಯಾಲಯಗಳ ಪ್ರಕ್ರಿಯೆಗಳಿಂದಾಗಿ ಈ ಪಿಡುಗು ಇನ್ನೂ ಮುಂದುವರಿದಿದೆ.

ಜಗತ್ತಿನ ಒಟ್ಟು ಸಂಖ್ಯೆಯಲ್ಲಿ ಸುಮಾರು ಮೂರನೇ ಒಂದರಷ್ಟು ಮಕ್ಕಳಿದ್ದಾರೆ. ಆದ್ದರಿಂದ ಮಕ್ಕಳ ಮೇಲಾಗುವ ದೌರ್ಜನ್ಯಗಳ ವಿರುದ್ಧ ಕ್ಷಿಪ್ರವಾಗಿ ಕ್ರಮ ತೆಗೆದುಕೊಳ್ಳಲು ಅವಕಾಶ ಮಾಡುವ ಕಾನೂನುಗಳು ಹಾಗೂ ಬಾಲಕಾರ್ಮಿಕ ಸಮಸ್ಯೆ ಪರಿಹರಿಸಲು ಧನಾತ್ಮಕ ಸಾಂಸ್ಥಿಕ ಬದ್ಧತೆಯ ಅವಶ್ಯಕತೆ ಇದೆ. ಸಾಮಾಜಿಕ, ನಾಗರಿಕ, ಸ್ವಯಂ ಸೇವಾ ಸಂಘಟನೆಗಳು ಈ ಪಿಡುಗಿನ ವಿರುದ್ಧ ಸಮಾಜದಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಬಾಲಕಾರ್ಮಿಕ ಪಿಡುಗು ನಾಗರಿಕ ಸಮಾಜದ ಮನಸಾಕ್ಷಿಯ ಮೇಲಿನ ಕಳಂಕವಾಗಿದೆ. ಈ ಸಮಸ್ಯೆ ಮಕ್ಕಳಲ್ಲಿರುವ ಮುಗ್ಧತೆ, ನಿರ್ಮಲ ಮನಸ್ಸನ್ನು ನಾಶಪಡಿಸುತ್ತದೆ ಹಾಗೂ ಬಡತನ ಮತ್ತು ಅಸಮಾನತೆಯನ್ನು ಸ್ವೀಕರಿಸುತ್ತದೆ. ಪ್ರತಿಯೊಂದು ಮಗುವು ಅದರ ಬಾಲ್ಯತನ ಕಳೆದುಕೊಳ್ಳದಂತೆ, ವಿದ್ಯಾಭ್ಯಾಸ ಪಡೆಯುವಂತೆ ಮಾಡಿ ಅವರ ಕನಸುಗಳು, ಆಸೆಗಳು ಕಮರಿ ಹೋಗದಂತೆ ನಾಗರಿಕ ಸಮಾಜ ಗಮನವಹಿಸಬೇಕಾಗಿದೆ. ಅಮೇರಿಕದ ಮಾಜಿ ಅಧ್ಯಕ್ಷ ಜಾನ್ ಎಫ್. ಕೆನಡಿಯವರು ಮಕ್ಕಳ ಬಗ್ಗೆ "Children are the worlds' most valuable resource and its best hope for the future" ಎಂದು ಹೇಳಿರುವುದು ಅರ್ಥಪೂರ್ಣವಾಗಿದೆ.



ಆರ್.ಪಿ.ಜಗದೀಶ್
ಹಿರಿಯ ಪತ್ರಕರ್ತರು
ಮೊ: 9845048051

ಸಕಾಲಿಕ

ಆಡಳಿತದಲ್ಲಿ ಹಸ್ತಕ್ಷೇಪ ಬಿಟ್ಟು; ರಾಜ್ಯ ನಾಯಕರ ಬೆನ್ನು ತಟ್ಟಿ

> ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಉಪ ಮುಖ್ಯಮಂತ್ರಿ ಡಾ.ಪರಮೇಶ್ವರ್... ಇಂತಹವರು ಪ್ರಭಾವಿ ನಾಯಕರಲ್ಲವೇ? ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅನುಭವದಲ್ಲಿ ಯಾರಿಗೆ ಕಮ್ಮಿ. ಅವರಿಗೆ ಸರಿಸಾಟಿಯಾಗುವ ಯಾವ ನಾಯಕರಿದ್ದಾರೆ. ಈ ನಾಯಕರ 'ಗ್ಯಾರಂಟಿ' ನಂಬಿಯೇ ರಾಜ್ಯದ ಮತದಾರರು ಕಾಂಗ್ರೆಸ್ ಬೆಂಬಲಿಸಿದ ಮೇಲೆ ಮತ್ತೆ ಅವರನ್ನು ವರಿಷ್ಠರ 'ಅಗ್ನಿ ಪರೀಕ್ಷೆ'ಗೆ ಗುರಿ ಮಾಡುವುದು ಪಕ್ಷದ ನಾಯಕರ ದೌರ್ಬಲ್ಯವೇ?



ರಾಜಕೀಯದಲ್ಲಿ **'ಹೈಕಮಾಂಡ್'** ಪದ್ಧತಿ ಕಾಂಗ್ರೆಸ್ ಅದರಲ್ಲೂ ವಿಶೇಷವಾಗಿ ಇಂದಿರಾಗಾಂಧಿ ಆಡಳಿತದಲ್ಲಿ ಮೊಳಕೆಯೊಡೆಯಿತು. ಒಂದು ರಾಜ್ಯದ ಮುಖ್ಯಮಂತ್ರಿ–ಉಪ ಮುಖ್ಯಮಂತ್ರಿ, ಪಕ್ಷದ ಅಧ್ಯಕ್ಷರೆಲ್ಲರನ್ನೂ ದೆಹಲಿಗೆ ಬುಲಾವ್ ಮಾಡಿ ಅವರ ಮೇಲೆ ಗದಾಪ್ರಹಾರ ಮಾಡುವುದು ಹಿಂದಿನಿಂದಲೂ ನಡೆದು ಬಂದ ದಾರಿ.

ತಮಗಿಂತ ಜನಪ್ರಿಯರಾಗಿ ತಮ್ಮ ಮೇಲೆ ಸವಾರಿ ಮಾಡಿಯಾರು ಎಂಬ ಭೀತಿಯಿಂದ, ರಾಜ್ಯದಲ್ಲಿನ ಪಕ್ಷದ ಬಲಾಢ್ಯರನ್ನು ಬಗ್ಗಿಸುವುದೇ ಇಂದಿರಾ ತಂತ್ರವಾಗಿತ್ತು. ಬಿಜೆಪಿಯೂ ಈ ಸಂಸ್ಕೃತಿಗೆ ಹೊರತಾಗಿಲ್ಲ. ಪ್ರಭಾವಿ ನಾಯಕರಾಗಿ ಮಿಂಚುತ್ತಿದ್ದ ಬಿ.ಎಸ್.ಯಡಿಯೂರಪ್ಪನವರ ವರ್ಚಸ್ಸನ್ನು ಅಡಗಿಸಿದ್ದೇ ಬಿಜೆಪಿ ವರಿಷ್ಠರು. ಅದಕ್ಕೆ ತಕ್ಕ ಬೆಲೆ ತೆತ್ತದ್ದು ಜೀವಂತ ಸಾಕ್ಷಿ. ಸ್ಥಳೀಯ ನಾಯಕರ ನಿದ್ದೆ ಕಂಗೆಡಿಸಿ ತಮ್ಮ ತಾಳಕ್ಕೆ ತಕ್ಕಂತೆ ಕುಣಿಸುವ ಹುನ್ನಾರವೇ **'ಹೈಕಮಾಂಡ್'** ಜೀತ ಪದ್ಧತಿ. ದೆಹಲಿಯ ನಾಯಕರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತಮ್ಮ ಪಕ್ಷದ್ದೇ ಸರ್ಕಾರದ ಆಡಳಿತದಲ್ಲಿ **'ಬಿರುಕು'** ತರುವ ಹುನ್ನಾರ ಹಿಂದಿನಿಂದಲೂ ನಡೆದಿದೆ. ಇದು ಹೊಸದಲ್ಲ. ಬ್ರಿಟೀಷರ ಆಳ್ವಿಕೆಯಿಂದ ನಮಗೆ ಬಂದ ಒಡೆದು ಆಳುವ ಬಳುವಳಿ.

ಮಗುವನ್ನು ಚಿವುಟಿ ತೊಟ್ಟಿಲನ್ನು ತೂಗುವುದು ಹೈಕಮಾಂಡ್ ಆಟ. ದೆಹಲಿ ದೊರೆಗಳು ರಾಜ್ಯಗಳಿಗೆ ಭೇಟಿ ನೀಡಿದಾಗ ಅವರಿಗೆ ರಾಜಾತಿಥ್ಯ ನೀಡಿ, ಉಪಚಾರ ಮಾಡುವುದರ ಜೊತೆಗೆ ಕಪ್ಪ ಕಾಣಿಕೆ ನೀಡಿ ಮರ್ಯಾದೆ ಮಾಡುವ ಪದ್ಧತಿ ರಾಜಕೀಯದಲ್ಲೀಗ ಹಾಸುಹೊಕ್ಕಾಗಿದೆ. ಇದಕ್ಕೆ ಯಾವ ಪಕ್ಷವೂ ಹೊರತಲ್ಲ. ಇದು ಜನಸಾಮಾನ್ಯರಿಗೆ ಗೊತ್ತಿಲ್ಲದ್ದೇನಲ್ಲ. **'ಹೈಕಮಾಂಡ್'** ಬುಲಾವ್ ಎಂದರೆ ಹೆಬ್ಬಾವು ತುಳಿದಂತೆ ಚಡಪಡಿಸುವುದನ್ನು ನೋಡಿದ್ದೇವೆ.

ಈಗ, ನೋಡಿ ಇಡೀ ದೇಶದಲ್ಲಿ ಕಾಂಗ್ರೆಸ್ ಆಡಳಿತದಲ್ಲಿರುವುದು ಕೆಲವೇ ರಾಜ್ಯಗಳಲ್ಲಿ ಮಾತ್ರ ಪಕ್ಷದ ಇಂತಹ ಹೀನಾಯ ಪರಿಸ್ಥಿತಿ ಯಲ್ಲಿಯೂ, ರಾಜ್ಯದಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನಿರೀಕ್ಷೆಗೂ ಮೀರಿ ಜಯಭೇರಿ ಬಾರಿಸಿದೆ. ಇದನ್ನು ಮೆಚ್ಚಿ ಶಹಬಾಸ್ ಎನ್ನುವ ಬದಲು ಮೊಸರಲ್ಲಿ ಕಲ್ಲು ಹುಡುಕಿದಂತೆ, ರಾಜ್ಯ ಸರ್ಕಾರವನ್ನೇ ಅಂದರೆ ಇಡೀ ಸಂಪುಟದ ಸದಸ್ಯರನ್ನೆಲ್ಲಾ ಸಾರಾಸಗಟಾಗಿ ದೆಹಲಿಗೆ ಬರುವಂತೆ 'ಆರ್ಡರ್' ಮಾಡಿದ್ದು ಪ್ರಜಾಪ್ರಭುತ್ವದ ಅಣಕವಲ್ಲವೇ?

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಉಪ ಮುಖ್ಯಮಂತ್ರಿ ಡಾ.ಪರಮೇಶ್ವರ್... ಇಂತಹವರು ಪ್ರಭಾವಿ ನಾಯಕರಲ್ಲವೇ? ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅನುಭವದಲ್ಲಿ ಯಾರಿಗೆ ಕಮ್ಮಿ. ಅವರಿಗೆ ಸರಿಸಾಟಿಯಾಗುವ ಯಾವ ನಾಯಕರಿದ್ದಾರೆ. ಈ ನಾಯಕರ **'ಗ್ಯಾರಂಟಿ'** ನಂಬಿಯೇ ರಾಜ್ಯದ ಮತದಾರರು ಕಾಂಗ್ರೆಸ್ ಬೆಂಬಲಿಸಿದ ಮೇಲೆ ಮತ್ತೆ ಅವರನ್ನು ವರಿಷ್ಠರ 'ಅಗ್ನಿ ಪರೀಕ್ಷೆ'ಗೆ ಗುರಿ ಮಾಡುವುದು ಪಕ್ಷದ ನಾಯಕರ ದೌರ್ಬಲ್ಯವೇ?

ಸಿದ್ದರಾಮಯ್ಯ ನೇತೃತ್ವದಲ್ಲಿ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದು ಮೂರು ತಿಂಗಳು ಕಂಡಿಲ್ಲ ಆಗಲೇ 'ಕಿವಿ ಹಿಂಡುವ' ಅನಿವಾರ್ಯತೆ ಹಿಂದಿರುವ ಹುನ್ನಾರವೇನು?

1989 ಬಿಟ್ಟರೆ, ಇತ್ತೀಚಿನ ವರ್ಷಗಳಲ್ಲಿ ಯಾವುದೇ ರಾಜಕೀಯ ಪಕ್ಷ ಇಷ್ಟು ಸಂಖ್ಯೆಯಲ್ಲಿ ಗೆದ್ದು ಬಂದು ಅಧಿಕಾರಕ್ಕೇರಿದ ನಿದರ್ಶನವಿಲ್ಲ. ಶಾಸಕರ ಸಂಖ್ಯೆ ಹೆಚ್ಚಾದಷ್ಟೂ ತಲೆನೋವು ಜಾಸ್ತಿ. ಹೀಗಾಗಿ ಅತೃಪ್ತ ಶಾಸಕರನ್ನು ತೃಪ್ತಿಪಡಿಸುವುದೇ ಸಾಹಸದ ಕೆಲಸ. 'ಗ್ಯಾರಂಟಿ' ಭಾರಾಟೆಯಲ್ಲಿ ಶಾಸಕರಿಗೆ ನೀಡುತ್ತಿದ್ದ ವಾರ್ಷಿಕ ನಿಧಿಗೆ ಕಲ್ಲು ಹಾಕಿರುವುದು ಹಾಗೂ ವರ್ಗಾವರ್ಗಿ ವಿಚಾರದಲ್ಲಿ ಅವರ ಮಾತಿಗೆ ಮನ್ನಣೆ ದೊರೆಯದೆ ಇರುವುದು ಜನಪ್ರತಿನಿಧಿಗಳ ಆಕ್ರೋಶಕ್ಕೆ ಕಾರಣವಾಗಿದೆ.

'ಗ್ಯಾರಂಟಿ' ಯೋಜನೆಗಳ ಜಾರಿ ಜೊತೆಗೆ, ಅತೃಪ್ತಗೊಂಡಿರುವ ಶಾಸಕರ ದುಃಖ–ದುಮ್ಮಾನಕ್ಕೆ ಮನ್ನಣೆ ನೀಡುವುದರಲ್ಲಿಯೇ ಸರ್ಕಾರಕ್ಕೆ ಸಾಕು ಸಾಕಾಗಿ ಹೋಗಿದೆ. ಇಂಥ ಪರಿಸ್ಥಿತಿಯಲ್ಲಿ ಎಲ್ಲಾ ಸಚಿವರನ್ನು ದೆಹಲಿಗೆ ಕರೆಸಿ ಹೈಕಮಾಂಡ್ ಮುಂದೆ **'ಪರೇಡ್'** ಮಾಡಿದ್ದು, ಬುದ್ಧಿ ಹೇಳುವ ನಾಟಕ ಮಾಡಿದ್ದು, ರಾಜ್ಯದ ಮತದಾರರಿಗೆ ಮಾಡಿದ ಅವಮಾನ. ಮಂತ್ರಿ ಮಂಡಲದ ಸದಸ್ಯರನ್ನೆಲ್ಲಾ ದೆಹಲಿಗೆ ಕರೆಸಿ ನೀತಿಪಾಠ ಹೇಳಿದ್ದು ಹೈಕಮಾಂಡ್ ವರ್ಚಸ್ಸಿಗೆ ಧಕ್ಕೆ ತಂದುಕೊಂಡಂತಾಗಿದೆ. ಮಂತ್ರಿ ಮಂಡಲದಲ್ಲಿರುವವರೆಲ್ಲಾ ಬಹುತೇಕ ಮಂದಿ ಹಿರಿಯರು, ಅನುಭವಿಗಳು. ಕೆಲವರು ಮಾತ್ರ ಹೊಸ ಸಚಿವರಿರಬಹುದು. ಹಿರಿಯರಿಗೆ ಈ **'ಶಿಕ್ಷೆ'** ಯಾವ ಅಪರಾಧಕ್ಕಾಗಿ. ಸ್ಪಷ್ಟಪಡಿಸಲೇಬೇಕಿದೆ.

ಶಾಸಕರ ಮಾತಿಗೆ ಕಿಮ್ಮತ್ತು ಸಿಗದಿರುವುದು, ಅಭಿವೃದ್ಧಿ ಕಾರ್ಯಗಳಿಗೆ ಕಡಿವಾಣ, ಕಡತ ಗಳ ವಿಲೇವಾರಿಗೆ ಬ್ರೇಕ್... ಹೀಗೆ ಮುಂದುವರಿದರೆ ಶಾಸಕರು ಸಿಡಿದೇಳುವುದು **'ಗ್ಯಾರಂಟಿ'**. ಅಪಸ್ವರ ಧ್ವನಿ ಗಟ್ಟಿಯಾಗುವ ಮೊದಲೇ ಚಿವುಟಿ ಹಾಕುವುದು ಉತ್ತಮ. ಸ್ಥಳೀಯ ನಾಯಕರ ಮಾತಿಗೆ ಮನ್ನಣೆ ನೀಡಿ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದರೆ ಆಗ ಸುಧಾರಣೆ ಕಾಣಬಹುದು. ದೆಹಲಿ ಹಿಡಿತ ಇಲ್ಲವೇ **'ಮಾರ್ಗದರ್ಶನ'** ಸದ್ಯಕ್ಕೆ ಅಗತ್ಯವಿಲ್ಲ. ಹೈಕಮಾಂಡ್ ಬಹು ಎಚ್ಚರಿಕೆ ನಡೆ ಇಡಬೇಕು. ಇಲ್ಲದಿದ್ದರೆ **'ಕೈ'**ಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂಬ ಗಾದೆಯಂತಾಗುತ್ತದೆ.

ದೆಹಲಿಯಲ್ಲಿ ಕುಳಿತು ರಾಜ್ಯ ನಾಯಕರಿಗೆ **ಮೂಗುದಾರ** ಹಾಕುವ ಸಂಸ್ಕೃತಿಯನ್ನು ಇನ್ನಾದರೂ ಕೈಬಿಡುವುದು ಒಳ್ಳೆಯದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಾಳೆ ಭಾನುವಾರ ಕೆ.ಬಿ.ಗಣಪತಿಯವರ 'ಲೈಫ್ ಅಂಡ್ ಟೈಮ್ಸ್' ಪುಸ್ತಕ ಬಿಡುಗಡೆ

ಮೈಸೂರು, ಆ. 4– ಮೈಸೂರಿನ ಸಂವಹನ ಪ್ರಕಾಶನದ ವತಿಯಿಂದ ಹಿರಿಯ ಪತ್ರಕರ್ತರು ಹಾಗೂ 'ಸ್ಟಾರ್ ಆಫ್ ಮೈಸೂರು' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿಯವರ 'ಲೈಫ್ ಅಂಡ್ ಟೈಮ್ಸ್' ಪುಸ್ತಕ ಬಿಡುಗಡೆ ಸಮಾರಂಭವನ್ನು ಆ. 6 ರ ಭಾನುವಾರ ಬೆಳಗ್ಗೆ 11 ಗಂಟೆಗೆ ಹುಣಸೂರು ರಸ್ತೆಯಲ್ಲಿರುವ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.



ಅರುಣಾಚಲ ಪ್ರದೇಶದ ಇಟಾನಗರದ ರಾಜೀವ್ ಗಾಂಧಿ ಕೇಂದ್ರೀಯ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಕೆ.ಸಿ. ಬೆಳ್ಳಿಯಪ್ಪ ಪುಸ್ತಕ ಲೋಕಾರ್ಪಣೆ ಮಾಡುವರು. ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ ಅಧ್ಯಕ್ಷತೆ ವಹಿಸುವರು.

ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಸಿ. ನಾಗಣ್ಣ ಕೃತಿ ಕುರಿತು ಮಾತನಾಡುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ. ಎಂ.ಆರ್. ರವಿ ಭಾಗವಹಿಸುವರು.

ಲೇಖಕ ಕೆ.ಬಿ. ಗಣಪತಿ ಮತ್ತು ಸಂವಹನ ಪ್ರಕಾಶನದ ಪ್ರಕಾಶಕರಾದ ಡಿ.ಎನ್. ಲೋಕಪ್ಪ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ಇದೇ ವೇಳೆ ಕಾರ್ಯಕ್ರಮದ ಸ್ಥಳದಲ್ಲಿ 350 ರೂ.ಗಳ ಮುಖಬೆಲೆಯ ಪುಸ್ತಕವನ್ನು 200 ರೂ.ಗಳಿಗೆ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು. ಪುಸ್ತಕ ಖರೀದಿಸಲು ಇಚ್ಛಿಸುವವರು ಪ್ರಕಾಶಕರು, ಮೊ.99026–39593 ಅಥವಾ 95354–61948 ಅನ್ನು ಸಂಪರ್ಕಿಸಬಹುದು.

ಜ್ಞಾನವಾಪಿ ಪ್ರಕರಣ: ಮಸೀದಿ ಸಮಿತಿ ಅರ್ಜಿ ವಜಾಗೊಳಿಸಿದ 'ಸುಪ್ರೀಂ'

ನವದೆಹಲಿ: ಜ್ಞಾನವಾಪಿ ಮಸೀದಿಯಲ್ಲಿ ಎಎಸ್ಐ ಸಮೀಕ್ಷೆ ನಡೆಸಲು ಅಹಮದಾಬಾದ್ ಹೈಕೋರ್ಟ್ ನೀಡಿದ ಆದೇಶವನ್ನು ವಿರೋಧಿಸಿ ಅಂಜುಮನ್ ಇಂತೇಜಮಿಯಾ ಮಸೀದಿ ಸಮಿತಿ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದೆ.

ಜ್ಞಾನವಾಪಿ ಮಸೀದಿಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ(ಎಎಸ್ಐ) ಸಮೀಕ್ಷೆಯು ಇತಿಹಾಸವನ್ನು ಕೆದಕುತ್ತದೆ. ಇದು 'ಹಿಂದಿನ ಗಾಯಗಳನ್ನು ಮತ್ತೆ ತೆರೆದಂತಾಗುತ್ತದೆ' ಎಂದು ಮುಸ್ಲಿಂ ಸಂಘಟನೆ ಅಂಜುಮನ್ ಇಂತೇಜಾಮಿಯಾ ಮಸೀದಿ ಸಮಿತಿ ಸುಪ್ರೀಂಕೋರ್ಟ್‌ನಲ್ಲಿ ವಾದಿಸಿತ್ತು.

ಮಸೀದಿ ನಿರ್ವಹಣಾ ಸಮಿತಿಯ ಪರವಾಗಿ ಹಾಜರಾದ ಹಿರಿಯ ವಕೀಲ ಹುಝೆಫಾ ಅಹ್ಮದಿ, ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ನೇತೃತ್ವದ ಪೀಠದ ಮುಂದೆ ವಾದಿಸಿದ್ದು, ASI ಕ್ರಮ 'ಇತಿಹಾಸವನ್ನು ಅಗೆಯುತ್ತಿದೆ'. ಇದು ಪೂಜಾ ಸ್ಥಳಗಳ ಕಾಯ್ದೆಯನ್ನು ಉಲ್ಲಂಘಿಸುತ್ತದೆ. ಇದು ಭ್ರಾತೃತ್ವ ಮತ್ತು ಜಾತ್ಯತೀತತೆಯ ಪ್ರಭಾವ ಬೀರುತ್ತದೆ ಎಂದು ವಾದಿಸಿದ್ದರು.

ನೀವು ಒಂದೇ ಒಂದು ಆಧಾರದ ಮೇಲೆ ಪ್ರತಿ ಮಧ್ಯಂತರ ಆದೇಶವನ್ನು ವಿರೋಧಿಸಲು ಸಾಧ್ಯವಿಲ್ಲ. ನಿಮ್ಮ ಆಕ್ಷೇಪಣೆಗಳನ್ನು ವಿಚಾರಣೆಯ ಸಮಯದಲ್ಲಿ ನಿರ್ಧರಿಸಲಾಗುತ್ತದೆ ಎಂದು ನ್ಯಾಯಮೂರ್ತಿಗಳಾದ ಜೆ ಬಿ ಪರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠ ಹೇಳಿದೆ.

ಜ್ಞಾನವಾಪಿ ಮಸೀದಿಯಲ್ಲಿ ಎಎಸ್ಐ ಸಮೀಕ್ಷೆಗೆ ಅನುಮತಿ ನೀಡಿದ ಅಲಹಾಬಾದ್ ಹೈಕೋರ್ಟ್ ಆದೇಶದ ವಿರುದ್ಧ ಮಸೀದಿ ಸಮಿತಿಯ ಮನವಿಯನ್ನು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆದಿತ್ತು.

ಮಸೀದಿಯನ್ನು ಈ ಮೊದಲು ಕಟ್ಟಲಾಗಿದ್ದ ದೇವಾಲಯದ ಮೇಲೆ ನಿರ್ಮಿಸಲಾಗಿದೆಯೇ ಎಂದು ನಿರ್ಧರಿಸಲು ಸಮೀಕ್ಷೆ ನಡೆಸುವಂತೆ ಎಎಸ್ಐಗೆ ಆದೇಶವನ್ನು ಪ್ರಶ್ನಿಸಿ ಜ್ಞಾನವಾಪಿ ಸಮಿತಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಕೌಶಲ್ಯ ಅಭಿವೃದ್ಧಿಗೊಳಿಸಿ; ಉದ್ಯೋಗಾವಕಾಶ ಕಲ್ಪಿಸಿ

ಇಲಾಖಾ ಅಧಿಕಾರಿಗಳಿಗೆ ಡಿಸಿ ಡಾ. ಕೆ.ವಿ. ರಾಜೇಂದ್ರ ಸಲಹೆ



ಮೈಸೂರು, ಆ. 4(ಆರ್‌ಕೆ)– ಕೌಶಲ್ಯಾಭಿವೃದ್ಧಿಗೊಳಿಸುವ ಮೂಲಕ ವಿದ್ಯಾವಂತ ನಿರುದ್ಯೋಗಿ ಯುವ ಸಮೂಹಕ್ಕೆ ಉದ್ಯೋಗಾವಕಾಶ ಕಲ್ಪಿಸಿ ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಇಂದಿಲ್ಲಿ ಅಧಿಕಾರಿಗಳಿಗೆ ಸಲಹೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಮೈಸೂರಿನ ಸಂದೇಶ್ ದಿ ಪ್ರಿನ್ಸ್ ಹೋಟೆಲ್ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಇಂಡಸ್ಟ್ರಿಯಲ್ ಕಾನ್‌ಕ್ಲೇವ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಅಭಿವೃದ್ಧಿಪಡಿಸಿರುವ ಕರ್ನಾಟಕ ಸ್ಕಿಲ್ ಕನೆಕ್ಟ್ ಪೋರ್ಟಲ್ ಮೂಲಕ ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಿಸಿ ಅವರ ವಿದ್ಯಾರ್ಹತೆ, ಕೌಶಲ್ಯ, ನೈಪುಣ್ಯತೆ, ಆಸಕ್ತಿಗನುಸಾರ ಸಂಬಂಧಪಟ್ಟ ಕಂಪನಿಗಳಲ್ಲಿ ಉದ್ಯೋಗ ಕಲ್ಪಿಸಬೇಕೆಂದು ತಿಳಿಸಿದರು.

ನಗರಗಳಂತೆ ಗ್ರಾಮೀಣ ಪ್ರದೇಶದ ವಿದ್ಯಾವಂತರಿಗೂ ವಿವಿಧ ಕಂಪನಿಗಳಲ್ಲಿ ಉದ್ಯೋಗಾವಕಾಶ ಕಲ್ಪಿಸುವ ಅಗತ್ಯವಿದೆ. ಅದಕ್ಕೆ ಅಗತ್ಯವಿರುವ ಕೌಶಲ್ಯ ತರಬೇತಿ ನೀಡುವ ಜೊತೆಗೆ ಅವಕಾಶಗಳಿರುವ ಕ್ಷೇತ್ರಗಳ ಮಾಹಿತಿ ನೀಡಬೇಕೆಂದು ಅವರು ನುಡಿದರು.

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ಕಾರ್ಯನಿರ್ವಾಹಕ ನಿರ್ದೇಶಕ ಕೃಷ್ಣಕುಮಾರ್ ಸ್ಕಿಲ್ ಕನೆಕ್ಟ್ ಪೋರ್ಟಲ್ ಮೂಲಕ ವಿದ್ಯಾರ್ಥಿಗಳ ರೆಸ್ಯೂಮ್‌ಗಳನ್ವಯ ಕೈಗಾರಿಕೆಗಳು, ಕಂಪನಿಗಳಲ್ಲಿ ಅವಕಾಶ ಕಲ್ಪಿಸಲು ನಿಗಮವು ಕೈಗೊಂಡಿರುವ ಪ್ರಕ್ರಿಯೆ ಕುರಿತು ವಿವರಿಸಿದರು.

ಮೈಸೂರು ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕಿ ಸವಿತ, ಕೌಶಲ್ಯಾಭಿವೃದ್ಧಿ ಅಧಿಕಾರಿಗಳಾದ ನಾರಾಯಣಸ್ವಾಮಿ, ಸುದರ್ಶನ ಹಾಗೂ ಇತರರು ಕಾನ್‌ಕ್ಲೇವ್‌ನಲ್ಲಿ ಪಾಲ್ಗೊಂಡಿದ್ದರು. ಮೈಸೂರು ಸುತ್ತಮುತ್ತಲಿನ ಸುಮಾರು 100ಕ್ಕೂ ಹೆಚ್ಚು ಪ್ರತಿನಿಧಿಗಳು, ಶಿಕ್ಷಣ ಸಂಸ್ಥೆ ಮುಖ್ಯಸ್ಥರು ಈ ಸಂದರ್ಭ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು,ಆ.4– ಕಡಕೋಳ ಪಟ್ಟಣ ಪಂಚಾಯಿತಿಯು 2023–24 ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಹಾಗೂ ಪಟ್ಟಣ ಪಂಚಾಯಿತಿ ಅನುದಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶೇ.24.10 ಇತರೆ ಹಿಂದುಳಿದ ವರ್ಗಗಳಿಗೆ ಶೇ.7.25, ವಿಕಲಚೇತನರಿಗೆ ಶೇ.5 ಪುರಸಭಾ ಸಾಮಾನ್ಯ ನಿಧಿಯ ವಿವಿಧ ಯೋಜನೆಗಳಿಗೆ ವೈಯಕ್ತಿಕ ಸೌಲಭ್ಯವನ್ನು ಕಲ್ಪಿಸಲು ಅರ್ಜಿಯನ್ನು ಅಹ್ವಾನಿಸಲಾಗಿದೆ.

ಸಂಬಂಧಿತ ದಾಖಲೆಗಳೊಂದಿಗೆ ಪಟ್ಟಣ ಪಂಚಾಯಿತಿ ಕಾರ್ಯಾಲಯಕ್ಕೆ ಸಲ್ಲಿಸುವಂತೆ ತಿಳಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಯೋಜನಾ ಶಾಖೆಯನ್ನು ಸಂಪರ್ಕಿಸುವಂತೆ ಕಡಕೋಳ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಜಿ.ವಿ. ಸುನೀಲ್ ಬಾಬು ರವರು ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತನ್ನು ಸದರಿ ಸ್ವತ್ತಿನ ಮಾಲೀಕರಾದ ಸಾದಿಕ್ ಅಹಮ್ಮದ್‌ರವರಿಂದ ಶುದ್ಧ ಕ್ರಯಕ್ಕೆ ಪಡೆದುಕೊಳ್ಳುವ ಇಚ್ಛೆಯನ್ನು ಹೊಂದಿದ್ದು, ಈ ಸಂಬಂಧ ನಮ್ಮ ಕಕ್ಷಿದಾರರು ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆಯನ್ನು ನೀಡುತ್ತಿದ್ದಾರೆ.

ಷೆಡ್ಯೂಲ್ ಸ್ವತ್ತಿನ ಮಾಲೀಕರು ಹಾಲಿ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅಥವಾ ಷೆಡ್ಯೂಲ್ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ವ್ಯಕ್ತಿಗಳು/ಸಂಘ ಸಂಸ್ಥೆ, ಬ್ಯಾಂಕ್, ಹಣಕಾಸು ಸಂಸ್ಥೆಗಳು ಯಾವುದೇ ರೀತಿಯ ಹಕ್ಕು, ವಾರಸು, ಮಾಲೀಕತ್ವ ಹಾಗೂ ಇನ್ನಿತರೆ ಯಾವುದೇ ರೀತಿಯ ಮಾಲೀಕತ್ವವನ್ನು ಹೊಂದಿದ್ದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿಗಳು ಈ ಕೆಳಗೆ ಸಹಿ ಮಾಡಿರುವ ವಕೀಲರ ವಿಳಾಸಕ್ಕೆ ಸೂಕ್ತ ದಾಖಲಾತಿಗಳ ಸಮೇತ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದಂತಹ ಹೈದಿನೈದು (15) ದಿನಗಳೊಳಗಾಗಿ ಲಿಖಿತವಾಗಿ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ಮೇಲೆ ತಿಳಿಸಿದಂತಹ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಾರದೇ ಇದ್ದಂತಹ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸುತ್ತಾರೆಂತಲೂ ಮತ್ತು ಅನಂತರ ಬರುವಂತಹ ಯಾವುದೇ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲವೆಂತಲೂ ಈ ಮೂಲಕ ತಿಳಿಯಪಡಿಸಲಾಗುತ್ತಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಐಟಂ ನಂ. 1 : ಮೈಸೂರು ನಗರ, ಲಷ್ಕರ್ ಮೊಹಲ್ಲಾ, ದಾವುದ್ ಖಾನ್ ರಸ್ತೆ, 3ನೇ ಕ್ರಾಸ್, ಮನೆ ನಂ. 3153 ಹೊಸ ನಂ. ಎಲ್–7 ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ: 30.00 ಅಡಿಗಳು ಮತ್ತು ದಕ್ಷಿಣೋತ್ತರ: (28.10+22.50)/2 ಅಡಿಗಳು, ಒಟ್ಟು ವಿಸ್ತೀರ್ಣ 760.00 ಚದರ ಅಡಿಗಳುಳ್ಳ ನಿವೇಶನ ಮತ್ತು ಇದರಲ್ಲಿ ನಿರ್ಮಿಸಿರುವ 7.60 ಚದರ ವಾಸದ ಮನೆ ಸ್ವತ್ತಿಗೆ ಚಕ್ಕುಬಂದಿ:–

ಪೂರ್ವಕ್ಕೆ: ದಾವುದ್ ಖಾನ್ 3ನೇ ಕ್ರಾಸ್ ರಸ್ತೆ 9.00 ಮೀ ರಸ್ತೆ, **ಪಶ್ಚಿಮಕ್ಕೆ:** ರಿಜ್ವನ್ ರವರ ಸ್ವತ್ತು (ಸ್ವತ್ತಿನ ಸಂಖ್ಯೆ 3153 ಹೊಸ ನಂ. ಎಲ್–7), **ಉತ್ತರಕ್ಕೆ:** ಸೈಯದ್ ಜಫರ್ ರವರ ಸ್ವತ್ತು , **ದಕ್ಷಿಣಕ್ಕೆ:** ನಸಿರ್ ಅಹಮದ್ ಮತ್ತು ಅಸಿಫ ಬೇಗಮ್ ರವರ ಸ್ವತ್ತು (ಸ್ವತ್ತಿನ ಸಂಖ್ಯೆ 3153/ಎ ಹೊಸ ನಂ. ಎಲ್–7/ಎ)

ಐಟಂ ನಂ. 2: ಮೈಸೂರು ನಗರ, ಲಷ್ಕರ್ ಮೊಹಲ್ಲಾ, ದಾವುದ್ ಖಾನ್ ರಸ್ತೆ, 3ನೇ ಕ್ರಾಸ್, ಮನೆ ನಂ. 3153/ಎ ಹೊಸ ನಂ. ಎಲ್–7/ಎ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ: (33.60+32.50)/2 ಅಡಿಗಳು ಮತ್ತು ದಕ್ಷಿಣೋತ್ತರ: (42.30+52.90)/2 ಅಡಿಗಳು, ಒಟ್ಟು ವಿಸ್ತೀರ್ಣ 1574.00 ಚದರ ಅಡಿಗಳುಳ್ಳ ನಿವೇಶನ ಮತ್ತು ಇದರಲ್ಲಿ ನಿರ್ಮಿಸಿರುವ 7.00 ಚದರ ವಾಸದ ಮನೆ ಸ್ವತ್ತಿಗೆ ಚಕ್ಕುಬಂದಿ:–

ಪೂರ್ವಕ್ಕೆ: ಕ್ರಾಸ್ ರಸ್ತೆ, **ಪಶ್ಚಿಮಕ್ಕೆ:** 3153 ಹೊಸ ನಂ. ಎಲ್–7 ರ ಉಳಿಕೆ ಸ್ವತ್ತು, **ಉತ್ತರಕ್ಕೆ:** 3153 ಹೊಸ ನಂ. ಎಲ್–7 ರ ಉಳಿಕೆ ಸ್ವತ್ತು, **ದಕ್ಷಿಣಕ್ಕೆ:** ದಾವುದ್ ಖಾನ್ ರಸ್ತೆ

ದಿನಾಂಕ : 04–08–2023
ಸ್ಥಳ : ಮೈಸೂರು

ಜಯಕುಮಾರ್
ವಕೀಲರು
ಕಛೇರಿ: ನಂ. 565/ಂ, 20ನೇ ಕ್ರಾಸ್, 4ನೇ ಮೇನ್, 1ನೇ ಹಂತ, ವಿದ್ಯಾರಣ್ಯಪುರಂ, ಮೈಸೂರು –570008'
ಮೊಬೈಲ್ ನಂ. 9844539729

ಮೆಕ್ಸಿಕೊದಲ್ಲಿ ಕಂದಕಕ್ಕೆ ಬಸ್ ಉರುಳಿ 17 ಪ್ರಯಾಣಿಕರ ಸಾವು

ಮೆಕ್ಸಿಕೊ, ಆ.4– ಗುರುವಾರ ಮುಂಜಾನೆ ಮೆಕ್ಸಿಕೊದ ಪೆಸಿಫಿಕ್ ಕರಾವಳಿ ರಾಜ್ಯವಾದ ನಯರಿತ್‌ನಲ್ಲಿ ಬಸ್ ಒಂದು ಹೆದ್ದಾರಿ ಬಿಟ್ಟು ಕಡಿದಾದ ಬೆಟ್ಟದಿಂದ ಉರುಳಿ ಬಿದ್ದ ಪರಿಣಾಮ ಕನಿಷ್ಠ 17 ಪ್ರಯಾಣಿಕರು ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರು ಮಂದಿ ಭಾರತೀಯರು ಸೇರಿದಂತೆ 40 ಮಂದಿ ಪ್ರಯಾಣಿಸುತ್ತಿದ್ದರು, ಘಟನೆಯಲ್ಲಿ 22 ಮಂದಿ ಗಾಯಗೊಂಡಿದ್ದಾರೆ. ಅವರ ಆರೋಗ್ಯಸ್ಥಿತಿ ಸ್ಥಿರವಾಗಿದೆ ಎಂದು ಉನ್ನತ ಅಧಿಕಾರಿಗಳು ಹೇಳಿದ್ದಾರೆ. ಮೆಕ್ಸಿಕೊದ ನಯಾರಿತ್ ರಾಜ್ಯದಲ್ಲಿ ಈ ದುರ್ಘಟನೆ ನಡೆದಿದ್ದು, ಪರಿಹಾರ ಕಾರ್ಯಾಚರಣೆ ತೀರಾ ಕಷ್ಟಕರವಾಗಿದೆ ಎಂದು ಭದ್ರತಾ ಮತ್ತು ನಾಗರಿಕ ಸುರಕ್ಷಾ ಕಾರ್ಯದರ್ಶಿ ಜಾರ್ಜ್ ಬೆನಿಟೊ ರಾಡ್ರಿಗಸ್ ಹೇಳಿದ್ದಾರೆ. 14 ಮಂದಿ ಮಕ್ಕಳು ಹಾಗೂ ಮೂವರು ದುರಂತದಲ್ಲಿ ಮೃತಪಟ್ಟಿದಾರೆ.



ಕೃಷ್ಣರಾಜನಗರದ ಹಿರಿಯ ಶ್ರೇಣಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿರವರ ನ್ಯಾಯಾಲಯದಲ್ಲಿ

ಅಸಲು ದಾವಾ.ಸಂಖ್ಯೆ.27/2022.

ವಾದಿ:1 ಕೆ.ಎಸ್. ಸಿದ್ದಣ್ಣಯ್ಯ. ಬಿನ್ ಕೆ.ಎಸ್. ಶಿವಲಿಂಗಪ್ಪ, ಸುಮಾರು 78 ವರ್ಷ. ವಾರ್ಡ್ ನಂ.15. ಬಸವೇಶ್ವರ ಬ್ಲಾಕ್, ಕೆ.ಆರ್.ನಗರ ಟೌನ್, ಹಾಲಿ ವಾಸ ನಂ.1492–ಈ ಮತ್ತು ಎಫ್.ಬ್ಲಾಕ್. 15ನೇ ಕ್ರಾಸ್.ರಾಮಕೃಷ್ಣ ನಗರ. ಮೈಸೂರು.

ವಿರುದ್ಧ

ಪ್ರತಿವಾದಿಗಳು: 1. ಕೆ.ಜಿ.ಕವಿತ ಬಿನ್ ಲೇಟ್ ಜಗದೀಶ. 2.ಎಸ್.ವಿ.ಸುರೇಶ ಬಿನ್ ವೈಸಬೇಒದ್ರ ಏಳಾಸ 15ನೇ ವಾರ್ಡ್. ಬಸವೇಶ್ವರ ಬ್ಲಾಕ್. ಕೆ.ಆರ್.ನಗರ ಟೌನ್, ಮೈಸೂರು ಜಿಲ್ಲೆ.

ಸಾರ್ವಜನಿಕ ಪ್ರಕಟಣೆಯ ಕೃಪೆಗಾಗಿ

ನಮ್ಮ ಕಕ್ಷಿದಾರರಾದ ಕೆ.ಎಸ್.ಸಿದ್ದಣ್ಣಯ್ಯ ಬಿನ್ ಕೆ.ಎಸ್.ಶಿವಲಿಂಗಪ್ಪರವರು 2ನೇ ಪ್ರತಿವಾದಿಯ ವಿರುದ್ಧ ದಾವ ಷೆಡ್ಯೂಲ್ ಸ್ವತ್ತಿನ ಕುರಿತಾಗಿ ಮಾಲಿಕತ್ವ ಪಡೆದುಕೊಳ್ಳಲು ಕೃಷ್ಣರಾಜನಗರದ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಆದೇಶ ನೀಡಬೇಕೆಂದು ಕೋರಿ ದಾವೆ ಸಲ್ಲಿಸಿರುತ್ತಾರೆ. ಸದರಿ ನಮ್ಮ ಕಕ್ಷಿದಾರರ ದಾವೆಯ ಬಗ್ಗೆ ಏನಾದರು ತಕರಾರು ಇದ್ದಲ್ಲಿ ದಿನಾಂಕ 28–08–2023 ರಂದು ತೆರೆದ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸಬಹುದು ಒಂದು ವೇಳೆ ಯಾವುದೇ ತಕರಾರು ಬಾರದೇ ಇದ್ದ ಪಕ್ಷದಲ್ಲಿ ಏಕಪಕ್ಷೀಯವಾಗಿ ಆದೇಶ ನೀಡಲಾಗುವುದು ಎಂದು ಈ ಪ್ರಕಟಣೆ ಮೂಲಕ ನೋಟಿಸ್ ಜಾರಿಮಾಡಲಾಗಿದೆ.

Sworn to before me,
Sd/- Sheristedar, Senior Civil Judge &,JMFC Court , K.R.Nagar

ಅರ್ಜಿದಾರರ ಪರ ವಕೀಲರು
ಸಹಿ/– ಡಿ.ಸಿ.ಗೋವಿಂದ ರಾಜು

ದಿನಾಂಕ: 28–07–2023.
ಸ್ಥಳ: ಕೆ.ಆರ್ .ನಗರ.

PUBLIC NOTICE

Pursuant to the instructions from and on behalf of my client, I do hereby serve the following Notice to the General Public.

That the property as more particularly described in the schedule hereunder belongs to Sri. Nithin Kumar Mittal son of Sri. Krishan Mittal, aged about 50 years, residing at No.19/1, 5th Main, 3rd Block, Jayalakshmipuram, Mysore, Karnataka - 570012 having Aadhar Card No. 6621 8200 9699 and the said Sri. Nithin Kumar Mittal has offered to sell the schedule property in favor of my client.

Therefore, any person(s) having any claim in respect of the above referred property or part thereof by way of Sale, Exchange, Mortgage, Charge, Gift, Maintenance, Inheritance, possession, Lease, Tenancy, Sub tenancy, Lien, License, Hypothecation, Transfer of title or beneficial interest under any Trust right of prescription or pre-emption under any Agreement or other disposition or under any Decree, Order or Award or otherwise claiming, howsoever, are hereby requested to make the same known in writing together with supporting documents to the undersigned at my office at No. 1037, CH 5/1, Devaparthiva Road, Chamarajapuram, Mysore 570005 +91 9482584824 within a period of 7 (Seven) days (both days inclusive) of the publication hereof failing which the claim of such person(s) will deemed to have been waived and/or abandoned.

SCHEDULE

All that piece and parcel of the immovable property being agricultural wet land bearing survey No. 87/9 (Old Sy. No. 87/2, 87/P1), an extent of 3.00 Acres (Three Acres), situated at Anagalli Village, Belgola Hobli, Srirangapatna Taluq, Mandya District and Bounded by: East by: Property belonging to Chetan Mittal bearing Sy.No. 82/2 West by: Road, North by: Land bearing Sy.No.87/1, South by: JCK Industrial Area company property

Dated: 4th Day of August 2023, Mysuru

Sd/- SRINIDHI, Advocate and Law Consultant, Office at No. 1037, CH 5/1, Devaparthiva Road, Chamarajapuram, Mysuru-570005, +91 9482584824

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕಳೆದಿದೆ

ಅಮೂಲ್ಯ D/o ಜಿ.ಎಲ್ ಕರುಣಾಕರ್, ಮೈಸೂರು ಜಿಲ್ಲೆ , ಕೆ. ಹೆಚ್. ಬಿ. ಕಾಲೋನಿ, ಹೂಟಗಳ್ಳಿ, ಸಿ.ಎಂ. ಕಿಶೋರ್ ಹೆಸರಿನಲ್ಲಿದ್ದ ಹುಣಸೂರು ತಾಲ್ಲೂಕು ಅಂಕನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ 99/1 ಬಡಾವಣೆ ಜಂಜರ್ ನಂ 289, ಸೈಟ್ ನಂ 132, ದಸ್ತಾವೇಜು ನಂಬರ್ HUN -1-01056-2009-10 ಸಿಡಿ ನಂಬರ್ HUND46 ನೇದ್ದರಲ್ಲಿ ದಿ: 01.06.2009 ರಂದು ನೋಂದಾಯಿಸಲಾದ ಸೇಲ್ ಡೀಡ್ ಪತ್ರವು ಕಳೆದುಹೋಗಿರುತ್ತದೆ. ಸಿಕ್ಕವರು ಸಂಪರ್ಕಿಸಿ.

7337839775

PUBLIC NOTICE

Notice is given to the general public at large that my client is negotiating and intending to purchase the notice schedule property from its owner CHAITRA BHARATH W/o Bharath. D and D/o Dr. Vasanth Kumar, aged about 35 years, resident of # 126, 5th Cross, 2nd Stage, Brindavan Extension, Mysuru - 570020. The present owner has derived title upon the Schedule Property in pursuant of the Deed of Gift Dated 19-08-2023 execute by her father. The original of the registered Deed of Gift has been lost. Any individuals, banks, financial institutions, agreement holders etc having any objections for my client entering into any transaction with respect to the schedule property is hereby required to communicate their objections in writing to my office with documentary evidence within 07 days from the date of this publication. In the absence of any authenticated objections/claims, my client will proceed to complete the transaction of sale and no claim in this regard will be entertained thereafter.

SCHEDULE OF THE PROPERTY: All that piece and parcel of the house property bearing No. 227, 8th Main 'A' Block, situated at III Stage, Vijayanagara, Devaraja Mohalla, Mysuru with construction of about 1200 square feet with Mysuru City Corporation PID No 187668, measuring East to West 12.00 meters and North to South by 18.00 meters, bounded on the North by: Site No. 216, South by: Road, East by: Site No. 228 and West by : Site No. 226.

Sd/- DINESH SOLANKI, B.Com, LL.M
Advocate # 1197, 12/2, KRB Road, Chamarajapuram, Mysuru - Ph-9343430011.

PUBLIC NOTICE

Notice is given to the general public at large that my client is negotiating and intending to purchase the notice schedule property from its owners **Mr. VARCHASVI SHANKAR,** Son of Mr. Thibbanna Shankar, aged about 55 years, residing at Door No. 259, 7th Cross, Gokulam 3 rd Stage, Mysuru-570002. Any individuals, banks, financial institutions, agreement holders etc., having any objections for my client entering into any transaction with respect to the schedule property is hereby required to communicate their objections in writing to my office with documentary evidence within **07** days from the date of this publication. In the absence of any authenticated objections /claims, my client will proceed to complete the transaction of sale and no claim in this regard will be entertained thereafter.

SCHEDULE OF THE PROPERTY

All that piece and parcel of residential Vacant Site Property bearing Site No. 265, situated at First Block, Jayalakshmipuram Main Road, Devaraja Mohalla, Mysuru - 570012 measuring **East to West Sixty [(14.75 +14.00)÷2] Meter and North to South 18.00 Meter** admeasuring **2785.15 Square Feet** and bounded by: East By: Site Number 241 & 242, West By: Road, North By: Site Number 264, and South By: Road.

Sd/- DINESH SOLANKI,
B.Com, LL.M, Advocate,
1197, 12/2, KRB Road,
Chamarajapuram,
Mysuru. Ph: 9343430011.

Date: 4.8.2023, Place: Mysore

ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ, ಮೈಸೂರು

ಸಹಕಾರ ಸಂಕೀರ್ಣ, "ಸಹಕಾರ ಭವನ" ಚಾಮರಾಜ ಜೋಡಿ ರಸ್ತೆ, ಮೈಸೂರು–570004

ದೂರವಾಣಿ ಸಂಖ್ಯೆ: 4192145 ಮೊಬೈಲ್–9008033838
E-mail:info@mahilabank.in website:www.mahilabank.in

ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಬ್ಯಾಂಕಿನ 2022-2023ನೇ ಸಾಲಿನ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 06-08-2023ನೇ ಭಾನುವಾರ ಬೆಳಗ್ಗೆ 10.30ಗಂಟೆಗೆ ಬ್ಯಾಂಕಿನ ಪ್ರಧಾನ ಕಛೇರಿಯಾದ ನಂ-09, ಕೆ-ಬ್ಲಾಕ್ ಅಶೋಕಪುರಂ ಪೊಲೀಸ್ ಠಾಣೆ ಹಿಂಭಾಗ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮೈಸೂರು- 570023 ರಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಡಾ ಶೀಲಾಕುಮಾರಿ ಐ ರವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿದ್ದು, ಬ್ಯಾಂಕಿನ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಯನ್ನು ಒಳಗೊಂಡ ವರದಿ ಪುಸ್ತಕವನ್ನು ಅಂಚೆ ಮುಖಾಂತರ ಕಳುಹಿಸಲಾಗಿದೆ. ವರದಿ ಪುಸ್ತಕ ತಲುಪದಿದ್ದಲ್ಲಿ ಇದನ್ನೇ ಆಹ್ವಾನವೆಂದು ಭಾವಿಸಿ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಕೋರಿದೆ.

ಆಡಳಿತ ಮಂಡಳಿ ಆದೇಶದ ಮೇರೆಗೆ, ಸಹಿ/–ಎನ್ ಸುಮಾ ಬಿ ಕಾಂ, ವ್ಯವಸ್ಥಾಪಕರು

ವಿಶೇಷ ಮನವಿ

ಮಾನ್ಯ ಸದಸ್ಯರುಗಳು ದಿನಾಂಕ 06-08-2023 ರಂದು ಬೆಳಗ್ಗೆ 10.30 ಗಂಟೆಯಿಂದ ಸಂಜೆ 4-30 ಗಂಟೆಯವರೆಗೆ ಮಹಾಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ. ಆ ದಿನ ಬ್ಯಾಂಕಿನ ಸದಸ್ಯರಿಗೆ ಸಿಹಿತಿಂಡಿ ವಿತರಿಸಲಾಗುವುದು (ಬೆ. 10.30 - ಸಂ.4.30) ನಂತರ ಬ್ಯಾಂಕಿನಲ್ಲಿ ವಿತರಣೆ ಇರುವುದಿಲ್ಲ ಮಾನ್ಯ ಸದಸ್ಯರು ಸಹಕರಿಸಲು ಮನವಿ.

ದಿನಾಂಕ-06-08-2023ರಂದು ಬ್ಯಾಂಕಿನ ಮಹಾಸಭೆ ನಡೆಯುವುದರಿಂದ ದಿನಾಂಕ 07-08-2023ರ ಸೋಮವಾರ ಬ್ಯಾಂಕಿಗೆ ರಜೆ ಘೋಷಿಸಲಾಗಿದೆ.

ಮಾನ್ಯ ಸದಸ್ಯರು ಮತ್ತು ಗ್ರಾಹಕರುಗಳಿಗೆ ಸಾಲ ಸೌಲಭ್ಯ:

1) ಬ್ಯಾಂಕಿನ ಕಾರ್ಯವ್ಯಾಪ್ತಿಯಲ್ಲಿ (ಮೈಸೂರು ಮತ್ತು ಚಾಮರಾಜನಗರ ಜಿಲ್ಲೆ) ವಾಸಿಸುವ ಸ್ಥಿರಾಸ್ತಿ ಹೊಂದಿರುವ ನಾಗರೀಕರಿಗೆ ಇದೊಂದು ಸುವರ್ಣಾವಕಾಶ.
2) ಕಳೆದ ಐದು ಸಾಲುಗಳಿಂದ ಬ್ಯಾಂಕಿನ ಸದಸ್ಯರಲ್ಲದವರಿಗೂ (ಮಹಿಳೆ ಮತ್ತು ಪುರುಷ) ಸಹಸದಸ್ಯರನ್ನಾಗಿ ಮಾಡಿಕೊಂಡು ಗರಿಷ್ಠ 60 ಲಕ್ಷ ರೂ.ಗಳವರೆಗೆ ಸ್ಥಿರಾಧಾರ ಸಾಲವನ್ನು ನೀಡಲಾಗುತ್ತಿದೆ..
3) ಸದಸ್ಯರು ಮತ್ತು ಸದಸ್ಯರಲ್ಲದವರಿಗೂ 1 ಗ್ರಾಂ ಶುದ್ಧ ಚಿನ್ನಕ್ಕೆ 3900/- ರೂ.ಗಳ ನಗಾಧಾರ ಸಾಲವನ್ನು ಅತೀ ಕಡಿಮೆ ಬಡ್ಡಿದರದಲ್ಲಿ ಗರಿಷ್ಠ ಮಿತಿ ರೂ.10 ಲಕ್ಷದವರೆಗೆ ಸಾಲ ನೀಡಲಾಗುವುದು. ಸಾಲಕ್ಕೆ ಅಡವು ಮಾಡುವ ಚಿನ್ನಾಭರಣಗಳಿಗೆ ವಿಮೆಯ ಸೌಲಭ್ಯ ಇರುತ್ತದೆ.
4) ಸದಸ್ಯರಿಗೆ ಹಾಗೂ ಸಹಸದಸ್ಯರಿಗೆ ಗುಂಪು ಜಂಟಿ ಸಾಲವಾಗಿ ಗರಿಷ್ಠ 5 ಲಕ್ಷದವರೆಗೆ ಸಾಲ ಸೌಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಮೀನುಗಾರಿಕೆ ಇಲಾಖೆ, ಪಿರಿಯಾಪಟ್ಟಣ ತಾಲ್ಲೂಕು

ಮೀನುಗಾರಿಕೆ ಸಹಾಯಕ ನಿರ್ದೇಶಕರವರ ಕಛೇರಿ, ಪಿರಿಯಾಪಟ್ಟಣ.

ಸಂಖ್ಯೆ : ಮೀಸನಿಪಿಪ/ಎಫ್‌ವೈಪಿ/ಮೀ.ಸಲಕರಣೆ/1/2023–24 ದಿನಾಂಕ:03.08.2023

ಟೆಂಡರ್ ಪ್ರಕಟಣೆ

ಮೀನುಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ಮೀನುಗಾರರಿಗೆ ಅಗತ್ಯವಿರುವ ಮೀನುಗಾರಿಕೆ ಸಲಕರಣೆಗಳಾದ ನೈಲಾನ್ ಬಲೆಗಳು, ಹರಿಗೋಲು, ತಕ್ಕಡಿ ಬಟ್ಟುಗಳು, ಲೈಫ್ ಜಾಕೆಟ್, ಪ್ಲಾಸ್ಟಿಕ್ ಕ್ರೇಟ್ ಇತ್ಯಾದಿ ಸಾಮಾಗ್ರಿಗಳನ್ನು ಖರೀದಿಸಲು ಅತೀ ಕಡಿಮೆ ದರದಲ್ಲಿ ಸರಬರಾಜು ಮಾಡುವ ತಯಾರಕರು/ಅಧಿಕೃತ ಸರಬರಾಜುದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ. 1. ಟೆಂಡರ್‌ಗಿಟ್ಟ ಮೊತ್ತ ರೂ.ಗಳಲ್ಲಿ: **ರೂ.2,80,000.00** (ರೂ. ಎರಡು ಲಕ್ಷ ಎಂಭತ್ತು ಸಾವಿರ ರೂಗಳು ಮಾತ್ರ), ಇ.ಎಂ.ಡಿ ಮೊತ್ತ ರೂ.ಗಳಲ್ಲಿ: **ರೂ.5,600.00** (ರೂ. ಐದು ಸಾವಿರದ ಆರುನೂರು ರೂಗಳು ಮಾತ್ರ).

ಟೆಂಡರ್ ಫಾರಂಗಳನ್ನು ಕಛೇರಿಯ ವೇಳೆಯಲ್ಲಿ **ದಿನಾಂಕ: 03.08.2023** ರಿಂದ ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 18.08.2023 ಸಂಜೆ 4.00 ಗಂಟೆಯೊಳಗಾಗಿ.** ತಾಂತ್ರಿಕ ಟೆಂಡರ್ ತೆರೆಯುವ **ದಿನಾಂಕ: 21.08.2023 ಮಧ್ಯಾಹ್ನ 12.00 ಗಂಟೆಗೆ.** ಆರ್ಥಿಕ ಟೆಂಡರ್ ತೆರೆಯುವ **ದಿನಾಂಕ 21.08.2023 ಮಧ್ಯಾಹ್ನ 2.00 ಗಂಟೆಗೆ. ಸ್ಥಳ:** ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ, ಪಿರಿಯಾಪಟ್ಟಣ ತಾಲ್ಲೂಕು, ಮನೆ ನಂ.122, ಮೊದಲನೇ ಮಹಡಿ, ಛತ್ರದ ಬೀದಿ, ಪಿರಿಯಾಪಟ್ಟಣ–570007. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಮೀನುಗಾರಿಕೆ ಸಹಾಯಕ ನಿರ್ದೇಶಕರು
ಪಿರಿಯಾಪಟ್ಟಣ ತಾಲ್ಲೂಕು

DIPR/MYS/KAVITA/176/2023-24

ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಸೇಲ್

Upto 80% Heavy Discount on Big Exclusive Brands

ಕೌಟುಂಬಿಕ ಕಲಹದಿಂದಾಗಿ ರೆಡಿಮೇಡ್ ಗಾರ್ಮೆಂಟ್ ಉದ್ಯಮದ ದೊಡ್ಡ ಉದ್ಯಮವು ವಿಭಜನೆಯಾಯಿತು

ಹಾಗಾಗಿ ಚಾಲನೆಯಲ್ಲಿರುವ ಸಿದ್ಧ ಉಡುಪುಗಳ ಕಾರ್ಖಾನೆಗಳು ಮುಚ್ಚಲ್ಪಟ್ಟವು. ಆನ್‌ಲೈನ್ ಮಾರಾಟಕ್ಕಾಗಿ ಮಾಡಿದ ಕೋಟಿ ಮೌಲ್ಯದ ಕಾರ್ಖಾನೆಗಳಲ್ಲಿನ ಪ್ರಸ್ತುತ ಸ್ಟಾಕ್ ಇನ್ನು ಮುಂದೆ ಆನ್‌ಲೈನ್‌ನಲ್ಲಿ ಮಾರಾಟವಾಗುವುದಿಲ್ಲ. ಏಕೆಂದರೆ ಕುಟುಂಬದ ಹಿರಿಯ ಸಹೋದರ ಗಾರ್ಮೆಂಟ್ಸ್ ವ್ಯಾಪಾರವನ್ನು ಹೊಂದಿದ್ದರು ಮತ್ತು ಬೇರೆ ವ್ಯಾಪಾರವನ್ನು ಪ್ರಾರಂಭಿಸಲು ಬಯಸುತ್ತಾರೆ. ಇದನ್ನು ಕಿರಿಯ ಸಹೋದರ ಈಗ ಎಲ್ಲಾ ಉಡುಪುಗಳ ಹೊಸ ಸ್ಟಾಕ್‌ನೊಂದಿಗೆ ನಗರದ "ಇನ್ಸಿಟಿಟ್ಯೂಟ್ ಆಫ್ ಇಂಜಿನಿಯರ್ಸ್"ನಲ್ಲಿ ಮಾರಾಟ ಮಾಡಲು ತೀರ್ಮಾನಿಸಿರುತ್ತಾರೆ

HRX · The Roadster Lifestyle Co. · DB · AURELIA · sparx · enamor · BIBA · FLYING MACHINE · H&M · NETPLAY · KRAASA · CAMRO · lotto · DNMX · ALTAIR · feve · M&S · Mojari · Myntra · Reebok · adreno · CARLTON LONDON · BR!VE · HI REL

T SHIRT Rs.250/-, SAREE 150/- TO Rs. 300/-BOTTOM Rs.200/-, LADIES TOP Rs.250/-
- MENS TRACK PANT WORTH Rs.999/- TO 1499/- NOW Rs. 500/- to 600/-
- LADIES JEANS Rs.1499/- TO 2499/- TODAY @Rs.400/-
- MENS T-SHIRT Rs.1499/- TO 2499/- TODAY Rs. 400/- to 600/-
- LADIES JEANS Rs.1199/- TO 1799/- TODAY @Rs. 400/-
- LADIES KURTI Rs.1099/- TO 1499/- TODAY @Rs. 400/-
- LADIES SHORTS Rs. 1200/- TO 1699/- TODAY @ Rs. 300-
- MENS JEANS Rs.1499/- TO 2499/-TODAY Rs. 400/- to 1200/-
- JACKET + PULLOWER Rs.1499/- TO 2499/- TODAY @Rs.400/- to 800/-
- BLAZER FLAT Rs. 800/- Enamor Brand Ladies inner wear available

UP TO 80% Off

ರೆಡಿಮೇಡ್ ಗಾರ್ಮೆಂಟ್ಸ್ ಸೇಲ್ 5 ದಿನಗಳು ಮಾತ್ರ
ಶನಿ 05 ಭಾನು 06 ಸೋಮ 07 ಮಂಗಳ 08 ಬುಧ 09 ಆಗಸ್ಟ್ 2023

BRANDED SHOE'S WORTH Rs. 3000/- TO Rs. 6000/- NOW Rs. 500/-, 700/- & 1000/-

ಸ್ಥಳ: ಇನ್ಸಿಟಿಟ್ಯೂಷನ್ ಆಫ್ ಇಂಜಿನಿಯರ್ಸ್
ಜೆ.ಎಲ್.ಬಿ. ರಸ್ತೆ, (ಮುಡಾ ಆಫೀಸ್ ಪಕ್ಕ) ಮೈಸೂರು

ಮೈಸೂರು ಮಿತ್ರ

ವಿ.ಸಿ.ನಾಲೆ ಕೊನೆ ಭಾಗಕ್ಕೆ ನೀರು ಹರಿಸುವಂತೆ ಪ್ರತಿಭಟನೆ



ಮದ್ದೂರು, ಆ.4– ವಿ.ಸಿ.ನಾಲೆ ಕೊನೆ ಭಾಗದ ಜಮೀನುಗಳಿಗೆ ನೀರು ಹರಿಸುವಂತೆ ಮತ್ತು ನಾಲೆಗಳನ್ನು ಆಧುನೀಕರಣಗೊಳಿಸುವಂತೆ ಒತ್ತಾಯಿಸಿ ಚನ್ನೇಗೌಡನದೊಡ್ಡಿ ಗ್ರಾಮದ ರೈತರು ಪ್ರತಿಭಟನೆ ನಡೆಸಿದರು.

ತಾಲೂಕಿನ ಚನ್ನೇಗೌಡನದೊಡ್ಡಿ ಗ್ರಾಮದ ಒಣಗಿನಿಂತ ಜಮೀನೊಂದರ ಬಳಿ ಜಮಾವಣೆಗೊಂಡ ರೈತರು ಸರ್ಕಾರ ಹಾಗೂ ನೀರಾವರಿ ಇಲಾಖೆ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿ ಕೂಡಲೇ ನಾಲೆಗಳಿಗೆ ನೀರು ಹರಿಸಿ ಬೆಳೆದು ನಿಂತ ಬೆಳೆಗಳನ್ನು ರಕ್ಷಣೆ ಮಾಡಬೇಕೆಂದು ಒತ್ತಾಯಿಸಿದರು.

ವಿ.ಸಿ.ನಾಲೆ 26ನೇ ತೂಬು ನಾಲೆಗಳು ಅದ್ವಾನಗೊಂಡು ಹಲವು ವರ್ಷಗಳೇ ಕಳೆದಿವೆ. ಜೊತೆಗೆ ಪಿಕಪ್ ನಾಲೆಯಲ್ಲಿ ಮಂಡಿಯುದ್ದ ಹೂಳು ತುಂಬಿಕೊಂಡು ಗಿಡಗಂಟೆಗಳು ಮತ್ತು ತ್ಯಾಜ್ಯ ತುಂಬಿದ್ದರೂ ಅಧಿಕಾರಿಗಳು ಅವುಗಳ ತೆರವಿಗೆ ಮುಂದಾಗದ ಬಗ್ಗೆ ಕಿಡಿಕಾರಿದರು.

ಅದ್ವಾನಗೊಂಡಿರುವ ನಾಲೆ ದುರಸ್ತಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ. ಬದಲಿಗೆ ಅಧಿಕಾರಿಗಳು ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಆರೋಪಿಸಿದರಲ್ಲದೇ, ರೈತ ಸಾಲಸೋಲ ಮಾಡಿ ಕಬ್ಬು ಇನ್ನಿತರೆ ಬೆಳೆಗಳನ್ನು ಬೆಳೆದಿದ್ದು ನೀರಿಲ್ಲದೆ ಒಣಗುವ ಹಂತಕ್ಕೆ ತಲುಪಿ ಲಕ್ಷಾಂತರ ರೂ. ನಷ್ಟ ಸಂಭವಿಸುತ್ತಿದೆ ಎಂದು ಆರೋಪಿಸಿದರು.

ಈ ಕೂಡಲೇ ನೀರಾವರಿ ಇಲಾಖೆ ಅಧಿಕಾರಿಗಳು ಕೊನೆ ಭಾಗದ ರೈತರ ಸಮಸ್ಯೆಗಳನ್ನು ಆಲಿಸಿ, ವಿ.ಸಿ.ನಾಲೆ ಆಧುನೀಕರಣಗೊಳಿಸಿ ತೂಬುಗಳನ್ನು ರಿಪೇರಿ ಮಾಡುವ ಮೂಲಕ ಕೊನೆ ಭಾಗದ ಜಮೀನುಗಳಿಗೆ ನೀರು ಹರಿಸಲು ಕ್ರಮವಹಿಸದಿದ್ದಲ್ಲಿ ನೀರಾವರಿ ಇಲಾಖೆ ಕಚೇರಿ ಎದುರು ಸ್ಥಳೀಯ ಗ್ರಾಮಸ್ಥರ ಜತೆಗೂಡಿ ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರೈತರಾದ ಕೆಂಪಣ್ಣ, ತಮ್ಮಣ್ಣ, ಕಾಡಪ್ಪ, ಸುರೇಶ್, ಶ್ಯಾಮ್ ಸುಂದರ್, ರಾಜಣ್ಣ, ಶಿವಣ್ಣ ಇತರರಿದ್ದರು.

ಬೇಡಿಕೆಗೆ ಆಗ್ರಹಿಸಿ ಶಿವಪುರದಲ್ಲಿ ಅಹೋರಾತ್ರಿ ಸ್ವಾತಂತ್ರ್ಯೋತ್ಸವ

ಮಂಡ್ಯ, ಆ.4– ಕೇಂದ್ರ ಸರ್ಕಾರದ ಕಾರ್ಮಿಕ, ರೈತ ವಿರೋಧಿ ನೀತಿಗಳನ್ನು ಖಂಡಿಸಿ ಆ.9ರಂದು ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಹಾಗೂ ಆ.14ರಂದು ಸಂಜೆ 6 ರಿಂದ 15ರ ಬೆಳಗ್ಗೆವರೆಗೂ ಅಹೋರಾತ್ರಿ ಸ್ವಾತಂತ್ರ್ಯೋತ್ಸವವನ್ನು ಮದ್ದೂರಿನ ಶಿವಪುರ ಸತ್ಯಾಗ್ರಹಸೌಧದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ಎಂ.ಪುಟ್ಟಮಾದು ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದುಡಿಮೆಯ ಅವಧಿಯನ್ನು 12 ಗಂಟೆಗೆ ಹೆಚ್ಚಿಸಿರುವ ಆದೇಶ ಹಿಂಪಡೆಯಬೇಕು. ಜೀವನ ಯೋಗ್ಯ ಕನಿಷ್ಠ ವೇತನ 31,500 ರೂ.ಗಳಿಗೆ ಹೆಚ್ಚಿಸಿ, ಕಾರ್ಮಿಕ ವಿರೋಧಿ ಲೇಬರ್ ಕೋಡ್ ರದ್ದು ಮಾಡಬೇಕು. ಸಾರ್ವತ್ರಿಕ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಿ ಕನಿಷ್ಠ 8000 ರೂ. ಪಿಂಚಣಿ ನೀಡಬೇಕು. ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಮತ್ತು ನಗದೀಕರಣ ನಿಲ್ಲಿಸಬೇಕೆಂದು ಒತ್ತಾಯಿಸಲಾಗುವುದು ಎಂದರು.

ಉದ್ಯೋಗ ಖಾತ್ರಿ ಯೋಜನೆ ಮನರೇಗಾ ದುಡಿತದ ದಿನಗಳನ್ನು 200ಕ್ಕೆ ಹೆಚ್ಚಿಸಿ ದಿನಕ್ಕೆ 600 ರೂ. ಕೂಲಿ ನೀಡಬೇಕು. ಸ್ಕೀಂ ಕಾರ್ಮಿಕರಾದ ಆಶಾ, ಅಂಗನವಾಡಿ ಮತ್ತು ಬಿಸಿಯೂಟ ಕಾರ್ಮಿಕರನ್ನು ಕನಿಷ್ಠ ವೇತನ ವ್ಯಾಪ್ತಿಗೆ ಒಳಪಡಿಸಿ, ವಲಸೆ ಕಾರ್ಮಿಕರಿಗೆ ಸೇವಾ ಭದ್ರತೆ ಮತ್ತು ಸಾರ್ವತ್ರಿಕ ಪಡಿತರ ವ್ಯವಸ್ಥೆ ಜಾರಿ ಮಾಡಬೇಕು. ಅಸಂಘಟಿತ ವಲಯದ ಕಾರ್ಮಿಕರಿಗೆ ಕಲ್ಯಾಣ ಕಾರ್ಯಕ್ರಮ ಜಾರಿಗೊಳಿಸಿ, ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿಗೊಳಿಸಿ ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿಡಬೇಕು. ವಿದ್ಯುತ್ ಶಕ್ತಿ ಮಸೂದೆ 2020 ಅನ್ನು ಹಿಂಪಡೆಯಬೇಕೆಂದು ನಮ್ಮ ಆಗ್ರಹವಾಗಿದೆ ಎಂದು ವಿವರಿಸಿದರು.

ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಸುರಕ್ಷೆ ಖಾತ್ರಿಗೊಳಿಸುವುದು. 8.5% ಸಕ್ಕರೆ ಇಳುವರಿ ಆಧಾರದಲ್ಲಿ ಟನ್ ಕಬ್ಬಿಗೆ 5000 ರೂ. ನಿಗದಿಪಡಿಸಬೇಕು ಮತ್ತು ಡಾ.ಸ್ವಾಮಿನಾಥನ್ ವರದಿ ಜಾರಿ ಮಾಡಬೇಕು. ಪಡಿತರದಲ್ಲಿ ನಗದು ಬದಲಿಗೆ ಆಹಾರ ಧಾನ್ಯಗಳನ್ನು ನೀಡಬೇಕು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸ್ಮಶಾನಕ್ಕೆ ಜಾಗ ಮೀಸಲಿಡಬೇಕು. ಮೂಲ ಸೌಕರ್ಯ ನೀಡಬೇಕು. ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು. ಕಾಡು ಪ್ರಾಣಿಗಳಿಂದ ಧಾಳಿಗೊಳಗಾಗಿ ಬೆಳೆ ನಷ್ಟ ಹೊಂದಿರುವ ರೈತರಿಗೆ ಸೂಕ್ತ ಪರಿಹಾರ ನೀಡಬೇಕು. ಲೀಟರ್ ಹಾಲಿಗೆ 50 ರೂ. ಬೆಲೆ ನಿಗದಿಪಡಿಸಬೇಕು. ಮನೆ, ನಿವೇಶನ ಇಲ್ಲದವರಿಗೆ ಮನೆ, ನಿವೇಶನ ನೀಡಬೇಕು. ಸರ್ಕಾರಿ ಜಾಗದಲ್ಲಿ ವಾಸಿಸುತ್ತಿರುವವರಿಗೆ ಹಕ್ಕುಪತ್ರ ನೀಡಬೇಕು ಹಾಗೂ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ನಿಯಂತ್ರಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ.ಕುಮಾರಿ, ಕರ್ನಾಟಕ ಪ್ರಾಂತ ರೈತಸಂಘದ ಮಳವಳ್ಳಿ ತಾಲೂಕು ಅಧ್ಯಕ್ಷ ಎನ್.ಎಲ್.ಭರತ್‌ರಾಜ್, ಮುಖಂಡರಾದ ಬಿ.ಎಂ.ಶಿವಮಲ್ಲು, ಅರುಣ್‌ಕುಮಾರ್, ಚಂದ್ರಶೇಖರ್, ಮಂಜುಳ ಹಾಗೂ ರಾಮಯ್ಯ ಉಪಸ್ಥಿತರಿದ್ದರು.

ಮುಂಗಾರು ಬೆಳೆಗೆ ಬಿತ್ತನೆ ಬೀಜ ವಿತರಣೆಗೆ ಒತ್ತಾಯ



ಶ್ರೀರಂಗಪಟ್ಟಣ, ಆ.4– ಮುಂಗಾರು ಬೆಳೆಗೆ ಬಿತ್ತನೆ ಬೀಜ ವಿತರಿಸುವಂತೆ ಒತ್ತಾಯಿಸಿ ರೈತ ಸಂಘದ ಮುಖಂಡರು ಪಟ್ಟಣದ ಕೃಷಿ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿದರು.

ತಾಲೂಕು ರೈತ ಸಂಘದ ಅಧ್ಯಕ್ಷ ಕೃಷ್ಣೇಗೌಡರ ನೇತೃತ್ವದಲ್ಲಿ ಕಚೇರಿ ಮುಂದೆ ಜಮಾಯಿಸಿದ ರೈತ ಮುಖಂಡರು ಮುಂಗಾರು ಮಳೆ ತಡವಾಗಿ ಆರಂಭವಾಗಿದ್ದರಿಂದ ಬೆಳೆ ಹಾಕಲು ತಡವಾಗುತ್ತಿದೆ. ಹೀಗಾಗಿ ಸರ್ಕಾರ ರೈತರಿಗೆ ಬಿತ್ತನೆ ಬೀಜ ವಿತರಣೆ ಮಾಡಲು ಮೀನಾಮೇಷ ಎಣಿಸುವುದನ್ನು ಬಿಟ್ಟು ಕೂಡಲೇ ಬಿತ್ತನೆ ಬೀಜ ವಿತರಿಸಬೇಕು ಎಂದು ಆಗ್ರಹಿಸಿದರು. ರೈತ ಸಂಘದ ಮುಖಂಡರಾದ ಬಾಲಣ್ಣ, ಪಾಂಡು, ಜಯರಾಮೇಗೌಡ, ಶಂಕರೇಗೌಡ ಸೇರಿದಂತೆ ಇತರ ಮುಖಂಡರು ಹಾಜರಿದ್ದರು.

ಸೋಮನಹಳ್ಳಿ ಗ್ರಾಪಂಗೆ ಜಯಲಕ್ಷ್ಮಮ್ಮ ಅಧ್ಯಕ್ಷೆ



ಕೆ.ಆರ್.ಪೇಟೆ, ಆ.4– ತಾಲೂಕಿನ ಸೋಮನಹಳ್ಳಿ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಜಯಲಕ್ಷ್ಮಮ್ಮ ಚಂದ್ರೇಗೌಡ, ಉಪಾಧ್ಯಕ್ಷೆಯಾಗಿ ಕೋಕಿಲಾ ಪುಟ್ಟಸ್ವಾಮಿಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜಯಲಕ್ಷ್ಮಮ್ಮ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಕೋಕಿಲಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಡಾ.ಹೆಚ್.ಎಸ್.ದೇವರಾಜು ಅವಿರೋಧ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷೆ, ಉಪಾಧ್ಯಕ್ಷೆಯನ್ನು ಅಭಿನಂದಿಸಿ ಮಾತನಾಡಿದ ತಾಲೂಕು ಜೆಡಿಎಸ್ ಉಪಾಧ್ಯಕ್ಷ ಪುಟ್ಟಸ್ವಾಮಿ ಹಾಗೂ ಹಿರಿಯ ಜೆಡಿಎಸ್ ಮುಖಂಡ ಪುಟ್ಟೇಗೌಡ, ನೂತನ ಅಧ್ಯಕ್ಷ, ಉಪಾಧ್ಯಕ್ಷರು ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ತಿಳಿಸಿದರು. ಅಲ್ಲದೇ ಇದೇ ವೇಳೆ ಮೂಲ ಸೌಕರ್ಯ ಕಲ್ಪಿಸಲು ಹೆಚ್ಚಿನ ಗಮನ ಹರಿಸುವಂತೆ ತಿಳಿಸಿದರು.

ಜೆಡಿಎಸ್ ಮುಖಂಡ ಕೆ.ಟಿ.ಚಂದ್ರೇಗೌಡ ಮಾತನಾಡಿದರು. ತಾಪಂ ಮಾಜಿ ಸದಸ್ಯ ಅಶೋಕ್, ಮಾಜಿ ಅಧ್ಯಕ್ಷ ಸತೀಶ್, ವಿಎಸ್‌ಎಸ್‌ಎನ್ ಬ್ಯಾಂಕ್ ಮಾಜಿ ಅಧ್ಯಕ್ಷ ಕಾಂತರಾಜು, ಹಿರಿಯ ಮುಖಂಡರಾದ ಕೆ.ಟಿ.ಚಂದ್ರೇಗೌಡ, ರಾಜು, ಮಾಜಿ ಅಧ್ಯಕ್ಷ ಆಂಜಿನಿಗೌಡ, ಗ್ರಾಪಂ ಸದಸ್ಯರಾದ ಲತಾಮಣಿ, ಜೆ.ಚಂದ್ರಯ್ಯ, ಆರತಿ, ರೇಖಾ, ಸತ್ಯ ಕುಮಾರಿ, ಕಾಂತರಾಜು, ಮಂಜುಳಾ, ಪ್ರಕಾಶ್, ವಸಂತ ಕುಮಾರ್, ಗಣೇಶ್, ರಾಜಮ್ಮ ಉಮೇಶ್, ಲಕ್ಷ್ಮಮ್ಮ, ರಾಮಕೃಷ್ಣೇಗೌಡ, ನಿಂಗರಾಜು, ಮಹದೇವಮ್ಮ, ನಾರಾಯಣಯ್ಯ ಹಾಗೂ ಪಿಡಿಓ ಶಿವಸ್ವಾಮಿ, ಕಾರ್ಯದರ್ಶಿ ಪೂರ್ಣಿಮಾ, ಲೆಕ್ಕ ಸಹಾಯಕ ರೇಣುಕಪ್ಪ ಸೇರಿದಂತೆ ಇತರರಿದ್ದರು.


ಯುವಕನ ಮೇಲೆ ಮಾರಕಾಸ್ತ್ರಗಳಿಂದ ಗುಂಪು ದಾಳಿ



ಮಂಡ್ಯ, ಆ.4– ಹಾಡಹಗಲೇ ಗುಂಪೊಂದು ಯುವಕನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ ಘಟನೆ ತಾಲೂಕಿನ ಹೊಳಲು ಗ್ರಾಮದಲ್ಲಿ ನಡೆದಿದೆ. ಹೊಳಲು ಗ್ರಾಮದ ಮಾದ ಅಲಿಯಾಸ್ ಮಾದಪ್ಪ, ಚಿಂಟು, ತರುಣ್, ಸುಶಾಂತ್, ಚಂದನ್ ಒಳಗೊಂಡ ಗುಂಪು ಶಾರಂತ್ (29) ಎಂಬ ಯುವಕನ ಮೇಲೆ ನಡು ರಸ್ತೆಯಲ್ಲೇ ಮಾರಕಾಸ್ತ್ರಗಳಿಂದ ಹಲ್ಲೆ ನಡೆ ಸಿದ್ದು, ಶಾರಂತ್ ತೀವ್ರವಾಗಿ ಗಾಯಗೊಂಡು ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ವಿವರ: ಗ್ರಾಮದ ಸರ್ಕಲ್‌ನಲ್ಲಿ ಶಾರಂತ್ ಸ್ನೇಹಿತರ ಜೊತೆ ಮಾತನಾಡುತ್ತಿದ್ದ ಸಂದರ್ಭ ಎರಡು ಬೈಕ್‌ಗಳಲ್ಲಿ ಬಂದ ಐವರು ಯುವಕರು ವಿನಾಕಾರಣ ಏಕಾಏಕಿ ಶಾರಂತ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದು, ತೀವ್ರವಾಗಿ ಗಾಯಗೊಂಡಿರುವ ಈತ ಪ್ರಾಣಾಪಯದಿಂದ ಪಾರಾಗಿದ್ದು, ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಕೆಲ ದಿನಗಳ ಹಿಂದೆ ಮಾದಪ್ಪನನ್ನು ಬಾಸ್ ಎಂದು ಕರೆಯುವಂತೆ ಅವನ ಸ್ನೇಹಿತರು ಶಾರಂತ್‌ಗೆ ಧಮಕಿ ಹಾಕಿದ್ದರಂತೆ. ಈ ವೇಳೆ ಅವನು ಯಾವನೋ ಬಾಸ್ ಎಂದು ಶಾರಂತ್ ಟಾಂಗ್ ಕೊಟ್ಟಿದ್ದನಂತೆ. ಅಂದು ಗಲಾಟೆ ನಡೆದು ತಣ್ಣಗಾಗಿದ್ದರೂ ವೈಮನಸ್ಸು ಇದ್ದೇ ಇತ್ತು. ಅದೇ ದ್ವೇಷದಿಂದ ಶಾರಂತ್ ಮೇಲೆ ಮಾದಪ್ಪ ಮತ್ತು ತಂಡ ದಾಳಿ ಮಾಡಿದೆ ಎಂದು ಹೇಳಲಾಗಿದೆ. ಈ ಸಂಬಂಧ ಮಂಡ್ಯ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಾಗಿದೆ.

ಹಳೇಬೀಡು ಗ್ರಾಪಂಗೆ ಧನಂಜಯ್ ಅಧ್ಯಕ್ಷ



ಪಾಂಡವಪುರ, ಆ.4– ತಾಲೂಕಿನ ಹಳೇಬೀಡು ಗ್ರಾಪಂ ಅಧ್ಯಕ್ಷರಾಗಿ ಹೆಚ್.ಸಿ.ಧನಂಜಯ್, ಉಪಾಧ್ಯಕ್ಷೆಯಾಗಿ ಎಂ.ಎ.ಶೋಭಾ ಶ್ರೀನಿವಾಸ್ ಶುಕ್ರವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಪಂನ ಎರಡನೇ ಅವಧಿಗೆ ಅಧ್ಯಕ್ಷ ಸ್ಥಾನ ಸಾಮಾನ್ಯ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿತ್ತು ಶುಕ್ರವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ಸದಸ್ಯರಾದ ಎಚ್.ಸಿ.ಧನಂಜಯ್, ಉಪಾಧ್ಯಕ್ಷ ಸ್ಥಾನಕ್ಕೆ ಎಂ.ಎ.ಶೋಭಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಜಯರಾಮು ಘೋಷಿಸಿದರು. ಈ ವೇಳೆ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ನೂತನ ಅಧ್ಯಕ್ಷ ಧನಂಜಯ್ ಮಾತನಾಡಿ, ನಮ್ಮ ನಾಯಕರು ಹಾಗೂ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹಾಗೂ ಎಲ್ಲಾ ಸದಸ್ಯರ ಸಹಕಾರದಿಂದ ಗ್ರಾಪಂ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಗ್ರಾಪಂ ಸದಸ್ಯರ ಸಹಕಾರ ಪಡೆದು ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಕೆಲಸ ಮಾಡುತ್ತೇನೆ ಎಂದರು. ಈ ವೇಳೆ ಗ್ರಾಪಂ ಸದಸ್ಯರಾದ ಹೆಚ್.ಪಿ. ಪದ್ಮರಾಜು, ಸೌಭಾಗ್ಯಮ್ಮ, ಮಂಜುಳ, ಮಂಗಳಮ್ಮ, ಜಯಲಕ್ಷ್ಮಮ್ಮ, ಪುಟ್ಟೇಗೌಡ, ಚಿಕ್ಕತಾಯಮ್ಮ, ಸಿ.ಜೆ.ರಾಧ, ಮುಖಂಡರಾದ ಪುಟ್ಟಣ್ಣ, ಕುಳ್ಳೇಗೌಡ, ಚನ್ನೇಗೌಡ, ಯೋಗರಾಜು, ಸಣ್ಣಪ್ಪ, ಶಶಿಕುಮಾರ್, ಚುಂಚೇಗೌಡ, ದಿನೇಶ್, ಕೃಷ್ಣೇಗೌಡ, ಅರವಿಂದ್, ರವಿ, ಜಯರಾಮು, ದಾಸಯ್ಯ, ನಾಗೇಂದ್ರ, ಮಹದೇವು, ಕೆ.ಕೆ.ಪ್ರಕಾಶ್ ಇನ್ನಿತರರಿದ್ದರು.

ಡಿ.ನಿಂಗೇಗೌಡ




ಕೆ.ಆರ್.ಪೇಟೆ, ಆ.4– ತಾಲೂಕಿನ ಬೂಕನಕೆರೆ ಹೋಬಳಿ ಗಂಜಿಗೆರೆ ಕೊಪ್ಪಲು ಗ್ರಾಮದ ನಿವಾಸಿ ಡಿ.ನಿಂಗೇಗೌಡ(68) ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಸಂಜೆ ನಡೆಯಿತು.

ಮೂರನೇ ಪುಟದಿಂದ

ಸತ್ಯಕ್ಕೆ ಇಂದಲ್ಲಾ ನಾಳೆ ಗೆಲುವು ಸಿಕ್ಕೇ ಸಿಗುತ್ತೆ


ನನ್ನ ಹಾದಿ ಸ್ಪಷ್ಟವಾಗಿದೆ. ನನ್ನ ಕೆಲಸವೇನೂ, ಏನು ಮಾಡಬೇಕು ಎಂಬುದರ ಬಗ್ಗೆ ಮನಸ್ಸಿನಲ್ಲಿ ಸ್ಪಷ್ಟತೆ ಇದೆ. ಜನರು ಪ್ರೀತಿ ಮತ್ತು ಬೆಂಬಲ ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ ಎಂದರು. ಇದಕ್ಕೂ ಮುನ್ನಾ ಮಾತ ನಾಡಿದ ಮಲ್ಲಿಕಾರ್ಜುನ ಖರ್ಗೆ, ಸುಪ್ರೀಂಕೋರ್ಟ್ ನೀಡಿರುವ ತೀರ್ಪು ನಮಗೆ ಸಂತಸ ತಂದಿದೆ. ಇದು ಪ್ರಜಾಪ್ರಭುತ್ವದ ಗೆಲುವು, ಸತ್ಯ ಮೇವ ಜಯತೇ ಎಂದು ಬಣ್ಣಿಸಿದರು. ರಾಹುಲ್ ಗಾಂಧಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಪಾದಯಾತ್ರೆ ಮಾಡಿ ಬಡವರನ್ನು ಭೇಟಿಯಾಗಿದ್ದರು. ಅವರು ಕೋಲಾರದಲ್ಲಿ ಭಾಷಣ ಮಾಡಿದ್ದರು ಆದರೆ, ಗುಜರಾತ್ ನ್ಯಾಯಾಲಯದಿಂದ 2 ವರ್ಷಗಳ ಜೈಲು ಶಿಕ್ಷೆ ನೀಡಲಾಗಿತ್ತು. ತೀರ್ಪು ನೀಡಿದ 24 ಗಂಟೆಯಲ್ಲೇ ಸಂಸದ ಸ್ಥಾನದಿಂದ ಅನರ್ಹಗೊಳಿಸಲಾಗಿತ್ತು ಆದರೆ, ಈಗ ಸುಪ್ರೀಂಕೋರ್ಟ್ ಸತ್ಯದ ಪರ ತೀರ್ಪು ನೀಡಿದ್ದು, ಇದು ವಯನಾಡು ಕ್ಷೇತ್ರದ ಎಲ್ಲಾ ಮತದಾರರ ಗೆಲುವು ಎಂದರು.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಶುಕ್ರವಾರ	113.46 ಅಡಿ
ಒಳಹರಿವು	4361 ಕ್ಯುಸೆಕ್
ಹೊರಹರಿವು	4944 ಕ್ಯುಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಶುಕ್ರವಾರ	2283 ಅಡಿ
ಒಳ ಹರಿವು	4549 ಕ್ಯುಸೆಕ್
ಹೊರ ಹರಿವು	6000 ಕ್ಯುಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಶುಕ್ರವಾರ	2858.10 ಅಡಿ
ಒಳ ಹರಿವು	2000 ಕ್ಯುಸೆಕ್
ಹೊರ ಹರಿವು	2166 ಕ್ಯುಸೆಕ್

ಒತ್ತುವರಿ ತೆರವಿಗೆ ಕಟ್ಟುನಿಟ್ಟಿನ ಕ್ರಮ

ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲೇ ಅತೀ ಹೆಚ್ಚು ಭೂಮಿ ಒತ್ತು ವರಿಯಾಗಿದ್ದು, ಬಲಾಢ್ಯರು ಇದ್ದಾರೆ. ಇದನ್ನು ತೆರವುಗೊಳಿಸಲು ಆ.7ರ ಸೋಮ ವಾರ ಉನ್ನತ ಮಟ್ಟದ ಸಭೆ ನಡೆಸಿ ಜಿಲ್ಲಾಧಿ ಕಾರಿಗಳಿಗೆ ನಿರ್ದೇಶನ ನೀಡಲಾಗುತ್ತದೆ ಎಂದರು. ಮೈಸೂರಿನಲ್ಲಿ ಆ.8ರಂದು ಅಧಿಕಾರಿಗಳ ಸಭೆ ನಡೆಸಿ ಆ ವಿಭಾಗದಲ್ಲಿ ಆಗಿರುವ ಒತ್ತುವರಿ ತೆರವುಗೊಳಿಸಲು ಸೂಚಿಸಲಾಗುವುದು. ಅಷ್ಟೇ ಅಲ್ಲ, ಎಲ್ಲಾ ಜಿಲ್ಲಾಧಿಕಾರಿಗಳಿಗೂ ಮಾಸಿಕ ಒತ್ತುವರಿ ತೆರವಿಗೆ ಗುರಿ ನಿಗದಿಪಡಿಸಲಾಗುವುದು. ತೆರವುಗೊಂಡ ಜಮೀನು ಸಂರಕ್ಷಣೆ ಮಾಡಬೇಕು.

ರೆವೆನ್ಯೂ ಇನ್ಸ್‌ಪೆಕ್ಟರ್‌ಗಳು ಆಗಿಂದಾಗ್ಗೆ ಭೇಟಿ ನೀಡಿ ಮತ್ತೆ ಒತ್ತುವರಿಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಕಾಫಿ ಬೆಳೆ ಭೂಮಿ ಗುತ್ತಿಗೆ: ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಭಾಗಶ: ಶಿವಮೊಗ್ಗ ಜಿಲ್ಲೆಗಳಲ್ಲಿ ಒತ್ತುವರಿ ಕಾಫಿ ಬೆಳೆಯ ಭೂಮಿಯನ್ನು ಗುತ್ತಿಗೆಗೆ ಕೊಡುವ ಸಂಬಂಧ ಹಿಂದಿನ ಸರ್ಕಾರ ಕೈಗೊಂಡ ತೀರ್ಮಾನವನ್ನು ಯಥಾವತ್ತಾಗಿ ಜಾರಿಗೊಳಿಸುವುದಾಗಿ ತಿಳಿಸಿದರು.

ಈ ಭೂಮಿಯನ್ನು ಗುತ್ತಿಗೆಗೆ ನೀಡುವ ಸಂಬಂಧ ಹಿಂದಿನ ಸರ್ಕಾರ ಕಾಯ್ದೆ ಮಾಡಿದೆ. ಆದರೆ ನಿಯಮಾವಳಿಗಳನ್ನು ಮಾಡಿಲ್ಲ. ಹೀಗಾಗಿ ಈ ನಿಯಮಾವಳಿಗಳನ್ನು ರೂಪಿಸಿದ ನಂತರ ಈ ಜಿಲ್ಲೆಗಳಲ್ಲಿ ಒತ್ತುವರಿ ಭೂಮಿಯನ್ನು ಗುತ್ತಿಗೆಗೆ ಕೊಡುವ ಕಾರ್ಯ ಆರಂಭವಾಗಲಿದೆ ಎಂದರು. ಈ ಸಂಬಂಧದ ನಿಯಮಾವಳಿಗಳನ್ನು ರೂಪಿಸುವ ಕಾರ್ಯ ಇನ್ನೊಂದು ತಿಂಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದ್ದು, ನಿಯಮಾವಳಿಗಳ ರಚನೆಯಾದ ನಂತರ ಗುತ್ತಿಗೆ ನೀಡುವ ಪ್ರಕ್ರಿಯೆ ಆರಂಭವಾಗಲಿದೆ.

ಮಂಜೂರಾತಿ ಮಾಹಿತಿ: ಈ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಂಜೂರಾದ ಭೂಮಿಯ ಕುರಿತು ಮಾಹಿತಿ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಈ ಮಾಹಿತಿ ಬಂದ ನಂತರ ಎಷ್ಟು ಮಂಜೂರಾತಿ ಪ್ರಕರಣಗಳು ಕ್ರಮಬದ್ಧವಾಗಿವೆ. ಎಷ್ಟು ಕ್ರಮಬದ್ಧವಾಗಿಲ್ಲ ಎಂಬುದನ್ನು ಪರಿಶೀಲನೆ ಮಾಡುತ್ತೇವೆ. ಮಂಜೂರಾತಿ ಪ್ರಕ್ರಿಯೆ ಕ್ರಮಬದ್ಧವಾಗಿದ್ದರೆ ಅದಕ್ಕೆ ತಡೆ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ಈ ಹಿಂದಿನ ಆರು ತಿಂಗಳ ಅವಧಿಯ ಮಂಜೂರಾತಿಯನ್ನು ಮಾತ್ರ ಪರಿಗಣಿಸಲಾಗುವುದು ಎಂದು ವಿವರಿಸಿದರು.

ರಾಜ್ಯಾದ್ಯಂತ ಬಗರ್ ಹುಕುಂ ಸಮಿತಿಗಳನ್ನು ರಚಿಸಲು ನಿರ್ಧರಿಸಲಾಗಿದೆ. ಖಾಲಿ ಇರುವ ತಹಸೀಲ್ದಾರ್ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವುದಾಗಿ ನುಡಿದ ಅವರು,ಎಲ್ಲೆಲ್ಲಿ ಈ ಹುದ್ದೆಗಳು ಖಾಲಿ ಇವೆ ಎಂಬುದರ ವಿವರ ಪಡೆದು ನಂತರ ಅದನ್ನು ಭರ್ತಿ ಮಾಡಲಾಗುವುದು ಎಂದು ಹೇಳಿದರು.

ಬಿಡಿಎಗೆ 250 ಕೋಟಿ ಟಾರ್ಗೆಟ್ ಫಿಕ್ಸ್

ಲೂಟಿ ಮಾಡುತ್ತಿದೆ. ಜನರಿಗೆ ಗ್ಯಾರಂಟಿ ತುಪ್ಪ ಸವರಿ ವರ್ಗಾವಣೆ ದಂಧೆಯಲ್ಲಿ ಕೊಳ್ಳೆ ಹೊಡೆಯುತ್ತಿದೆ. ಬೆಂಗಳೂರನ್ನು ಸಿಂಗಾಪುರ ಮಾಡುತ್ತೇವೆ ಎಂದು ಹೇಳಿದವರು ಇವತ್ತು ಇದೇ ಬೆಂಗಳೂರನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಹೊರ ನೋಟಕ್ಕೆ ಭ್ರಷ್ಟಾಚಾರವನ್ನು ತೊಡೆದು ಹಾಕುವ ಮಾತು ಹೇಳುತ್ತಿದ್ದಾರೆ. ನಿಜಕ್ಕೆ ಕಾಂಗ್ರೆಸ್ ಪಕ್ಷಕ್ಕೆ ಅಂತಹ ಮನಃಸ್ಥಿತಿ ಇಲ್ಲ ಎಂದು ಹೆಚ್.ಡಿ.ಕುಮಾರಸ್ವಾಮಿ ಅವರು ಕಟುವಾಗಿ ಟೀಕಿಸಿದರು.

ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿ ನಿಂದಲೂ ವಸೂಲಿಗೇಆ ಷ್ಟಇರ್ಯೋದು. ಈಸ್ಟ್ ಇಂಡಿಯಾ ಕಂಪನಿ ಇಡೀ ದೇಶವನ್ನು ಇವರಿಗೆ ಕೊಟ್ಟು ಹೋದರು. ಅದರ ವಸೂಲಿಯನ್ನು ಕಾಂಗ್ರೆಸ್ ಮುಂದುವರಿಸಿಕೊಂಡು ಬಂದಿದೆ. ಇಂಥವರು ಭ್ರಷ್ಟಾಚಾರ ನಿಲ್ಲಿಸ್ತಾರಾ? ಎಂದು ಅವರು ಪ್ರಶ್ನಿಸಿದರು.

ಗೃಹ ಇಲಾಖೆಯಲ್ಲಿ ವೈಎಸ್ ಟಿ ಟ್ಯಾಕ್ಸ್ ದಂಧೆಕೋರರು: ಗೃಹ ಇಲಾಖೆಯಲ್ಲಿ ವರ್ಗಾವಣೆಯ ದಂಧೆ ಬಗ್ಗೆ ಕೇಳಿ ನನಗೆ ತೀವ್ರ ಆಘಾತ ಉಂಟಾಯಿತು. ಪೊಲೀಸರನ್ನು ಹೀಗೆ ಬಳಕೆ ಮಾಡಿಕೊಂಡರೆ ಕಾನೂನು ಸುವ್ಯವಸ್ಥೆ ಕಾಪಾಡುವ ಅವರು ಇನ್ನೇನು ಕೆಲಸ ಮಾಡುತ್ತಾರೆ. ಬ್ರಿಗೇಡ್ ರಸ್ತೆ ಸಮೀಪ ಇರುವ, ಗರುಡಾ ಮಾಲ್ ಹತ್ತಿರದ ಪೊಲೀಸ್ ಮೆಸ್‌ನಲ್ಲಿ ನಡೆದ ಸಭೆಯಲ್ಲಿ ಯಾರೆಲ್ಲಾ ಇದ್ದರು, ವೈಎಸ್‌ಟಿ ಟ್ಯಾಕ್ಸ್ ಬಾಬ್ತುನವರು ಅಲ್ಲೇ ಇದ್ದರಲ್ಲವೇ. ಪೊಲೀಸ್ ವರ್ಗಾವಣೆ ಸಂಬಂಧ ನಡೆದ ಈ ಸಭೆಯಲ್ಲಿ ಮುಖ್ಯಮಂತ್ರಿಗಳು, ಗೃಹ ಸಚಿವರು, ಇಲಾಖೆಯ ಉನ್ನತ ಅಧಿಕಾರಿಗಳ ಜತೆಗೆ ಈ ವೈಎಸ್‌ಟಿ ಟ್ಯಾಕ್ಸ್ ಕುಳಗಳನ್ನು ಕೂರಿಸಿಕೊಂಡು ಚರ್ಚೆ ಮಾಡಿದ್ದೇಕೆ. ಪೊಲೀಸ್ ಇಲಾಖೆಯ ಸಭೆಯಲ್ಲಿ ಅವರಿಗೇನು ಕೆಲಸ? ಅವರನ್ನು ಒಳಕ್ಕೆ ಬಿಟ್ಟುಕೊಂಡವರು ಯಾರು ಎಂದು ಕುಮಾರಸ್ವಾಮಿ ನೇರವಾಗಿ ಪ್ರಶ್ನಿಸಿದರು.

ಭ್ರಷ್ಟಾಚಾರದ ರಿಪೋರ್ಟ್ ಕಾರ್ಡು ಕೊಡಲು ಹೋಗಿರಬೇಕು: 36 ಜನ ಮಂತ್ರಿಗಳನ್ನು ದೆಹಲಿಗೆ ಕರೆದುಕೊಂಡು ಹೋಗಿದ್ದರು. ಅವರ ಹೈಕಮಾಂಡಿಗೆ ರಿಪೋರ್ಟ್ ಕಾರ್ಡು ಕೊಡೋದಕ್ಕೆ ಅವರು ಹೋಗಿದ್ದರಂತೆ. ಅವರು ಅದನ್ನು ಇಡ ಬೇಕಿರುವುದು ರಾಜ್ಯದ ಆರೂವರೆ ಕೋಟಿ ಜನತೆಯ ಮುಂದೆ ಹೊರತು ಹೈಕಮಾಂಡ್ ಮುಂದೆ ಅಲ್ಲ. ಈ ರಾಜ್ಯದ ಜನರು ವೋಟು ಹಾಕಿ ಇವರನ್ನು ಗೆಲ್ಲಿಸಿ ದ್ದಾರೆ. ನಾವೇನು ಮಾಡಿದ್ದೇವೆ, ಮಾಡುತ್ತೇವೆ ಎನ್ನುವ ವರದಿಯನ್ನು ಜನರ ಮುಂದೆ ಇಡಬೇಕು.

ರಾಹುಲ್ ಗಾಂಧಿಗೆ ಬಿಗ್ ರಿಲೀಫ್

ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಶಿಕ್ಷೆಗೆ ಮಧ್ಯಂತರ ತಡೆ ನೀಡಿದೆ. ರಾಹುಲ್ ಗಾಂಧಿ ಪರ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ವಾದಿಸಿದ್ದರು.

ಗರಿಷ್ಠ ಶಿಕ್ಷೆಯನ್ನು ನೀಡುವಾಗ ವಿಚಾರಣಾ ನ್ಯಾಯಾಲಯವು ಅದರ ಕಾರಣಗಳನ್ನು ಬಹಿರಂಗಪಡಿಸಲಿಲ್ಲ ಎಂದು ಹೇಳಿದೆ. ನ್ಯಾಯಾಧೀಶರು ಅವರಿಗೆ 2 ವರ್ಷಕ್ಕಿಂತ ಕಡಿಮೆ ಶಿಕ್ಷೆಯನ್ನು ನೀಡಿದ್ದರೆ, ವಯನಾಡ್ ಸಂಸದರಾಗಿ ಅನರ್ಹಗೊಳಿಸಲು ಕಾರಣವಾದ ಜನಪ್ರತಿನಿಧಿ ಕಾಯ್ದೆಯ ಸೆಕ್ಷನ್ 8 (3) ರ ನಿಬಂಧನೆಗಳು ಅನ್ವಯಿಸುವುದಿಲ್ಲ ಎಂದು ನ್ಯಾಯಮೂರ್ತಿ ಬಿಆರ್ ಗವಾಯಿ ನೇತೃತ್ವದ ಪೀಠವು ಅಭಿಪ್ರಾಯಪಟ್ಟಿದೆ.

ವಿಚಾರಣಾ ನ್ಯಾಯಾಧೀಶರು, ಅವರು ಹೊರಡಿಸಿದ ಆದೇಶದಲ್ಲಿ ಗರಿಷ್ಠ ಎರಡು ವರ್ಷಗಳ ಶಿಕ್ಷೆಯನ್ನು ವಿಧಿಸಿದ್ದಾರೆ. ವಿಚಾರಣಾ ನ್ಯಾಯಾಧೀಶರು ಎರಡು ವರ್ಷಗಳ ಗರಿಷ್ಠ ಶಿಕ್ಷೆಯನ್ನು ಏಕೆ ವಿಧಿಸಿದ್ದಾರೆ ಎಂಬುದಕ್ಕೆ ಬೇರೆ ಯಾವುದೇ ಕಾರಣವನ್ನು ನೀಡಲಾಗಿಲ್ಲ. ಎರಡು ವರ್ಷಗಳ ಗರಿಷ್ಠ ಶಿಕ್ಷೆಯಲ್ಲಿ ಮಾತ್ರ ಜನಪ್ರತಿನಿಧಿ ಕಾಯಿದೆಯ ಸೆಕ್ಷನ್ 8 (3) ರ ನಿಬಂಧನೆಗಳು ಕಾರ್ಯರೂಪಕ್ಕೆ ಬಂದಿವೆ ಎಂಬುದನ್ನು ಗಮನಿಸಬೇಕು.

ನೀವು ಹೇಳಿಕೆಗಳನ್ನು ನೀಡುವಾಗ ಎಚ್ಚರದಿಂದ ಮಾತನಾಡಬೇಕು. ಅಂದಿನ ನಿಮ್ಮ ಹೇಳಿಕೆ ಒಳ್ಳೆಯ ಉದ್ದೇಶದಿಂದ ಕೂಡಿರಲಿಲ್ಲ. ಇನ್ಮುಂದೆ ಜಾಗೃತೆ ವಹಿಸಿ. ನಿಮ್ಮನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸುವುದರಿಂದ ನಷ್ಟ ಆಗಲಿದೆ ಎಂದ ಸುಪ್ರೀಂಕೋರ್ಟ್, ಜೈಲು ಶಿಕ್ಷೆಗೆ ಮಧ್ಯಂತರ ತಡೆಯಾಜ್ಞೆ ನೀಡಿದೆ. ಕೋರ್ಟ್ ತೀರ್ಪು ಹಿನ್ನೆಲೆಯಲ್ಲಿ ರಾಹುಲ್ ಗಾಂಧಿ, ಸಂಸದ ಸ್ಥಾನದಿಂದ ಮುಂದುವರಿಯಲಿದ್ದಾರೆ. ಅನರ್ಹತೆಯಿಂದ ಪಾರಾಗಿದ್ದಾರೆ. ಮತ್ತೆ ಲೋಕಸಭಾ ಚುನಾವಣೆಗೂ ಸ್ಪರ್ಧಿಸಬಹುದಾಗಿದೆ.

ನಾನು ಮೋದಿ ಸರ್ ನೇಮ್ ಹೇಳಿಕೆಗೆ ಕ್ಷಮೆ ಕೇಳಲ್ಲ. ಮೋದಿ ಹೆಸರಿನ ಯಾವುದೇ ಸಮುದಾಯ, ಸಮಾಜ ಇಲ್ಲ. ಹೀಗಾಗಿ ಸಮುದಾಯ, ಸಮಾಜಕ್ಕೆ ಮಾನನಷ್ಟ ಎಂಬುವುದು ತಪ್ಪು. ಮಾಡದ ತಪ್ಪಿಗೆ ಕ್ಷಮೆ ಕೇಳುವಂತೆ ಆಗ್ರಹಿಸುವುದು ನ್ಯಾಯಾಂಗ ವ್ಯವಸ್ಥೆಯ ದುರುಪಯೋಗ. ಕೇಸ್ ರದ್ದುಪಡಿಸಿ ಲೋಕಸಭಾ ಸದಸ್ಯರಾಗಿ ಮುಂದುವರಿಯಲು ಅವಕಾಶ ನೀಡಬೇಕು. ಒಂದು ವೇಳೆ ಹೇಳಿಕೆಗೆ ಕ್ಷಮೆ ಕೇಳುವುದಾಗಿದ್ದರೆ ಹಿಂದೆಯೇ ಕೇಳುತ್ತಿದ್ದೆ. ಮೋದಿ ಸರ್ ನೇಮ್ ಹೊಂದಿರುವವರು ಭಿನ್ನಭಿನ್ನ ಸಮುದಾಯ, ಸಮಾಜಕ್ಕೆ ಸೇರಿದ್ದಾರೆ. ನೀರವ್ ಮೋದಿ, ಲಲಿತ್ ಮೋದಿ, ಮೆಹುಲ್ ಚೋಕ್ಸಿ ಒಂದೇ ಜಾತಿಗೆ ಸೇರಿಲ್ಲ ಎಂದು ಒಪ್ಪಿಕೊಳ್ಳಲಾಗಿದೆ.

ದೂರುದಾರ ಪೂರ್ಣೇಶ್ ಮೋದಿ ಹಾಗೂ ಮೋದಿ ವಾಮಿಕ ಸಮಾಜಕ್ಕೆ ಸೇರಿದ್ದಾರೆ. ಮೋದಿ ಸರ್ ನೇಮ್ ಬೇರೆ ಜಾತಿಗಳಲ್ಲಿಯೂ ಇದೆ ಎಂದು ಪೂರ್ಣೇಶ್ ಮೋದಿ ಒಪ್ಪಿಕೊಂಡಿದ್ದಾರೆ. ರಾಹುಲ್ ಗಾಂಧಿಯ ವಿರುದ್ಧ ಎದುರಾಳಿ ರಾಜಕೀಯ ಪಕ್ಷದ ನಾಯಕರು ಕೇಸ್‌ಗಳನ್ನು ಹಾಕಿದ್ದಾರೆ. ಯಾವುದೇ ಕೇಸ್‌ನಲ್ಲೂ ರಾಹುಲ್ ಗಾಂಧಿ ಅಪರಾಧಿ ಎಂದು ತೀರ್ಪು ಬಂದಿಲ್ಲ ಎಂದು ರಾಹುಲ್ ಗಾಂಧಿ ಸುಪ್ರೀಂ ಕೋರ್ಟ್‌ಗೆ ಹೇಳಿದ್ದರು. ಗುಜರಾತ್ ಸರ್ಕಾರದ ಮಾಜಿ ಸಚಿವ ಪೂರ್ಣೇಶ್ ಮೋದಿ ಅವರು 2019 ರಲ್ಲಿ ಗಾಂಧಿ ವಿರುದ್ಧ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಹೂಡಿದ್ದರು. ಏಪ್ರಿಲ್ 13, 2019 ರಂದು ಕರ್ನಾಟಕದ ಕೋಲಾರದಲ್ಲಿ ಚುನಾವಣಾ ರ್‍ಯಾಲಿಯಲ್ಲಿ ರಾಹುಲ್ ಗಾಂಧಿ, ಎಲ್ಲ ಕಳ್ಳರ ಸರ್ ನೇಮ್ ಮೋದಿ ಎಂದೇ ಯಾಕಿದೆ ಎಂದು ಪ್ರಶ್ನಿಸಿದ್ದರು. ಈ ಹೇಳಿಕೆಯಿಂದ ರಾಹುಲ್ ಮೋದಿ ಹೆಸರಿರುವವರನ್ನು ಅವಮಾನಿಸಿದ್ದಾರೆ ಎಂದು ಪೂರ್ಣೇಶ್ ಮೋದಿ ದೂರು ದಾಖಲಿಸಿದ್ದರು.

ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಆಯ್ಕೆ ಮಾಡಿ

ಮತದಾರರಿಗೂ ತಿಳಿಯುತ್ತದೆ ಮತ್ತು ತಮಗಾಗಿ ಕಾರ್ಯಕರ್ತರನ್ನು ಸಂಘಟಿಸಿ ಜನರ ಬಳಿ ತೆರಳುತ್ತಾರೆ. ನೀವು ವಿಧಾನಸಭೆ ಚುನಾವಣೆಯ ಗೆಲುವಿನ ಗುಂಗಿನಲ್ಲಿರಬೇಡಿ. ಒಂದೆಡೆ ಜನಪರ ಆಡಳಿತ ನೀಡುವುದರ ಜತೆಗೆ ಜನಸಂಪರ್ಕವೂ ಇರಲಿ.

ಅಭ್ಯರ್ಥಿ ಕ್ಷೇತ್ರಾದ್ಯಂತ ಸುತ್ತಾಡುವುದರಿಂದ ಆತನಿಗೆ ಸರಿ–ತಪ್ಪುಗಳ ಅರಿವಾಗುತ್ತದೆ. ಪಕ್ಷದ ಗೆಲುವಿಗೆ ಏನಾಗಬೇಕು ಎಂಬ ಮಾಹಿತಿ ನೀಡುತ್ತಾನೆ. ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ಕನಿಷ್ಠ 20 ಸ್ಥಾನವನ್ನು ನೀವು ಗೆದ್ದು ನಮಗೆ ಕೊಡ ಬೇಕು. ಇದಕ್ಕಾಗಿ ಈಗಿನಿಂದಲೇ ಕಾರ್ಯಪ್ರವೃತ್ತರಾಗಿ ಸಮಯ ವ್ಯರ್ಥ ಮಾಡಬೇಡಿ. ಯಾರನ್ನು ಕಣಕ್ಕಿಳಿಸುತ್ತೇವೆ ಎಂಬುದು ನಮಗೆ ಬೇಕಾಗಿಲ್ಲ. ಅದರ ಜವಾಬ್ದಾರಿ ನೀವೇ ತೆಗೆದುಕೊಳ್ಳಿ. ಆದರೆ, ಅವರು ವರ್ಚಸ್ವಿ, ಪ್ರಭಾವಿ, ಪ್ರಾಮಾಣಿಕ ಹಾಗೂ ಜನರ ಜತೆ ಬೆರೆಯುವಂಥವರಾಗಿರಬೇಕು.

ತಕ್ಷಣವೇ ಜಿಲ್ಲಾಮಟ್ಟದಿಂದ ಮಾಹಿತಿ ಪಡೆದು ಸಮರ್ಥರ್‍ಯಾರು ಎಂಬುದನ್ನು ಗುರುತಿಸಿ. ಅದರಲ್ಲಿ ಒಂದೇ ಕ್ಷೇತ್ರದಲ್ಲಿ ಇಬ್ಬರು ಪ್ರಬಲರಿದ್ದರೆ, ಅವರು ಚುನಾವಣೆಗೆ ಸಿದ್ಧರಾಗಲಿ ಅಂತಿಮ ತೀರ್ಮಾನ ನಾವು ಕೈಗೊಳ್ಳುತ್ತೇವೆ ಎಂಬ ಸಂದೇಶ ನೀಡಿದ್ದಾರೆ.

ಕ್ಷೇತ್ರ ಗೆಲ್ಲಲೇಬೇಕು ಎನ್ನುವುದಾದರೆ, ಮಂತ್ರಿಗಳನ್ನೇ ಕಣಕ್ಕಿಳಿಸಿ. ಅಗತ್ಯಬಿದ್ದರೆ ಹೊರಗಿನವರನ್ನು ಪಕ್ಷಕ್ಕೆ ಸೆಳೆದುಕೊಳ್ಳಿ. ಕಳೆದ ಲೋಕಸಭಾ ಚುನಾವಣೆಗೂ, 2024ರಲ್ಲಿ ನಡೆಯುವ ಚುನಾವಣೆಗೂ ಅಜಗಜಾಂತರ ವ್ಯತ್ಯಾಸವಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ವರ್ಚಸ್ಸು ಕಳೆಗುಂದಿದೆ. ಇದಕ್ಕೆ ಕರ್ನಾಟಕದಲ್ಲಿ ನಾವು ಅಧಿಕಾರ ಹಿಡಿದಿರುವುದೇ ಸಾಕ್ಷಿ. ಕಳೆದ ಚುನಾವಣೆಯಲ್ಲಿ ನಾವು ಜೆಡಿಎಸ್‌ನೊಂದಿಗೆ ಚುನಾವಣಾ ಪೂರ್ವ ಹೊಂದಾಣಿಕೆ ಮಾಡಿಕೊಂಡ ಪರಿಣಾಮ ಹಲವು ಕ್ಷೇತ್ರಗಳನ್ನು ಕಳೆದುಕೊಂಡೆವು. ನಮಗೆ ಒಂದೇ ಒಂದು ಕ್ಷೇತ್ರ ಗೆಲ್ಲಲು ಸಾಧ್ಯವಾಯಿತು. ಈ ಬಾರಿ ನಮಗಾದ ಸೋಲು ಬಿಜೆಪಿಗೆ ಆಗಬೇಕು.

ಇಂದು ನಾಲ್ಕನೇ ಗ್ಯಾರಂಟಿ 'ಗೃಹಜ್ಯೋತಿ'ಗೆ ಚಾಲನೆ

ಮೈಸೂರು, ಆ. 4– ರಾಜ್ಯ ಕಾಂಗ್ರೆಸ್ ಸರ್ಕಾರದ 5 ಗ್ಯಾರಂಟಿಗಳಲ್ಲಿ ಒಂದಾದ ಗೃಹಜ್ಯೋತಿ ಯೋಜನೆ ನಾಳೆ (ಆ. 5) ಚಾಲನೆಗೊಳ್ಳುತ್ತಿದೆ. ಈ ಯೋಜನೆಯಡಿ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಕಲ್ಪಿಸಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ ಬೆಳಗ್ಗೆ 11 ಗಂಟೆಗೆ ಕಲಬುರಗಿಯ ಎನ್‌ವಿ ಮೈದಾನದಲ್ಲಿ ಏರ್ಪಡಿಸಿರುವ ಸಮಾರಂಭದಲ್ಲಿ ಗೃಹಜ್ಯೋತಿಗೆ ಚಾಲನೆ ನೀಡುತ್ತಿದ್ದಾರೆ.

ಇತ್ತ ಜಿಲ್ಲಾ ಉಸ್ತುವಾರಿ ಸಚಿವರುಗಳು ಆಯಾ ಜಿಲ್ಲೆಯಲ್ಲಿ ಏರ್ಪಡಿಸಿರುವ ಕಾರ್ಯಕ್ರಮಗಳಲ್ಲಿ ಯೋಜನೆ ಉದ್ಘಾಟಿಸಲಿದ್ದಾರೆ. ಅಂತೆಯೇ ಮೈಸೂರಿನ ಕಲಾಮಂದಿರದಲ್ಲಿ ಏರ್ಪಡಿಸಿರುವಂತಹ ಸಮಾರಂಭದಲ್ಲಿ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಗೃಹಜ್ಯೋತಿ ಯೋಜನೆಗೆ ಚಾಲನೆ ನೀಡಲಿದ್ದಾರೆ. ಇದುವರೆಗೆ ರಾಜ್ಯದಾದ್ಯಂತ ಗೃಹಜ್ಯೋತಿಗಾಗಿ 1.42 ಕೋಟಿ ಕುಟುಂಬಗಳು ನೋಂದಾಯಿಸಿವೆ. ಅರ್ಹ ಫಲಾನುಭವಿಗಳಿಗೆ ಆಗಸ್ಟ್ ತಿಂಗಳಿನಿಂದಲೇ ಉಚಿತ ವಿದ್ಯುತ್ ದೊರಕುತ್ತದೆ. ಈ ಯೋಜನೆಗೆ ಅರ್ಜಿ ಸಲ್ಲಿಕೆಗೆ ಯಾವುದೇ ಗಡುವು ಇಲ್ಲ. ಒಂದು ವರ್ಷದ ವಿದ್ಯುತ್ ಬಿಲ್ ಸರಾಸರಿ ಬಳಕೆ ಆಧರಿಸಿ ಗೃಹಜ್ಯೋತಿ ಉಚಿತ ವಿದ್ಯುತ್ ಕಲ್ಪಿಸಲಾಗುತ್ತಿದೆ.

ರಾಜ್ಯ ಕಾಂಗ್ರೆಸ್ ಸರ್ಕಾರ ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿತ್ತು. ಅದರಲ್ಲಿ ಈಗಾಗಲೇ 'ಶಕ್ತಿ' ಯೋಜನೆಯಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಅನ್ನಭಾಗ್ಯ ಯೋಜನೆಯಡಿ ಕುಟುಂಬದ ಸದಸ್ಯರಿಗೆ ತಲಾ 10 ಕೆಜಿ ಅಕ್ಕಿ ನೀಡಲಾಗುತ್ತಿದ್ದು, ಕುಟುಂಬದ ಯಜಮಾನಿಗೆ 2000 ರೂ. ನೀಡುವ 'ಗೃಹಲಕ್ಷ್ಮಿ'ಗೆ ಅರ್ಜಿ ಸ್ವೀಕಾರ ಆರಂಭವಾಗಿದೆ. ನಾಳೆ ಗೃಹ ಜ್ಯೋತಿಗೆ ಚಾಲನೆ ನೀಡಲಾಗುತ್ತಿದ್ದು, ಪದವೀಧರರು ಹಾಗೂ ಡಿಪ್ಲೊಮಾದಾರರಿಗೆ ಕ್ರಮವಾಗಿ 3 ಸಾವಿರ, 1500 ರೂ. ನಿರುದ್ಯೋಗ ಭತ್ಯೆ ಕಲ್ಪಿಸುವ 'ಯುವನಿಧಿ' ಯೋಜನೆ ಡಿಸೆಂಬರ್ ವೇಳೆಗೆ ಜಾರಿಯಾಗುವ ಸಾಧ್ಯತೆ ಇದೆ.

ಕೇರಳದಲ್ಲಿ ಸೈಬರ್ ಕ್ರೈಂ ಆರೋಪಿಯಿಂದ ಸುಲಿಗೆ, ನಾಲ್ವರು ಕರ್ನಾಟಕದ ಪೊಲೀಸರ ಅಮಾನತು!

ಬೆಂಗಳೂರು, ಆ.4– ಸೈಬರ್ ವಂಚನೆ ಆರೋಪಿಯಿಂದ ಹಣ ವಸೂಲಿ ಮಾಡಿದ ಆರೋಪದ ಮೇಲೆ ಕೇರಳ ಪೊಲೀಸರಿಂದ ಬಂಧನಕ್ಕೊಳಗಾಗಿದ್ದ ಕರ್ನಾಟಕದ ನಾಲ್ವರು ಪೊಲೀಸರನ್ನು ಇಂದು ಅಮಾನತು ಮಾಡಲಾಗಿದೆ.

ಈ ಸಂಬಂಧ ಎಸಿಪಿ ನೀಡಿದ ವರದಿ ಮೇರೆಗೆ ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾನಂದ, ಅಮಾನತು ಆದೇಶ ಹೊರಡಿಸಿದ್ದಾರೆ. ಅಮಾನತುಗೊಂಡ ಪೊಲೀಸರನ್ನು ಇನ್ಸ್ ಪೆಕ್ಟರ್ ಶಿವಪ್ರಕಾಶ್, ಹೆಡ್ ಕಾನ್‌ಸ್ಟೇಬಲ್‌ಗಳಾದ ವಿಜಯ್ ಕುಮಾರ್, ಶಿವಣ್ಣ ಮತ್ತು ಕಾನ್‌ಸ್ಟೇಬಲ್ ಸಂದೇಶ್ ಎಂದು ಗುರುತಿಸಲಾಗಿದೆ. ಇವರೆಲ್ಲರೂ ಬೆಂಗಳೂರಿನ ಸೈಬರ್ ಕ್ರೈಮ್, ಆರ್ಥಿಕ ಅಪರಾಧಗಳು ಮತ್ತು ಮಾದಕ ದ್ರವ್ಯ (ಸಿಇಎನ್) ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಉದ್ಯೋಗ ಕೊಡಿಸುವ ನೆಪದಲ್ಲಿ 26 ಲಕ್ಷ ರೂಪಾಯಿ ವಂಚಿಸಲಾಗಿದೆ ಎಂದು ಶ್ರೀಕಾಂತ್ ಎಂಬುವರು ಜೂನ್ 16ರಂದು ವೈಟ್ ಫೀಲ್ಡ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಮಡಿಕೇರಿ ಮೂಲದ ಐಸಾಕ್ ಎಂಬಾತನ ಖಾತೆಗೆ ತನಿಖೆಯ ವೇಳೆ 10,000 ರೂ. ವರ್ಗಾವಣೆ ಆಗಿರುವುದು ತನಿಖೆ ವೇಳೆ ಪತ್ತೆಯಾಗಿತ್ತು. ಐಸಾಕ್ ವಿಚಾರಣೆ ವೇಳೆ ಬ್ಯಾಂಕ್ ಖಾತೆಯನ್ನು ರಾಜೇಶ್ ಎಂಬಾತನ ಪರವಾಗಿ ತೆರೆಯಲಾಗಿದೆ ಎಂಬುದನ್ನು ಅರಿತ ಪೊಲೀಸರು ಆತನ ವಿಚಾರಣೆ ನಡೆಸಿದ್ದರು. ಈ ವೇಳೆ ಕೇರಳದ ನೌಶಾದ್‌ನ ಹೆಸರು ಹೊರಬಂದಿತ್ತು

ಹೀಗಾಗಿ ಆರೋಪಿ ಪೊಲೀಸ್ ತಂಡ ಕೇರಳದ ಕಲ್ಲೇಂಚೇರಿಗೆ ತೆರಳಿ ನೌಶಾದ್‌ನನ್ನು ವಶಕ್ಕೆ ಪಡೆದು 3 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಎನ್ನಲಾಗಿದೆ. ಹಣ ನೀಡಲು ವಿಫಲವಾದರೆ ಕ್ರಿಪ್ಟೋ ಕರೆನ್ಸಿ ಪ್ರಕರಣದಲ್ಲಿ ಫಿಕ್ಸ್ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ನೌಶಾದ್ ಕರ್ನಾಟಕ ಪೊಲೀಸರ ವಿರುದ್ಧ ಕಲಮಶ್ಶೇರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ನೌಶಾದ್ ಆರೋಪ ಕರ್ನಾಟಕ ಪೊಲೀಸ್ ಇಲಾಖೆಯನ್ನು ದೊಡ್ಡ ಮುಜುಗರದ ಪರಿಸ್ಥಿತಿಗೆ ತಂದಿತ್ತು. ಬೆಂಗಳೂರು ಪೊಲೀಸ್ ಕಮಿಷನರೇಟ್ ಎಸಿಪಿ ಶ್ರೇಣಿಯ ಅಧಿಕಾರಿಯನ್ನು ಕೇರಳಕ್ಕೆ ತನಿಖೆ ಮತ್ತು ವಿವರಗಳನ್ನು ಖಚಿತಪಡಿಸಿಕೊಳ್ಳಲು ಕಳುಹಿಸಿದೆ.

ಸುಪ್ರೀಂಕೋರ್ಟ್ ಆದೇಶ ಸ್ವಾಗತಾರ್ಹ, ಆದರೆ.; ರಾಹುಲ್ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ ವ್ಯಕ್ತಿಯ ಪ್ರತಿಕ್ರಿಯೆ..

ನವದೆಹಲಿ: ಮೋದಿ ಉಪನಾಮ ಅವಹೇಳನ ಪ್ರಕರಣದಲ್ಲಿ ರಾಹುಲ್ ಗಾಂಧಿ ಶಿಕ್ಷೆಗೆ ತಡೆ ನೀಡಿರುವ ಸುಪ್ರೀಂ ಕೋರ್ಟ್ ಆದೇಶದ ಬಗ್ಗೆ ಮಾನನಷ್ಟ ಮೊಕದ್ದಮೆ ಹಾಕಿದ್ದ ಬಿಜೆಪಿ ಶಾಸಕ ಪೂರ್ಣೇಶ್ ಮೋದಿ, ಸುಪ್ರೀಂಕೋರ್ಟ್ ಆದೇಶವನ್ನು ಸ್ವಾಗತಿಸುವುದಾಗಿ ಹೇಳಿದ್ದಾರೆ. ಸೆಷನ್ಸ್ ಕೋರ್ಟ್‌ನಲ್ಲಿ ಕಾನೂನು ಹೋರಾಟ ಮುಂದುವರೆಸುತ್ತೇವೆ ಎಂದು ತಿಳಿಸಿದ್ದಾರೆ. ಶಿಕ್ಷೆಯನ್ನು ಪ್ರಶ್ನಿಸಿ ಸಲ್ಲಿಸಿರುವ ಮೇಲ್ಮನವಿಯನ್ನು ತಿರಸ್ಕರಿಸುವಂತೆ ಬಿಜೆಪಿ ಶಾಸಕರು ಕೋರ್ಟ್‌ಗೆ ಮನವಿ ಮಾಡಿದ್ದರು. ರಾಹುಲ್ ಗಾಂಧಿ ಮೋದಿ ಉಪನಾಮ ಇರುವ ಎಲ್ಲರನ್ನೂ ಅವಹೇಳನ ಮಾಡಿದ್ದಾರೆ, ಅದರಲ್ಲೂ ಗುಜರಾತ್‌ನ ಮೋದ್ ವನಿಕ್ ಸಮುದಾಯವನ್ನು ಅವಹೇಳನ ಮಾಡಿದ್ದಾರೆ ಎಂದು ಪೂರ್ಣೇಶ್ ಮೋದಿ ಹೇಳಿದ್ದರು.

ಗ್ಯಾರಂಟಿ ಯೋಜನೆಗೆ ಎಸ್‌ಸಿ, ಎಸ್‌ಟಿ ಅನುದಾನ ಬಳಸದಂತೆ ಡಿಸಿಗೆ ಮನವಿ



ಮೈಸೂರು, ಆ. 4– ಗ್ಯಾರಂಟಿ ಯೋಜನೆಗೆ ಎಸ್‌ಸಿ, ಎಸ್‌ಟಿ ಅನುದಾನ ಬಳಸಬೇಡಿ ಎಂದು ಸೇವಾ ಚಿಲುಮೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಕಾರ್ತಿಕ್ ಮರಿಯಪ್ಪ, ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಹಾಗೂ ಮೈಸೂರಿನ ತಹಸೀಲ್ದಾರ್ ಶಿವಪ್ರಕಾಶ್ ಅವರಿಗೆ ಮನವಿ ಸಲ್ಲಿಸಿದರು. ಬಳಿಕ ಮಾತನಾಡಿದ ಅವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಗಳ ಅಭಿವೃದ್ಧಿಗೆ ಬಳಕೆ ಆಗಬೇಕಿದ್ದ ಈ ಸಾಲಿನ ಅನುದಾನದಲ್ಲಿನ 11 ಸಾವಿರ ಕೋಟಿ ಹಣವನ್ನು ಸರ್ಕಾರದ ಗ್ಯಾರಂಟಿ ಯೊಜನೆಗಳಿಗೆ ಬಳಸುತ್ತಿರುವುದರಿಂದ ಕೂಡಲೇ ಸರ್ಕಾರ ಹಿಂದೆ ಸರಿಯಬೇಕು ಎಂದರು. ಸಮುದಾಯಗಳ ಅಭಿವೃದ್ಧಿಗೆ ಮೀಸಲಾದ ಹಣ ಸರ್ಕಾರದ ಗ್ಯಾರಂಟಿ ಯೊಜನೆಗಳಿಗೆ ಬಳಸುತ್ತಿರುವುದು ಖಂಡನೀಯ. ಶೋಷಿತ ಸಮುದಾಯಗಳ ಹಕ್ಕು ಕಿತ್ತುಕೊಂಡು, ತಮ್ಮ ಘೋಷಣೆ ಯೋಜನೆಗಳಿಗೆ ಹಣಬಳಸದೆ, ಸಮುದಾಯಗಳ ವಿದ್ಯಾರ್ಥಿಗಳು, ನಿರುದ್ಯೋಗಿ ಯುವಕರು, ಮಹಿಳೆಯರು, ಮಕ್ಕಳು, ರೈತ, ಕೂಲಿ ಕಾರ್ಮಿಕರ ಸಮಗ್ರ ಅಭಿವೃದ್ಧಿಗೆ ಅನುದಾನ ಮೀಸಲಿಡಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಕೆ.ಎನ್.ಸ್ವಾಮಿ, ಸಮಾಜ ಸೇವಕ ಪ್ರಕಾಶ್ ಸಿಂಹ, ಸುರೇಶ್ ಹಾಗೂ ಇನ್ನಿತರ ಉಪಸ್ಥಿತರಿದ್ದರು.

ಬಂಡಿಪುರ ಅರಣ್ಯಾಧಿಕಾರಿ ಡಾ.ರಮೇಶ್‌ಕುಮಾರ್‌ಗೆ ಸನ್ಮಾನ



ಮೈಸೂರು, ಆ. 4– ಕಾಡುಗಳಲ್ಲಿ ಹುಲಿಗಳ ಸಂಖ್ಯೆ ಹೆಚ್ಚಾಗಿದ್ದರೆ ಅರಣ್ಯ ಸಂಪತ್ತು ನಾಶವಾಗುವುದನ್ನು ತಪ್ಪಿಸಲು ಸಹಕಾರಿ ಎಂದು ಬಂಡಿಪುರ ಅರಣ್ಯ ಅಧಿಕಾರಿ ಹಾಗೂ ಕ್ಷೇತ್ರ ನಿರ್ದೇಶಕ ಡಾ. ರಮೇಶ್ ಕುಮಾರ್ ತಿಳಿಸಿದರು.

ಅರಣ್ಯ ಅಧಿಕಾರಿಗಳ ದಿನಾಚರಣೆ ಹಾಗೂ ಹುಲಿ ದಿನಾಚರಣೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಬಂಡಿಪುರ ಅರಣ್ಯ ಪ್ರದೇಶವನ್ನು ಪ್ಲಾಸ್ಟಿಕ್ ಮುಕ್ತ ಮಾಡಲು ಪ್ರವಾಸಿಗರ ಸಹಕಾರ ಮುಖ್ಯ. ಪ್ರವಾಸಿಗರು ಅರಣ್ಯ ಇಲಾಖೆ ನೀಡಿರುವ ಸೂಚನೆಯನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ವನ್ಯಜೀವಿ ಹಾಗೂ ಅರಣ್ಯ ಪ್ರದೇಶವನ್ನು ಸಂರಕ್ಷಣೆ ಮಾಡಲು ನಮ್ಮೊಂದಿಗೆ ಸಹಕರಿಸಬೇಕೆಂದು ಮನವಿ ಮಾಡಿದರು. ಇಂದಿನ ಪರಿಸ್ಥಿತಿಯಲ್ಲಿ ಹುಲಿ ಸಂತತಿ ಉಳಿಸುವುದು, ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ಹಲವು ಕಾರಣಗಳಿಂದ ಅಳಿವಿನಂಚಿಗೆ ತಲುಪುತ್ತಿರುವ ಹುಲಿ ಸಂರಕ್ಷಿಸುವ ಕೆಲಸವಾಗಬೇಕಾಗಿದೆ. ಕಾಡುಗಳಲ್ಲಿ ಹುಲಿಗಳ ಸಂಖ್ಯೆ ಹೆಚ್ಚಾಗಿದ್ದರೆ ಅರಣ್ಯ ಸಂಪತ್ತು ನಾಶವಾಗುವುದನ್ನು ತಪ್ಪಿಸಲು ಸಹಕಾರಿಯಾಗಲಿದೆ ಎಂದರು. ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಎಂ ಪಿ ರಾಜೇಶ್, ಪವನ್ ಸಿದ್ದರಾಮ, ರಾಕೇಶ್, ನವೀನ್ ಕೆಂಪಿ ಇನ್ನಿತರರು ಉಪಸ್ಥಿತರಿದ್ದರು.

ಡೇ–ನಲ್ಮ್ ಅಭಿಯಾನದಡಿ ಸಮಿತಿ ರಚನೆಗೆ ಅರ್ಜಿ ಅಹ್ವಾನ

ಮೈಸೂರು,ಆ.4– ನಂಜನಗೂಡು ನಗರಸಭಾ ವ್ಯಾಪ್ತಿಯಲ್ಲಿ ಕರ್ನಾಟಕ ಬೀದಿ ವ್ಯಾಪಾರಿಗಳ ಜೀವನೋಪಾಯ ಸಂರಕ್ಷಣೆ ಮತ್ತು ವ್ಯಾಪಾರ ನಿಯಂತ್ರಣ ನಿಯಮ 2019ರಂತೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬೀದಿಬದಿ ವ್ಯಾಪಾರಿಗಳ ಕುಂದು ಕೊರತೆ ನಿವಾರಣಾ ಸಮಿತಿಯನ್ನು ನಿವೃತ್ತ ಸಿವಿಲ್ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ರಚಿಸಬೇಕಾಗಿದೆ. ನಂಜನಗೂಡು ನಗರಸಭಾ ವ್ಯಾಪ್ತಿಯಲ್ಲಿ ವಾಸಿಸುವ ನಿವೃತ್ತ ಸಿವಿಲ್ ನ್ಯಾಯಾಧೀಶರು ಪ್ರಕಟಣೆ ಹೊರಡಿಸಿದ ಒಂದು ವಾರದೊಳಗೆ ನಂಜನಗೂಡು ನಗರಸಭಾ ಪೌರಾಯುಕ್ತರಿಗೆ ಅರ್ಜಿಯನ್ನು ಸಲ್ಲಿಸಬಹುದು.

ರಿಂಗ್ ರಸ್ತೆ ಇಕ್ಕೆಲಗಳಲ್ಲಿ ಕಂಡುಬರುತ್ತಿದ್ದ ತ್ಯಾಜ್ಯ ಈಗ ವಿಭಜಕದಲ್ಲೇ ಪ್ರತ್ಯಕ್ಷ!

ಕಾನೂನಿನ ಭಯ ಇಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ ಹೇಸಿಗೆ ಜನರ ಕೃತ್ಯ



ಮೈಸೂರು, ಆ.4(ಎಸ್‌ಬಿಡಿ)– ಮೈಸೂರಿನ ರಿಂಗ್ ರಸ್ತೆ ಮಧ್ಯಭಾಗದಲ್ಲೂ ಕಟ್ಟಡ ತ್ಯಾಜ್ಯ ಆವರಿಸುತ್ತಿದ್ದು, ವಾಹನ ಸವಾರರಿಗೆ ಸಂಕಷ್ಟ ಎದುರಾಗಿದೆ.

ರಿಂಗ್ ರಸ್ತೆ ಇಕ್ಕೆಲಗಳಲ್ಲಿ ಕಟ್ಟಡ ತ್ಯಾಜ್ಯದ ರಾಶಿ ಹಾಕಲಾಗುತ್ತಿತ್ತು. ಇದೀಗ ರಸ್ತೆ ವಿಭಜಕ (ಮೀಡಿಯನ್)ದಲ್ಲೂ ಸುರಿಯಲಾಗುತ್ತಿದೆ. ಜೆಕೆ ಟೈರ್ಸ್ ಸಮೀಪ ವಿಭಜಕದಲ್ಲಿ ಸುರಿದಿರುವ ಕಟ್ಟಡ ತ್ಯಾಜ್ಯ ರಸ್ತೆಗೂ ಹರಡಿದೆ. ಇಟ್ಟಿಗೆ ಚೂರುಗಳು, ಸಿಮೆಂಟ್ ಚಕ್ಕೆಗಳು, ತ್ಯಾಜ್ಯ ತುಂಬಿರುವ ಪ್ಲಾಸ್ಟಿಕ್ ಚೀಲಗಳು ರಸ್ತೆಗೆ ಉರುಳಿ ಬಿದ್ದಿವೆ. ಇದರಿಂದ ವಾಹನ ಸವಾರರಿಗೆ ತೀವ್ರ ಸಂಕಷ್ಟ ಎದುರಾಗಿದೆ. ದ್ವಿಚಕ್ರ ವಾಹನಗಳು ಅಪಘಾತಕ್ಕೀಡಾಗುವ ಅಪಾಯಕಾರಿ ಪರಿಸ್ಥಿತಿ ನಿರ್ಮಾಣವಾಗಿದೆ.

ರಿಂಗ್ ರಸ್ತೆಯಲ್ಲಿ ವಾಹನಗಳು ವೇಗವಾಗಿ ಸಂಚರಿಸುತ್ತವೆ. ಹೆಬ್ಬಾಳು, ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಂಪನಿಗಳ ನೌಕರರು ನಿತ್ಯ ದ್ವಿಚಕ್ರ ವಾಹನಗಳಲ್ಲಿ ಓಡಾಡುತ್ತಾರೆ. ತ್ಯಾಜ್ಯ ಸುರಿದಿರುವ ಜಾಗದಲ್ಲಿ ಇಳಿಜಾರು ರಸ್ತೆ ಇರುವುದರಿಂದ ವಿಭಜಕದಿಂದ ಜಾರಿಬಿದ್ದಿರುವ ಇಟ್ಟಿಗೆ, ಸಿಮೆಂಟ್ ಚೂರುಗಳು ತಕ್ಷಣಕ್ಕೆ ಗುರುತಿಸಲಾಗದು. ತ್ಯಾಜ್ಯದ ಮೇಲೆ ದ್ವಿಚಕ್ರ ವಾಹನದ ಚಕ್ರ ಹತ್ತಿದರೆ ನಿಯಂತ್ರಣ ತಪ್ಪಿ ಸವಾರರು ಕೆಳಗೆ ಉರುಳಬಹುದು. ಇಲ್ಲವೇ ಇದನ್ನು ತಪ್ಪಿಸಲು ಹೋಗಿ ತಕ್ಷಣ ಪಕ್ಕಕ್ಕೆ ಬಂದರೆ ಹಿಂದಿನಿಂದ ಬರುವ ವಾಹನಗಳು ಡಿಕ್ಕಿ ಹೊಡೆಯುತ್ತವೆ. ಕೂಡಲೇ ವಿಭಜಕದಲ್ಲಿರುವ ಕಟ್ಟಡ ತ್ಯಾಜ್ಯವನ್ನು ತೆರವು ಮಾಡದಿದ್ದರೆ ಅಪಘಾತ ಸಂಭವಿಸಿ, ಸಾವು–ನೋವಾಗುವುದು ನಿಶ್ಚಿತ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಇದೊಂದು ದುಷ್ಕೃತ್ಯ: ರಿಂಗ್ ರಸ್ತೆ ಇಕ್ಕೆಲಗಳಲ್ಲಿ ಕಟ್ಟಡ ತ್ಯಾಜ್ಯ ಸುರಿಯುವುದನ್ನು ತಡೆಯಲು ಸಾಧ್ಯವಾಗಿಲ್ಲ. ಆದರೆ ವಿಭಜಕಕ್ಕೆ ತ್ಯಾಜ್ಯ ಸುರಿಯುವ ಮೂಲಕ ಸಾರ್ವಜನಿಕರ ಪ್ರಾಣಕ್ಕೆ ಸಂಚಕಾರ ತಂದೊಡ್ಡಿರುವುದು ನಿಜಕ್ಕೂ ದುಷ್ಕೃತ್ಯ. ಕೆಟ್ಟ ಮನಃಸ್ಥಿತಿಯಿದ್ದವರು ಮಾತ್ರ ಈ ಕೆಲಸ ಮಾಡಲು ಸಾಧ್ಯ. ಸಣ್ಣ ಗೂಡ್ಸ್ ವಾಹನದಲ್ಲಿ ತಂದು ಇಲ್ಲಿ ತ್ಯಾಜ್ಯ ಸುರಿದಿರಬೇಕು. ಯಾರೇ ಆದರೂ ಅವರನ್ನು ಪತ್ತೆಹಚ್ಚಿ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ರಿಂಗ್ ರಸ್ತೆಯ ವಿಭಜಕವನ್ನೆಲ್ಲಾ ತ್ಯಾಜ್ಯ ಆವರಿಸುತ್ತದೆ ಎಂದು ಒತ್ತಾಯಿಸಿದ್ದಾರೆ.

ಕಂಡಕಂಡಲ್ಲಿ ತ್ಯಾಜ್ಯದ ರಾಶಿ: ಮೈಸೂರಿನಲ್ಲಿ ಕಟ್ಟಡ ನಿರ್ಮಾಣ, ನವೀಕರಣ ಹೆಚ್ಚುವುದರ ಜೊತೆಗೆ ಕಂಡಕಂಡಲ್ಲಿ ತ್ಯಾಜ್ಯದ ರಾಶಿ ಬೀಳುತ್ತಿದೆ. ಸಣ್ಣ ಪ್ರಮಾಣದ ತ್ಯಾಜ್ಯವಾದರೆ ಪಕ್ಕದ ಯಾವುದಾದರೂ ರಸ್ತೆ ಬದಿಯಲ್ಲೇ ಸುರಿಯುತ್ತಾರೆ. ಹೆಚ್ಚು ಪ್ರಮಾಣದ್ದಾದರೆ ಜನಸಂಚಾರ ಕಡಿಮೆ ಇರುವ ಜಾಗಗಳನ್ನು ಹುಡುಕಿ, ಅಲ್ಲಿ ಸುರಿಯಲಾಗುತ್ತಿದೆ. ವಿಜಯನಗರ ಮೊದಲನೇ ಹಂತದ ಮೊದಲ ಮುಖ್ಯರಸ್ತೆಯಲ್ಲಿ ಕಟ್ಟಡ ತ್ಯಾಜ್ಯದ ರಾಶಿ ಹೆಚ್ಚುತ್ತಲೇ ಇದೆ. ಅಲ್ಲಿಯೂ ರಸ್ತೆಗೆ ತ್ಯಾಜ್ಯ ಸುರಿದು ಹೋಗಿದ್ದಾರೆ. ಬೋಗಾದಿ ರಸ್ತೆ, ಕೆಆರ್‌ಎಸ್ ರಸ್ತೆ ಸೇರಿದಂತೆ ಹಲವೆಡೆ ಕಟ್ಟಡ ತ್ಯಾಜ್ಯದ ಸಣ್ಣ ಸಣ್ಣ ಗುಡ್ಡೆಗಳು ಆಗಾಗ್ಗೆ ಕಾಣಸಿಗುತ್ತಿದೆ.

ಪಾಲಿಕೆ ಎಚ್ಚರಿಕೆಗೆ ಕಿಮ್ಮತ್ತಿಲ್ಲ: ಕಟ್ಟಡ ತ್ಯಾಜ್ಯ ವಿಲೇವಾರಿಗೆಂದೇ ಮೈಸೂರು ನಗರ ಪಾಲಿಕೆ ಹಂಚ್ಯಾ–ಸಾತಗಳ್ಳಿ ವಲಯದಲ್ಲಿ ಪ್ರತ್ಯೇಕ ಜಾಗ ಗುರುತಿಸಿದೆ. ನಿಗದಿತ ಸ್ಥಳದಲ್ಲಿ ವಿಲೇವಾರಿ ಮಾಡದೆ ಕಂಡಕಂಡಲ್ಲಿ ತ್ಯಾಜ್ಯ ಹಾಕಿದರೆ ಅಂತಹವರಿಂದ ದಂಡ ವಸೂಲಿ ಮಾಡುವುದರ ಜೊತೆಗೆ ಸಂಬಂಧಪಟ್ಟವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸುವುದಾಗಿ ನಗರ ಪಾಲಿಕೆ ಎಚ್ಚರಿಕೆ ನೀಡಿದೆ. ಆದರೆ ಈ ಎಚ್ಚರಿಕೆಗೆ ಯಾವುದೇ ಕಿಮ್ಮತ್ತಿಲ್ಲ ಎನ್ನುವುದಕ್ಕೆ ರಿಂಗ್ ರಸ್ತೆ ವಿಭಜಕದಲ್ಲಿ ತ್ಯಾಜ್ಯ ಸುರಿದಿರುವುದೇ ಸ್ಪಷ್ಟ ನಿದರ್ಶನ. ರಸ್ತೆ ಬದಿ ಕಟ್ಟಡ ತ್ಯಾಜ್ಯ ಸುರಿದು ನಗರದ ಸೌಂದರ್ಯ ಹಾಳುಗೆಡಹುತ್ತಿದ್ದವರು ಇದೀಗ ರಿಂಗ್ ರಸ್ತೆ ಮಧ್ಯೆಯೇ ಹಾಕಿ ಸಾರ್ವಜನಿಕರ ಜೀವಕ್ಕೂ ಸಂಚಕಾರ ತಂದೊಡ್ಡಿದ್ದಾರೆ. ಈಗಲೂ ಪಾಲಿಕೆ ಅಧಿಕಾರಿಗಳು ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳದಿದ್ದರೆ ಮುಂದಾಗಬಹುದಾದ ಅನಾಹುತಕ್ಕೆ ಅವರೇ ಕಾರಣರಾಗುತ್ತಾರೆ. ಇದನ್ನು ಸಂಸದ ಪ್ರತಾಪ್ ಸಿಂಹ ಅವರೂ ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದ್ದಾರೆ.

ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಹೊಣೆ

● ಶಾಸಕ ಶ್ರೀವತ್ಸ ಕಿವಿಮಾತು ● ಮಕ್ಕಳಲ್ಲಿ ಪರಿಸರ ಪ್ರಜ್ಞೆ ಬೆಳೆಸದಿದ್ದರೆ ಅವರ ಭವಿಷ್ಯ ದುಸ್ತರ; ಆತಂಕ



ಮೈಸೂರು, ಆ.4(ಎಸ್‌ಬಿಡಿ)– ಮಕ್ಕಳಲ್ಲಿ ಪರಿಸರ ಕಾಳಜಿ ಮೂಡಿಸದಿದ್ದರೆ ಮುಂದಿನ ದಿನಗಳು ದುಸ್ತರವಾಗಿರಲಿವೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಗುಬ್ಬಚ್ಚಿ ಶಾಲೆ)ಯಲ್ಲಿ ಕೆವಿಆರ್‌ಬಿ ಟ್ರಸ್ಟ್ ಹಾಗೂ ಕೆಎಂಪಿಕೆ ಟ್ರಸ್ಟ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮಕ್ಕಳಿಗೆ ಸಸಿಗಳು ಹಾಗೂ ಸಮವಸ್ತ್ರ ವಿತರಿಸಿ ಅವರು ಮಾತನಾಡಿದರು.

ವಿಶ್ವ ಪರಿಸರ ದಿನಾಚರಣೆ ಜೂ.5ಕ್ಕೆ ಸೀಮಿತವಾಗದೆ ನಿರಂತರವಾಗಿರಬೇಕು. ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಿದೆ ಎನ್ನುವುದನ್ನು ಮರೆಯಬಾರದು. ಮಾನವನ ದುರಾಸೆಯಿಂದ ಹಾಳಾಗುತ್ತಿರುವ ಪರಿಸರವನ್ನು ಉಳಿಸಿಕೊಳ್ಳುವ ಪ್ರಯತ್ನ ಈಗಿನಿಂದಾದರೂ ಆರಂಭವಾಗಬೇಕು. ಮುಖ್ಯವಾಗಿ ಮಕ್ಕಳಲ್ಲಿ ಪರಿಸರ ಕಾಳಜಿ ಮೂಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಚಿಕ್ಕ ವಯಸ್ಸಿನಿಂದಲೇ ಪರಿಸರ ಪ್ರೇಮ ಮೂಡದಿದ್ದರೆ ಭವಿಷ್ಯದಲ್ಲಿ ದೊಡ್ಡ ಅಪಾಯ ಎದುರಿಸಬೇಕಾಗುತ್ತದೆ ಈ ನಿಟ್ಟಿನಲ್ಲಿ 'ಮಗುವಿಗೊಂದು ಮರ ಶಾಲೆಗೊಂದು ಪುಟ್ಟ ವನ' ಅನುಷ್ಠಾನಗೊಳ್ಳಬೇಕು ಎಂದು ಆಶಿಸಿದರು.

ಕೆವಿಆರ್‌ಬಿ ಟ್ರಸ್ಟ್ ಅಧ್ಯಕ್ಷ ಕೆ.ಆರ್. ಸತ್ಯನಾರಾಯಣ್ ಮಾತನಾಡಿ, ಎಲ್ಲರೂ ಹಣ ಪಾವತಿಸಿ ಆರೋಗ್ಯ ವಿಮೆ ಮಾಡಿಸಿಕೊಳ್ಳುತ್ತಾರೆ. ಆದರೆ ಉತ್ತಮ ಆರೋಗ್ಯಕ್ಕೆ ಕಾರಣವಾಗಿರುವ ಗಿಡ–ಮರಗಳನ್ನು ಬೆಳೆಸುವ ಕಾಳಜಿ ಬಹುತೇಕರಿಗಿಲ್ಲ. ಎಲ್ಲರೂ ಪರಿಸರದ ಮಹತ್ವ ತಿಳಿದುಕೊಳ್ಳಬೇಕು. ಯುವ ಜನತೆ ವಾರದಲ್ಲಿ ಒಂದು ದಿನವಾದರೂ ಪರಿಸರ ಕಾಳಜಿಯ ಕಾರ್ಯಗಳಲ್ಲಿ ಸಕ್ರಿಯವಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು, ಸಂಪನ್ಮೂಲ ಅಧಿಕಾರಿ ಶ್ರೀಕಂಠಸ್ವಾಮಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ನಗರ ಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಕೆಎಂಪಿಕೆ ಟ್ರಸ್ಟ್‌ನ ವಿಕ್ರಮ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಜಯಸಿಂಹ ರಂಗನಾಥ್, ಸುಚೇಂದ್ರ ಚಕ್ರಪಾಣಿ ಶಾಲೆಯ ಮುಖ್ಯಶಿಕ್ಷಕ ಮೋಹನ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಆಗಸ್ಟ್ 9ರಂದು ಪಾಕಿಸ್ತಾನ ಸಂಸತ್ ವಿಸರ್ಜನೆ

ಪ್ರಧಾನಿ ಶೆಹಬಾಜ್ ಷರೀಫ್ ಘೋಷಣೆ

ಇಸ್ಲಾಮಾಬಾದ್, ಆ.4– ಆಗಸ್ಟ್ 9ರಂದು ಸಂಸತ್ ವಿಸರ್ಜನೆ ಮಾಡುವುದಾಗಿ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದಾರೆ. ಸಂಸತ್ತಿನ ಕೆಳಮನೆಯ ಅವಧಿ ಮುಕ್ತಾಯಕ್ಕೆ ಇನ್ನೂ ಮೂರು ವರ್ಷ ಇದ್ದು ಅದಕ್ಕೂ ಮುನ್ನ ವಿಸರ್ಜನೆ ಮಾಡುವುದಾಗಿ ಘೋಷಣೆ ಮಾಡಿದ್ದಾರೆ.

ವಿಸರ್ಜನೆ ಮಾಡಿದ 90 ದಿನದೊಳಗೆ ಚುನಾವಣೆ ನಡೆಯಲಿದೆ. ಪ್ರಧಾನ ಮಂತ್ರಿಗಳ ನಿವಾಸದಲ್ಲಿ ಸರ್ಕಾರದ ಭಾಗವಾಗಿರುವ ಮಿತ್ರಪಕ್ಷಗಳಿಗೆ ಆಯೋಜಿಸಿದ್ದ ಭೋಜನ ಕೂಟದಲ್ಲಿ ಶೆಹಬಾಜ್ ಈ ಘೋಷಣೆ ಮಾಡಿದ್ದಾರೆ ಎಂದು 'ಡಾನ್' ಪತ್ರಿಕೆ ವರದಿ ಮಾಡಿದೆ.

ಸಂಸತ್ ವಿಸರ್ಜನೆ ಮಾಡುವ ಬಗ್ಗೆ ಪ್ರಧಾನಮಂತ್ರಿಗಳು ಅಧ್ಯಕ್ಷ ಆರೀಫ್ ಅಲವಿ ಅವರಿಗೆ ಆಗಸ್ಟ್ 9ರಂದು ಅಧಿಸೂಚನೆ ಕಳುಹಿಸಲಿದ್ದಾರೆ ಎಂದು 'ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್' ವರದಿ ಮಾಡಿದೆ. ಸಂವಿಧಾನದ ಪ್ರಕಾರ ಪ್ರಧಾನಿಗಳು ಕಳುಹಿಸಿದ ಅಧಿಸೂಚನೆಗೆ ರಾಷ್ಟ್ರಪತಿಗಳ ಮುದ್ರೆ ಬಿದ್ದ ಕೂಡಲೇ ಸಂಸತ್ ವಿಸರ್ಜನೆಯಾಗಲಿದೆ. ಪಾಕಿಸ್ತಾನದ ಸಂವಿಧಾನದ ಪ್ರಕಾರ, ಒಂದು ವೇಳೆ ಸರ್ಕಾರ ಅವಧಿ ಪೂರೈಸಿದರೆ 60 ದಿನಗಳಲ್ಲಿ ಚುನಾವಣೆ ನಡೆಸಬೇಕು. ಅವಧಿಗೂ ಮುನ್ನ ವಿಸರ್ಜನೆ ಮಾಡಿದರೆ 90 ದಿನಗಳ ಕಾಲಾವಕಾಶ ಇರಲಿದೆ.

ಆಗಸ್ಟ್ 9 ರಂದು, ಪ್ರಧಾನ ಮಂತ್ರಿ ಶೆಹಬಾಜ್ ಷರೀಫ್ ಅವರು ರಾಷ್ಟ್ರೀಯ ಅಸೆಂಬ್ಲಿಯ ವಿಸರ್ಜನೆಗೆ ರಾಷ್ಟ್ರಪತಿಗಳಿಗೆ ಔಪಚಾರಿಕ ಸಲಹೆ ಕಳುಹಿಸುತ್ತಾರೆ. ಸಾಂವಿಧಾನಿಕ ನಿಬಂಧನೆಗಳ ಪ್ರಕಾರ, ವಿಸರ್ಜನೆಯನ್ನು ಜಾರಿಗೆ ತರಲು ಅಧ್ಯಕ್ಷರು 48 ಗಂಟೆಗಳ ಒಳಗೆ ಸಲಹೆಗೆ ಸಹಿ ಹಾಕಬೇಕು. ಯಾವುದೇ ಕಾರಣಕ್ಕೂ ರಾಷ್ಟ್ರಪತಿಗಳು ಸಲಹೆಗೆ ಸಹಿ ಹಾಕದಿದ್ದರೆ, ವಿಧಾನಸಭೆಯನ್ನು ಸ್ವಯಂಚಾಲಿತವಾಗಿ ವಿಸರ್ಜನೆ ಮಾಡಲಾಗುತ್ತದೆ ಎಂದು ಎಕ್ಸ್ ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ.

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ



ಸೆಲ್ಫಿ ತೆಗೆದುಕೊಳ್ಳುವಾಗ ನೀರುಪಾಲಾಗಿದ್ದ ಬೆಂಗಳೂರು ಪ್ರವಾಸಿಗನ ಶವ ಪತ್ತೆ



ಹಾರಂಗಿ ಜಲಾಶಯದಲ್ಲಿ ಹೊರಹರಿವು ಬಂದ್ ಮಾಡಿ ಶವ ಪತ್ತೆ ಮಾಡಿದ ಅಗ್ನಿಶಾಮಕ ದಳ, ದುಬಾರೆಯ ರಿವರ್‌ರ್‍ಯಾಫ್ಟರ್ ತಂಡ



ಮಡಿಕೇರಿ, ಆ.4– ಹಾರಂಗಿ ಜಲಾಶಯದ ಕೆಳ ಭಾಗದ ಸೇತುವೆಯ ಬಳಿ ಸೆಲ್ಫಿ ತೆಗೆಯುವಾಗ ಕಾಲು ಜಾರಿ ನೀರಿಗೆ ಬಿದ್ದು ಮೃತಪಟ್ಟಿದ್ದ ಪ್ರವಾಸಿಗ ಸಂದೀಪ್ (45) ಅವರ ಮೃತದೇಹ ಶುಕ್ರವಾರ ಪತ್ತೆಯಾಗಿದ್ದು, ಮೃತದೇಹವನ್ನು ಕುಶಾಲನಗರ ಸರಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಗಿದೆ.

ಘಟನೆ ಹಿನ್ನೆಲೆ: ಬೆಂಗಳೂರು ಮೂಲದ ಸಂದೀಪ್ ತಮ್ಮ ನಾಲ್ವರು ಸ್ನೇಹಿತರೊಂದಿಗೆ ಕೊಡಗಿಗೆ ಪ್ರವಾಸ ಬಂದಿದ್ದು, ಗುರುವಾರ ಸಂಜೆ 5.30ರ ಸಮಯದಲ್ಲಿ ಹಾರಂಗಿ ಜಲಾಶಯ ವೀಕ್ಷಿಸಲು ತೆರಳಿದ್ದರು. ಈ ವೇಳೆ ಸಂದೀಪ್ ಜಲಾಶಯದ ಮುಂಭಾಗದ ಸೇತುವೆಯ ತಟದಲ್ಲಿ ನಿಂತು ಸೆಲ್ಫಿ ಕ್ಲಿಕ್ಕಿಸಲು ಯತ್ನಿಸಿದರು. ಈ ವೇಳೆ ಆಯತಪ್ಪಿ ಹಾರಂಗಿ ನದಿಗೆ ಬಿದ್ದಿದ್ದಾರೆ.

ಜಲಾಶಯದಿಂದ ನದಿ ಪಾತ್ರಕ್ಕೆ ನೀರು ಹರಿಸುತ್ತಿದ್ದ ಕಾರಣ ಸ್ನೇಹಿತರ ಕಣ್ಣ ಮುಂದೆಯೇ ಸಂದೀಪ್ ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ. ಬಳಿಕ ಅಗ್ನಿ ಶಾಮಕ ದಳ ಮತ್ತು ದುಬಾರೆಯ ರಿವರ್ ರ್‍ಯಾಫ್ಟರ್‌ಗಳು ಸ್ಥಳಕ್ಕಾಗಮಿಸಿ, ಮೃತ ದೇಹಕ್ಕಾಗಿ ಶೋಧ ಕಾರ್ಯ ನಡೆಸಿದ್ದರು. ರಾತ್ರಿ 9.30ರವರೆಗೆ ಶೋಧ ನಡೆಸಿದ ಕಾರ್ಯಾಚರಣೆ ತಂಡ ಕತ್ತಲಾದ ಕಾರಣ ಕಾರ್ಯಾಚರಣೆಯನ್ನು ಮೊಟಕುಗೊಳಿಸಿತ್ತು. ರಾತ್ರಿ ಘಟನಾ ಸ್ಥಳಕ್ಕೆ ಆಗಮಿಸಿದ್ದ ಮಡಿಕೇರಿ ಶಾಸಕ ಡಾ.ಮಂಥರ್ ಗೌಡ ಕಾರ್ಯಾಚರಣೆ ಪರಿಶೀಲನೆ ನಡೆಸಿದರು.

ನೀರು ಬಂದ್ ಮಾಡಿ ಶೋಧ: ಹಾರಂಗಿ ಜಲಾಶಯದ ನದಿ ಮೂಲ ಪ್ರದೇಶಗಳಲ್ಲಿ ಮಳೆ ಪ್ರಮಾಣ ಕುಸಿತವಾಗಿರುವ ಕಾರಣ ಜಲಾಶಯಕ್ಕೆ ಒಳ ಹರಿವಿನ ನೀರಿನ ಪ್ರಮಾಣ ದಲ್ಲೂ ಇಳಿಕೆ ಕಂಡಿದೆ. ಈ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಗಿನಿಂದಲೇ ಜಲಾಶಯದಿಂದ ನದಿ ಪಾತ್ರಕ್ಕೆ ಹರಿಯ ಬಿಡಲಾಗುತ್ತಿದ್ದ ನೀರಿನ ಹೊರ ಹರಿವನ್ನು ಸ್ಥಗಿತ ಮಾಡಿ ಸಂದೀಪ್ ಮೃತದೇಹ ಶೋಧಿಸಲು ಕ್ರಮ ಕೈಗೊಳ್ಳಲಾಗಿತ್ತು. ಅಂದಾಜು ಸೇತುವೆಯ 100 ಮೀಟರ್ ಉದ್ದಕ್ಕೂ ಶೋಧ ನಡೆಸಿದ ಅಗ್ನಿಶಾಮಕ ದಳ ಸಿಬ್ಬಂದಿಗಳು, ರ್‍ಯಾಫ್ಟರ್‌ಗಳು ಹಾಗೂ ಸ್ಥಳೀಯ ಮುಳುಗು ತಜ್ಞರು ಮಧ್ಯಾಹ್ನ 12.30ರ ವೇಳೆಗೆ ಹಾರಂಗಿ ನದಿಯಲ್ಲಿ ಕೊಚ್ಚಿ ಹೋಗಿದ್ದ ಸಂದೀಪ್ ಅವರ ಮೃತದೇಹವನ್ನು ಹೊರ ತೆಗೆಯುವಲ್ಲಿ ಯಶಸ್ವಿಯಾಗಿದ್ದಾರೆ. ಬಳಿಕ ಮಹಜರು ನಡೆಸಿ ಮೃತದೇಹವನ್ನು ಕುಶಾಲನಗರ ಸರಕಾರಿ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ತಡೆಗೋಡೆ ಇಲ್ಲದೆ ಆಪತ್ತು



ಹಾರಂಗಿ ಜಲಾಶಯ ಭರ್ತಿಯಾಗುವ ಸಂದರ್ಭ ಕೊಡಗಿನ ವಿವಿಧ ಕಡೆಗಳ ಜನರು ಮತ್ತು ಹೊರ ಊರ ಪ್ರವಾಸಿಗರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಆಗಮಿಸಿ ಜಲಾಶಯದಿಂದ ನೀರು ಹರಿಸುವುದನ್ನು ವೀಕ್ಷಿಸುತ್ತಾರೆ. ಜಲಾಶಯ ವ್ಯಾಪ್ತಿಯ ನಿವಾಸಿಗಳು ಮತ್ತು ಹಾರಂಗಿ ನದಿ ಪಾತ್ರದ ಸ್ಥಳೀಯರನ್ನು ಹೊರತುಪಡಿಸಿ ಇನ್ನುಳಿದವರಿಗೆ ನೀರಿನ ಹೊರ ಹರಿವಿನ ರಭಸದ ಯಾವುದೇ ಅರಿವಿಲ್ಲ. ಮಾತ್ರವಲ್ಲದೇ ಜಲಾಶಯದಿಂದ ಹೆಚ್ಚಿನ ನೀರು ಹರಿಸಿದಲ್ಲಿ ಕೆಳ ಸೇತುವೆ ಸಂಪೂರ್ಣ ಮುಳುಗಡೆಯಾಗುತ್ತದೆ. ಈ ಸಂದರ್ಭ ಸೇತುವೆಯ ಎರಡೂ ಬದಿಯಲ್ಲಿ ಬ್ಯಾರಿಕೇಡ್ ಅಳವಡಿಸಿ ಜನ ಮತ್ತು ವಾಹನ ಸಂಚಾರವನ್ನು ಬಂದ್ ಮಾಡಲಾಗುತ್ತದೆ. ಆದರೆ ಇದೀಗ ನೀರಿನ ಹೊರ ಹರಿವು ಕಡಿಮೆ ಇರುವ ಕಾರಣ ಸೇತುವೆ ಸಂಚಾರಕ್ಕೆ ಮುಕ್ತವಾಗಿದೆ. ಅಷ್ಟೇ ಅಲ್ಲದೇ ಈ ಕೆಳ ಸೇತುವೆಯ ಎರಡೂ ಬದಿಗಳಲ್ಲೂ ಯಾವುದೇ ತಡೆಗೋಡೆಗಳಿಲ್ಲ. ಹೀಗಾಗಿ ಪ್ರಾಣಾಪಾಯಕ್ಕೆ ಆಹ್ವಾನ ನೀಡುತ್ತಿದೆ. ಈ ಕುರಿತು ಸ್ಥಳೀಯರು ಕಾವೇರಿ ನೀರಾವರಿ ನಿಗಮಕ್ಕೆ ಮನವಿ ಸಲ್ಲಿಸಿ ಸೇತುವೆಯನ್ನು ಎತ್ತರಿಸುವಂತೆ ಹಾಗೂ ಎರಡೂ ಬದಿಗಳಲ್ಲಿ ತಡೆಗೋಡೆ ನಿರ್ಮಿಸುವಂತೆ ಹಲವು ವರ್ಷಗಳ ಹಿಂದೆಯೇ ಒತ್ತಾಯಿಸಿದ್ದಾರೆ. ಈ ಕುರಿತು ಕಾವೇರಿ ನೀರಾವರಿ ನಿಗಮದ ಮೂಲಕ ಸರಕಾರಕ್ಕೂ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಆದರೆ ಸರಕಾರ ಯಾವುದೇ ಕ್ರಮಕೈಗೊಂಡಿಲ್ಲ ಎಂದು ಜಲಾಶಯದ ಸುತ್ತಮುತ್ತಲಿನ ನಿವಾಸಿಗಳು ಆರೋಪಿಸಿದ್ದಾರೆ.

ಮುಳುಗುತ್ತಿರುವ ವಿಡಿಯೋ ವೈರಲ್: ಸಂದೀಪ್ ಆಯತಪ್ಪಿ ಹಾರಂಗಿ ನದಿಯಲ್ಲಿ ಬಿದ್ದು ಕೊಚ್ಚಿ ಹೋಗುತ್ತಿರುವ ವಿಡಿಯೋ ಇದೀಗ ವೈರಲ್ ಆಗಿದೆ. ಸೇತುವೆ ಮೇಲಿದ್ದ ಸಾರ್ವಜನಿಕರು ತಮ್ಮ ಮೊಬೈಲ್‌ನಲ್ಲಿ ಈ ವಿಡಿಯೋ ವನ್ನು ಸೆರೆ ಹಿಡಿದಿದ್ದು, ಇದೀಗ ಸಾಮಾ ಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ. ಈ ವಿಡಿಯೋವನ್ನು ಪೊಲೀಸರು ಪರಿಶೀಲನೆ ನಡೆಸಿದ್ದಾರೆ.

ಸ್ವಾತಂತ್ರ್ಯೋತ್ಸವದ ಅಂಗವಾಗಿ ಆ.9ರಿಂದ ಕೊಡಗಲ್ಲಿ ಪಂಜಿನ ಮೆರವಣಿಗೆ, ವಾಹನ ಜಾಥಾ, ಸಭಾ ಕಾರ್ಯಕ್ರಮ



ಮಡಿಕೇರಿ, ಆ.4– ಸ್ವಾತಂತ್ರ್ಯೋತ್ಸವದ ಅಂಗವಾಗಿ ಕೊಡಗಿನ 6 ಕಡೆಗಳಲ್ಲಿ ಅಖಂಡ ಭಾರತ ಸಂಕಲ್ಪ ದಿನ ಕಾರ್ಯಕ್ರಮದ ಪ್ರಯುಕ್ತ ಪಂಜಿನ ಮೆರವಣಿಗೆ, ವಾಹನ ಜಾಥ ಮತ್ತು ಸಭಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಹಿಂದು ಜಾಗರಣ ವೇದಿಕೆಯ ಜಿಲ್ಲಾ ಸಂಯೋಜಕ ಕುಕ್ಕೇರ ಅಜಿತ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಆ.9ರಂದು ವಿರಾಜಪೇಟೆಯಲ್ಲಿ ಸಂಜೆ 6 ಗಂಟೆಗೆ ಪಂಜಿನ ಮೆರವಣಿಗೆಯನ್ನು ಆಯೋಜಿಸಲಾಗಿದೆ. ಮೆರವಣಿಗೆ ತೆಲುಗರ ಬೀದಿ ಮಾರಿಯಮ್ಮ ದೇವಾಲಯದಿಂದ ಆರಂಭಗೊಂಡು ಕ್ಲಾಕ್ ಟವರ್, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕಾಗಿ ಮಹಿಳಾ ಸಮಾಜದ ಬಳಿ ಸಂಜೆ 7.30ಕ್ಕೆ ಮುಕ್ತಾಯಗೊಳ್ಳಲಿದೆ. ಸುಮಾರು 2 ಕಿ.ಮೀ. ಅಂತರದ ಪಂಜಿನ ಮೆರವಣಿಗೆ ನಡೆಯಲಿದೆ ಎಂದು ತಿಳಿಸಿದರು. ಗೋಣಿಕೊಪ್ಪಲಿನಲ್ಲಿ ಆ.10ರಂದು ಬೆಳಗ್ಗೆ 10 ಗಂಟೆಗೆ ಸುಮಾರು 10 ಕಿ.ಮೀ. ಅಂತರದ ವಾಹನ ಜಾಥ ನಡೆಯಲಿದೆ. ಅಲ್ಲಿನ ಆರ್‌ಎಂಸಿ ಬಳಿಯಿಂದ ಜಾಥ ಆರಂಭಗೊಂಡು ಖಾಸಗಿ ಬಸ್ ನಿಲ್ದಾಣದ ಮೂಲಕ ಬೈಪಾಸ್ ಮಾರ್ಗವನ್ನು ಹಾದು ಪೊನ್ನಂಪೇಟೆ ಕೊಡವ ಸಮಾಜದ ಬಳಿ ಮುಕ್ತಾಯಗೊಳ್ಳಲಿದೆ. ಬಳಿಕ ಸಭಾ ಕಾರ್ಯಕ್ರಮ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಆ.11ರಂದು ಸಂಜೆ 6 ಗಂಟೆಗೆ ಮಹದೇವಪೇಟೆಯ ಶ್ರೀ ಚೌಡೇಶ್ವರಿ ದೇಗುಲದಿಂದ ಪಂಜಿನ ಮೆರವಣಿಗೆಯನ್ನು ಆಯೋಜಿಸಲಾಗಿದೆ. ಮೆರವಣಿಗೆ ಇಂದಿರಾ ಗಾಂಧಿ ವೃತ್ತ, ಅಂಚೆ ಕಚೇರಿ, ಜನರಲ್ ತಿಮ್ಮಯ್ಯ ವೃತ್ತ, ಶ್ರೀ ಓಂಕಾರೇಶ್ವರ ದೇವಸ್ಥಾನ ರಸ್ತೆಯ ಮೂಲಕ ಸಾಗಿ ಶ್ರೀ ಲಕ್ಷ್ಮೀ ನರಸಿಂಹ ಕಲ್ಯಾಣ ಮಂಟಪದಲ್ಲಿ ಮುಕ್ತಾಯಗೊಳ್ಳಲಿದೆ. ಬಳಿಕ ಸಭಾ ಕಾರ್ಯಕ್ರಮ ನಡೆಯಲಿದೆ ಎಂದು ವಿವರಿಸಿದರು.

ಮಾದಾಪುರದಲ್ಲಿ ಆ.12ರಂದು ಸಂಜೆ 6 ಗಂಟೆಗೆ ಜಂಬೂರಿನ ಎಫ್‌ಎಂಸಿ ಬಡಾವಣೆಯಿಂದ ಮಾದಾಪುರ ಪಟ್ಟಣಕ್ಕಾಗಿ ಶ್ರೀ ಗಣಪತಿ ದೇವಾಲಯದವರೆಗೆ ಪಂಜಿನ ಮೆರವಣಿಗೆ ನಡೆಯಲಿದೆ. ಆ.13ರಂದು ಕೊಡ್ಲಿಪೇಟೆಯಲ್ಲಿ ಸಂಜೆ 6 ಗಂಟೆಗೆ ಆರ್‌ಎಂಸಿ ಮಾರುಕಟ್ಟೆ ಸಮೀಪದ ಶ್ರೀ ಗಣಪತಿ ದೇವಾಲಯದಿಂದ ಆರಂಭಗೊಳ್ಳುವ ಪಂಜಿನ ಮೆರವಣಿಗೆ ಶ್ರೀ ಬಸವೇಶ್ವರ ಕಲ್ಯಾಣ ಮಂಟಪದವರೆಗೆ ನಡೆದು, ಬಳಿಕ ಸಭಾ ಕಾರ್ಯಕ್ರಮ ನಡೆಯಲಿದೆ ಎಂದರು.

ಆ.14ರಂದು ಕುಶಾಲನಗರದ ಬೈಚನಹಳ್ಳಿ ಶ್ರೀ ಮಾರಿಯಮ್ಮ ದೇವಾಲಯದಿಂದ ಪಂಜಿನ ಮೆರವಣಿಗೆ ಆರಂಭಗೊಳ್ಳಲಿದ್ದು, ಮೆರವಣಿಗೆ ಆಕ್ಸಿಸ್ ಬ್ಯಾಂಕ್ ರಸ್ತೆಗಾಗಿ, ರಥ ಬೀದಿ ಐ.ಬಿ ರಸ್ತೆಗಾಗಿ ರೈತ ಭವನದಲ್ಲಿ ಮುಕ್ತಾಯವಾಗಲಿದೆ. ನಂತರ ಸಭಾ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಹಿಂದೂ ಜಾಗರಣ ವೇದಿಕೆಯ ಚೇತನ್ ಶಾಂತಿ ನಿಕೇತನ, ವೈ.ಬಿ. ಭೋಜೇಗೌಡ, ಚಾಮೇರ ಪ್ರದೀಪ್, ಸುನಿಲ್ ಮಾದಾಪುರ, ಶಾಂತೆಯಂಡ ತಿಮ್ಮಯ್ಯ ಉಪಸ್ಥಿತರಿದ್ದರು.

ಅಖಿಲ ಕೊಡವ ಸಮಾಜದಿಂದ ಕಕ್ಕಡ ಪದಿನೆಟ್ಟ್ ನಮ್ಮೆ ಆಚರಣೆ

ಆಕಾಶವಾಣಿ ನಿವೃತ್ತ ಉದ್ಘೋಷಕಿ ಶಾರದಾ ನಂಜಪ್ಪಗೆ ಸನ್ಮಾನ, ಮದ್ದ್‌ಪುಟ್ಟ್, ಮದ್ದ್ ಪಾಂಯಸ ಸೇರಿ ಸಾಮೂಹಿಕ ಕಕ್ಕಡ ಭೋಜನ ಸೇವನೆ



ವಿರಾಜಪೇಟೆ, ಆ.4– ವಿರಾಜಪೇಟೆ ಅಖಿಲ ಕೊಡವ ಸಮಾಜದ ಪೊಮ್ಮಕ್ಕಡ ಪರಿಷತ್ ವತಿಯಿಂದ ಅಖಿಲ ಕೊಡವ ಸಮಾಜದ ಸಭಾಂಗಣದಲ್ಲಿ ಕಕ್ಕಡ ಪದಿನೆಟ್ಟ್ ನಮ್ಮೆ ಆಚರಿಸಲಾಯಿತು. ಇದೇ ವೇಳೆ ಮಡಿಕೇರಿ ಆಕಾಶವಾಣಿಯಲ್ಲಿ ಉದ್ಘೋಷಕಿಯಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ ಕೂಪದೀರ ಶಾರದಾ ನಂಜಪ್ಪ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಾರದಾ ನಂಜಪ್ಪ, ಮಡಿಕೇರಿ ಆಕಾಶವಾಣಿಯಲ್ಲಿ ನಾನು ಉದ್ಯೋಗಿಯಾಗಿ ಕೆಲಸ ಮಾಡಿದ್ದೇನೆ ಹೊರತು ಹೆಚ್ಚೇನೂ ಮಾಡಿಲ್ಲ, ಇಂದು ಜನರು ನನಗೆ ತೋರಿಸುತ್ತಿರುವ ಪ್ರೀತಿ ಸಂತಸ ತಂದಿದೆ. ಮಾಡುವ ಕೆಲಸವನ್ನು ಕೇವಲ ಸಂಬಳಕ್ಕಾಗಿ ಮಾಡದೆ ಸರಕಾರಿ ಕೆಲಸ ದೇವರ ಕೆಲಸವೆಂದು ಮನತೃಪ್ತಿಗಾಗಿ ಮಾಡಿದಾಗ ನಾವು ಜನರಿಗೆ ಹತ್ತಿರವಾಗುತ್ತೇವೆ. ಆಕಾಶವಾಣಿಯಲ್ಲಿ ಸೇವೆ ಸಲ್ಲಿಸಿದ್ದ 30 ವರ್ಷದಲ್ಲಿ ಅನೇಕ ಕಾರ್ಯಕ್ರಮಗಳನ್ನು ಜನರಿಗೆ ನೀಡಲೂ ಕೇಳುಗರು ಕಾರಣ, ಜನರು ಕಾರ್ಯಕ್ರಮಗಳನ್ನು ಬಯಸಿದಾಗ ಮಾತ್ರ ನಮಗೆ ನೀಡಲು ಸಾಧ್ಯ ಎಂದರು.

ಕೊಡವ ಭಾಷೆ ಹಾಗೂ ಕೊಡವರ ಮೇಲೆ ಅಭಿಮಾನ ಇರುವ ಯಾವುದೇ ಧರ್ಮದ ವ್ಯಕ್ತಿಗಳನ್ನು ನಾವು ಅಭಿನಂದಿಸಬೇಕಿದೆ. ಆಗಮಾತ್ರ ಭಾಷೆ ಬೆಳೆಯಲು ಸಾಧ್ಯ ಎಂದು ಅಭಿಪ್ರಾಯಪಟ್ಟರಲ್ಲದೆ. ಮಕ್ಕಳಿಗೆ ಮನೆಯಲ್ಲಿ ಅವರವರ ಮಾತೃಭಾಷೆಯನ್ನು ಕಲಿಸಬೇಕಿದೆ, ಇಂಗ್ಲಿಷ್ ವ್ಯಾಮೋಹಕ್ಕೆ ಬಲಿಯಾಗಬಾರದು. ಯಾವುದೇ ಗೌರವಗಳನ್ನು ಹಿಂದೆ ಹೋಗಿ ಪಡೆಯುವುದಕ್ಕಿಂತ ಅದು ತಾನಾಗಿಯೇ ಬಂದರೆ ಉತ್ತಮ. ನಿವೃತ್ತಿಯ ನಂತರವೂ ಆಕಾಶವಾಣಿಯೊಂದಿಗೆ ಒಡನಾಟ ಇರುವುದಾಗಿ ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ವಿಧಾನ ಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಮಾತನಾಡಿ, ಕೊಡವರು ಕೊಡಗಿನಲ್ಲಿರುವ ಹೆಚ್ಚು ಜನರು ಉದ್ಯೋಗದ ನಿಮಿತ್ತ ಅಥವಾ ಮಕ್ಕಳ ವಿದ್ಯಾಭ್ಯಾಸದ ನಿಮಿತ್ತ ಜಿಲ್ಲೆಯಿಂದ ಹೊರಜಿಲ್ಲೆ ಹಾಗೂ ಹೊರರಾಜ್ಯದಲ್ಲಿ ನೆಲಸಿದ್ದಾರೆ ಆದರೆ ಬದುಕು ಕಟ್ಟಿಕೊಂಡಿರುವುದು ತಪ್ಪೇನು ಇಲ್ಲ, ಕನಿಷ್ಠ ತಮ್ಮ ಹಕ್ಕನ್ನು ಚಲಾಯಿಸಲು ಕೊಡಗಿನಲ್ಲಿ ಪ್ರತಿಯೊಬ್ಬರು ಮತದಾರರ ಚೀಟಿ ಹೊಂದಬೇಕಿದೆ. ಹಾಗೂ ಜಿಲ್ಲೆಯ ಶ್ರೀಮಂತ ಸಂಸ್ಕೃತಿಯನ್ನು ಮುಂದಿನ ಪೀಳಿಗೆ ಗೂ ಉಳಿಸಿ ಬೆಳೆಸಬೇಕಾಗಿರುವುದು ಜನಾಂಗದ ನಮ್ಮ ಕರ್ತವ್ಯವಾಗಿದೆ ಎಂದರು.

ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ಮಾತನಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಖಿಲ ಕೊಡವ ಸಮಾಜ ಪೊಮ್ಮಕ್ಕಡ ಪರಿಷತ್ ಅಧ್ಯಕ್ಷೆ ಬಾಚರಣಿಯಂಡ ರಾಣು ಅಪ್ಪಣ್ಣ ಅವರು ಕಕ್ಕಡ ವಿಶೇಷತೆಗಳ ಬಗ್ಗೆ ಪೊಮ್ಮಕ್ಕಡ ಪರಿಷತ್ ಜೊತೆ ಕೈಜೋಡಿಸಲು ಮನವಿ ಮಾಡಿದರು. ವೇದಿಕೆಯಲ್ಲಿ ಅಖಿಲ ಕೊಡವ ಸಮಾಜ ಉಪಾಧ್ಯಕ್ಷ ಅಜ್ಜಿ ಕುಟ್ಟೀರ ಸುಬ್ರಮಣಿ ಮಾದಯ್ಯ, ಖಜಾಂಚಿ ಮಂಡೇಪಂಡ ಸುಗುಣ ಮುತ್ತಣ್ಣ, ಪ್ರಧಾನ ಕಾರ್ಯದರ್ಶಿ ಅಮ್ಮುಣಿಚಂಡ ರಾಜ ನಂಜಪ್ಪ ಸಹಕಾರ್ಯದರ್ಶಿ ನಂದೇಟೀರ ರಾಜ, ಅಖಿಲ ಕೊಡವ ಸಮಾಜ ಯೂತ್ ವಿಂಗ್ ಅಧ್ಯಕ್ಷ ಚಮ್ಮಟೀರ ಪ್ರವೀಣ್ ಉತ್ತಪ್ಪ, ಪೊಮ್ಮಕ್ಕಡ ಪರಿಷತ್ ಕಾರ್ಯದರ್ಶಿ ಮಂಡೇಪಂಡ ಗೀತಾ ಮಂದಣ್ಣ, ಮಳವಂಡ ಪೂವಿ, ಅಜ್ಜಿ ಕುಟ್ಟೀರ ಶಾಂತಿ, ತೀತೀರ ಊರ್ಮಿಳಾ, ಉಪಸ್ಥಿತರಿದ್ದರು. ಬಳಿಕ ಮದ್ದ್ ಪುಟ್ಟ್, ಮದ್ದ್ ಪಾಯಸ ಸೇರಿದಂತೆ ಸಾಮೂಹಿಕ ಕಕ್ಕಡ ಭೋಜನವನ್ನು ಏರ್ಪಡಿಸಲಾಗಿತ್ತು.

ಡಿವೈಎಸ್ಪಿ ಲಕ್ಷ್ಮಯ್ಯ ಅಧಿಕಾರ ಸ್ವೀಕಾರ

ಚಾಮರಾಜನಗರ, ಆ.4– ಚಾಮರಾಜನಗರ ಉಪವಿಭಾಗದ ನೂತನ ಡಿವೈಎಸ್ಪಿಯಾಗಿ ಲಕ್ಷ್ಮಯ್ಯ ಶುಕ್ರವಾರ ಅಧಿಕಾರ ಸ್ವೀಕರಿಸಿದರು.



ಈ ಹಿಂದಿನ ಡಿವೈಎಸ್ಪಿ ಪ್ರಿಯದರ್ಶಿನಿ ಸಾಣೆಕೊಪ್ಪ ಅವರನ್ನು ವರ್ಗಾವಣೆ ಮಾಡಿ, ಅವರ ಸ್ಥಾನಕ್ಕೆ ಲಕ್ಷ್ಮಯ್ಯ ಅವರನ್ನು ಸರ್ಕಾರ ನಿಯೋಜಿಸಿತ್ತು. ಅದರಂತೆ ಶುಕ್ರವಾರ ಬೆಳಗ್ಗೆ ಚಾ.ನಗರ ಡಿವೈಎಸ್ಪಿ ಕಚೇರಿಗೆ ಆಗಮಿಸಿದ ಲಕ್ಷ್ಮಯ್ಯ ಅಧಿಕಾರ ಸ್ವೀಕರಿಸಿದರು. ಈ ಹಿಂದೆ ಇವರು ರಾಜ್ಯ ಗುಪ್ತವಾರ್ತೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಪ್ರಿಯದರ್ಶಿನಿ ಸಾಣೆಕೊಪ್ಪ ಅವರನ್ನು ಬೆಂಗಳೂರಿನ ಮಾರಸಂದ್ರ ಉಪವಿಭಾಗಕ್ಕೆ ವರ್ಗಾವಣೆ ಮಾಡಲಾಗಿದೆ.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ



ಚಾಮರಾಜನಗರ, ಆ.4– ಪರಿಶಿಷ್ಟ ಜಾತಿ, ಪಂಗಡದವರಿಗೆ ಮೀಸಲಿಟ್ಟಿರುವ ಎಸ್‌ಎಸ್‌ಪಿ ಹಾಗೂ ಟಿಎಸ್‌ಪಿ ಯೋಜನೆಯ 11 ಸಾವಿರ ಕೋಟಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳಲು ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದು ಆರೋಪಿಸಿ ನಗರದಲ್ಲಿ ಶುಕ್ರವಾರ ಬಿಜೆಪಿ ಜಿಲ್ಲಾ ಘಟಕದ ಎಸ್‌ಸಿ, ಎಸ್‌ಟಿ ಮೋರ್ಚಾದಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಾಲಯದ ಎದುರು ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಭುವನೇಶ್ವರಿ ವೃತ್ತದವರೆಗೆ ಮೆರವಣಿಗೆ ನಡೆಸಿ ಪ್ರತಿಭಟನೆ ನಡೆಸಿದರು. ಅಲ್ಲಿಂದ ಮತ್ತೆ ಜಿಲ್ಲಾಡಳಿತ ಭವನದವರೆಗೆ ಮೆರವಣಿಗೆ ನಡೆಸಿ ಪ್ರವೇಶದ್ವಾರದ ಎದುರು ಧರಣಿ ನಡೆಸಿ ರಾಜ್ಯ ಕಾಂಗ್ರೆಸ್ ಸರ್ಕಾರ, ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹದೇವಪ್ಪ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪರಿಶಿಷ್ಟ ಜಾತಿ ಮತ್ತು ಪಂಗಡದವರ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಹಣವನ್ನು ಗ್ಯಾರಂಟಿ ಯೋಜನೆಗಳಿಗಾಗಿ ಬಳಸುವ ಮೂಲಕ ರಾಜ್ಯ ಸರ್ಕಾರ ದಲಿತ ವಿರೋಧಿ ಧೋರಣೆ ಅನುಸರಿಸುತ್ತಿದೆ ಎಂದು ದೂರಿದರು.

ಬಿಜೆಪಿಯವರು 1.5 ಲಕ್ಷ ಕೋಟಿ ಭ್ರಷ್ಟಾಚಾರ ಮಾಡಿದ್ದಾರೆ. ಆ ಹಣವನ್ನೇ ಗ್ಯಾರಂಟಿ ಯೋಜನೆಗೆ ಬಳಸಿದರೆ ಸಾಕು, ಬೇರೆ ಹಣವೇ ಬೇಡ ಎಂದು ಕಾಂಗ್ರೆಸ್‌ನವರು ಹೇಳಿದ್ದರು. ಈಗ ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದಾರೆ. ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸಿ, ಆ ಹಣವನ್ನು ಪಡೆದು ಗ್ಯಾರಂಟಿ ಯೋಜನೆಗಳಿಗೆ ಬಳಸಬಹುದಲ್ಲವೇ, ಬಿಜೆಪಿ ವಿರುದ್ಧ ಸುಳ್ಳು ಆರೋಪ ಮಾಡಿರುವ ಕಾಂಗ್ರೆಸ್, ಭ್ರಷ್ಟಾಚಾರ ನಡೆದಿರುವುದನ್ನು ಸಾಬೀತುಪಡಿಸಲಿ ಎಂದು ಸವಾಲು ಹಾಕಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನಾರಾಯಣ ಪ್ರಸಾದ್, ಮಾಜಿ ಶಾಸಕರಾದ ಎನ್.ಮಹೇಶ್, ಸಿ.ಎಸ್.ನಿರಂಜನ ಕುಮಾರ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಮುಖಂಡರಾದ ಕೆ.ಶಿವರಾಂ, ನಿಜಗುಣರಾಜು, ವೆಂಕಟರಮಣ ಸ್ವಾಮಿ(ಪಾಪು), ನಾಗಶ್ರೀ ಪ್ರತಾಪ್, ಪಿ.ವೃಷಭೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಆರ್.ಸುಂದರ್, ನೂರೊಂದು ಶೆಟ್ಟಿ, ಶ್ರೀಧರ್ ಮೂರ್ತಿ, ಮನೋಜ್ ಪಟೇಲ್, ಕುಲಗಾಣ ಶಾಂತಮೂರ್ತಿ, ಸುರೇಶ್‌ನಾಯಕ, ಕೆಲ್ಲಂಬಹಳ್ಳಿ ಸೋಮನಾಯಕ, ಜಯಸುಂದರ್, ಗೀತಾ ಶಿವಪುರ, ಪದ್ಮ ಸೇರಿದಂತೆ ಇತರರಿದ್ದರು.

ಆಸಿಡ್ ಕುಡಿದು ಆತ್ಮಹತ್ಯೆಗೆ ಯತ್ನ

ಚಾಮರಾಜನಗರ, ಆ.4– ಆಸಿಡ್ ಕುಡಿದು ಜವಾಹರ್ ನವೋದಯ ಶಾಲೆಯ ಪ್ರಯೋಗಾಲಯದ ಸಿಬ್ಬಂದಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ತಾಲೂಕಿನ ಹೊಂಡರಬಾಳುವಿನಲ್ಲಿ ಗುರುವಾರ ಸಂಜೆ ನಡೆದಿದೆ.

ಗ್ರಾಮದ ಶಾಲೆಯ ಪ್ರಯೋಗಾಲಯದ ಸಿಬ್ಬಂದಿ ಚಿರಂಜೀವಿ (28) ಆತ್ಮಹತ್ಯೆಗೆ ಯತ್ನಿಸಿದವರು. ಇವರು ಶಾಲೆ ಪ್ರಾಂಶುಪಾಲ ವಿ.ಪ್ರಸಾದ್ ಸೇರಿದಂತೆ ಶಿಕ್ಷಕರಿಬ್ಬರು, ಸಿಬ್ಬಂದಿ ನೀಡುತ್ತಿದ್ದ ಕಿರುಕುಳದಿಂದ ಬೇಸತ್ತು ಹೈಡ್ರೋಕ್ಲೋರಿಕ್ ಆಸಿಡ್ ಕುಡಿದಿದ್ದಾರೆ ಎಂದು ಆರೋಪಿಸಲಾಗಿದೆ. ಈ ಸಂಬಂಧ ನಗರದ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಾಂಶುಪಾಲ ವಿ. ಪ್ರಸಾದ್, ಶಿಕ್ಷಕರಾದ ಕೋರಿಯನ್, ತುಳಸಿರಾಮನ್, ಸಿಬ್ಬಂದಿ ವಸಂತಿ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಠಾಣೆ ಇನ್‌ಸ್ಪೆಕ್ಟರ್ ಶ್ರೀಕಾಂತ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಸ್ಥಿತಿ ಗಂಭೀರ: ಗುರುವಾರ ಸಂಜೆ ಚಿರಂಜೀವಿಯನ್ನು ಸಿಮ್ಸ್ ಬೋಧನಾ ಆಸ್ಪತ್ರೆಗೆ ಕರೆ ತರಲಾಗಿತ್ತು. ಅಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಸ್ಪತ್ರೆಗೆ ಬರುವಾಗಲೇ ಅವರ ಸ್ಥಿತಿ ಗಂಭೀರವಾಗಿತ್ತು. ಅವರ ಇಬ್ಬರು ಸಹೋದರರು ಬಂದು ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಕರೆದುಕೊಂಡು ಹೋಗಿದ್ದಾರೆ ಎಂದು ಜಿಲ್ಲಾ ಸರ್ಜನ್ ಎಚ್.ಎಂ.ಕೃಷ್ಣಪ್ರಸಾದ್ ತಿಳಿಸಿದರು.

ಪ್ರವಾಸಕ್ಕೆ ಬಂದು ನಡುಗಡ್ಡೆಯಲ್ಲಿ ಸಿಲುಕಿದ ಕುಟುಂಬ



ಚಾಮರಾಜನಗರ, ಆ.4– ಪ್ರವಾಸಕ್ಕೆಂದು ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಶಿವನ ಸಮುದ್ರಕ್ಕೆ ಬಂದಿದ್ದ ಕುಟುಂಬವೊಂದು ಕಾವೇರಿ ನದಿಯ ನಡುಗಡ್ಡೆಗೆ ಸಿಲುಕಿ ಪರದಾಡಿದ ಘಟನೆ ನಡೆದಿದ್ದು, ಸ್ಥಳೀಯರು ಹಾಗೂ ತೆಪ್ಪ ಓಡಿಸುವವರ ಸಹಾಯದಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಬೆಂಗಳೂರು ಮೂಲದ ಕುಟುಂಬವೊಂದು ಶಿವನಸಮುದ್ರಕ್ಕೆ ಪ್ರವಾಸಕ್ಕೆ ಬಂದಿದ್ದು, ಮೋಜು ಮಾಡಲು ಕಾವೇರಿ ನದಿಯ ನಡುಗಡ್ಡೆಗೆ ತೆರಳಿತ್ತು. ಈ ವೇಳೆ ನದಿಯಲ್ಲಿ ಏಕಾಏಕಿ ನೀರಿನ ಮಟ್ಟ ಹೆಚ್ಚಾಗಿದ್ದು, ವಾಪಸ್ ಬರಲಾಗದೇ ಕುಟುಂಬಸ್ಥರು ಕೂಗಿಕೊಳ್ಳುತ್ತಿದ್ದರು. ಇದನ್ನು ಗಮನಿಸಿದ ಸ್ಥಳೀಯರು ಹಗ್ಗದ ಸಹಾಯದಿಂದ 4 ವರ್ಷದ ಬಾಲಕಿ, 8 ವರ್ಷದ ಬಾಲಕ, ಮೂವರು ಮಹಿಳೆಯರು ಹಾಗೂ ಓರ್ವ ವ್ಯಕ್ತಿಯನ್ನು ರಕ್ಷಿಸಿ ದಡಕ್ಕೆ ಸೇರಿಸಿದ್ದಾರೆ.

ಈ ಹಿಂದೆ ಹಲವು ಇದೇ ರೀತಿ ಹುಚ್ಚಾಟ ಮೆರೆದು ಪ್ರಾಣ ಕಳೆದುಕೊಂಡಿದ್ದರು. ಒಟ್ಟಿನಲ್ಲಿ ಸ್ಥಳೀಯರ ಸಮಯಪ್ರಜ್ಞೆ ಹಾಗೂ ಮಾನವೀಯ ನೆರವಿನಿಂದ ಇಡೀ ಕುಟುಂಬ ಜಲಕಂಟಕದಿಂದ ಪಾರಾಗಿದೆ.

ಬೈಕ್‌ಗೆ ಕಾರು ಡಿಕ್ಕಿ: ಇಬ್ಬರಿಗೆ ತೀವ್ರ ಗಾಯ



ಬೇಗೂರು, ಆ.4– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ತೀವ್ರ ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ತೊಂಡವಾಡಿ ಗೇಟ್ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ.

ಚಿಕ್ಕಾಟಿ ಗ್ರಾಮದ ಶಿವರುದ್ರ(42), ಹೊಣಕನಪುರ ಗ್ರಾಮದ ರವಿಚಂದ್ರ (38) ತೀವ್ರ ಗಾಯಗೊಂಡವರು. ಇವರಿಬ್ಬರು ಬೈಕ್‌ನಲ್ಲಿ ಚಿಕ್ಕಾಟಿ ಗ್ರಾಮದಿಂದ ಬೇಗೂರು ಕಡೆಗೆ ಬರುತ್ತಿದ್ದ ವೇಳೆ ಗುಂಡ್ಲುಪೇಟೆ ಕಡೆಯಿಂದ ಬಂದ ಕಾರು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಇವರಿಬ್ಬರಿಗೆ ಬೇಗೂರು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೇಗೂರು ಠಾಣೆ ಎಸ್‌ಐ ಚರಣ್‌ಗೌಡ ಹಾಗೂ ಸಿಬ್ಬಂದಿ ಬೈಕ್ ಹಾಗೂ ಕಾರನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಿದರು. ಈ ಸಂಬಂಧ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂಗಡಿ ಬಾಗಿಲು ಮುರಿದು ಬಾಳೆ ತಿಂದ ಗಜರಾಜ


ಚಾಮರಾಜನಗರ, ಆ.4– ಚಾಮರಾಜನಗರದ ಪುಣಜನೂರು ಮತ್ತು ತಮಿಳುನಾಡಿನ ಆಸನೂರ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳನ್ನು ಅಡ್ಡಗಟ್ಟುತ್ತಿದ್ದ ಕಾಡಾನೆಯೊಂದು ದಿನಸಿ ಅಂಗಡಿ ಬಾಗಿಲು ಮುರಿದು ಬಾಳೆ, ಟೊಮೆಟೊ ತಿಂದಿರುವ ಘಟನೆ ನಡೆದಿದೆ.

ಆಸನೂರಿನ ವೆಂಕಟೇಶ್ ಎಂಬುವರ ದಿನಸಿ ಅಂಗಡಿ ಶೆಟರ್ ಮುರಿದ ಆನೆ, ಬಾಳೆಗೊನೆ, ಟೊಮೆಟೊ ಸೇರಿದಂತೆ ಇತರ ತರಕಾರಿ ತಿಂದಿದೆ. ಈ ವೇಳೆ ಕಾಡಾನೆ ದಾಳಿ ಮನಗಂಡ ಸ್ಥಳೀಯರು ಓಡಿಸಿದ್ದಾರೆ. ಸಿಸಿಟಿವಿಯಲ್ಲಿ ಆನೆ ದಾಂಧಲೆ ದೃಶ್ಯ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್ ಆಗಿದೆ. ಜು.30ರಂದು ಕಬ್ಬಿಗಾಗಿ ಬಸ್ ಅಡ್ಡ ಹಾಕಿದ್ದ ಕಾಡಾನೆ ಪ್ರಯಾಣಿಕರನ್ನು ಪೇಚಿಗೆ ಸಿಲುಕಿಸಿದ ಘಟನೆ ಆಸನೂರು ಸಮೀಪ ನಡೆದಿತ್ತು. ಸತ್ಯಮಂಗಲದಿಂದ ಮೈಸೂರಿಗೆ ತೆರಳುತ್ತಿದ್ದ ಬಸ್ ತಡೆದ ಕಾಡಾನೆ ಸೊಂಡಿಲಿನಿಂದ ತಡಕಾಡಿತ್ತು. ಕೊನೆಗೆ ಇದು ಕಬ್ಬು ತುಂಬಿದ ಲಾರಿಯಲ್ಲ ಎಂದು ತಿಳಿದು ಬಸ್ ಬಿಟ್ಟು ತೆರಳಿತ್ತು.



ವಿಚಾರಣಾಧೀನ ಕೈದಿ ಪರಾರಿ

ಚಾಮರಾಜನಗರ, ಆ.4– ಹಲವು ಕಳವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ವಿಚಾರಣಾಧೀನ ಕೈದಿ ಪೊಲೀಸರ ಕಣ್ತಪ್ಪಿಸಿ ಪರಾರಿಯಾಗಿರುವ ಘಟನೆ ತಮಿಳುನಾಡಿನ ಆಸನೂರು ಬಳಿ ಶುಕ್ರವಾರ ಬೆಳಗ್ಗೆ ನಡೆದಿದೆ.



ತಾಲೂಕಿನ ಮೇಗಲಹುಂಡಿ ಗ್ರಾಮದ ಸುರೇಶ್ (28) ಪರಾರಿಯಾಗಿರುವ ಆರೋಪಿ. ಈತ ದೇವಾಲಯ ಹುಂಡಿ ಕಳವು, ದರೋಡೆ ಸೇರಿದಂತೆ ಚಾಮರಾಜನಗರ ಗ್ರಾಮಾಂತರ ಠಾಣೆ, ಪೂರ್ವ ಠಾಣೆ ವ್ಯಾಪ್ತಿಯಲ್ಲಿ ಈತನ ವಿರುದ್ಧ ಹಲವು ಪ್ರಕರಣಗಳು ದಾಖಲಾಗಿದ್ದವು. ಅದೇ ರೀತಿ, ತಮಿಳುನಾಡಿನ ಈರೋಡ್ ವ್ಯಾಪ್ತಿಯಲ್ಲೂ ಈತನ ವಿರುದ್ಧ ಕಳವು ಪ್ರಕರಣಗಳು ದಾಖಲಾಗಿತ್ತು.

ಕೆಲ ದಿನಗಳ ಹಿಂದೆ ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸರು ಸುರೇಶ್‌ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ತಮಿಳುನಾಡು ಸತ್ಯಮಂಗಲಂನ ನ್ಯಾಯಾಲಯಕ್ಕೆ ಇಂದು ವಿಚಾರಣೆಗೆ ಕರೆದೊಯ್ಯುವಾಗ ಆಸನೂರಿನ ಹೋಟೆಲ್ ಬಳಿ ಪೊಲೀಸರ ಕಣ್ತಪ್ಪಿಸಿ ಸುರೇಶ್ ಪರಾರಿಯಾಗಿದ್ದಾನೆ. ಈ ಸಂಬಂಧ ಚಾಮರಾಜನಗರ ಪೊಲೀಸರು ಆಸನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಆರೋಪಿ ಪತ್ತೆಗೆ ಜಂಟಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಚಾಮರಾಜನಗರ ಎಸ್‌ಪಿ ಪದ್ಮನಿ ಸಾಹು ಮಾತನಾಡಿ, ಚಾಮರಾಜನಗರ ಗ್ರಾಮಾಂತರ ಠಾಣೆಯಲ್ಲಿ ಕಳವು ಪ್ರಕರಣ ಸಂಬಂಧ ಸುರೇಶ್ ವಿರುದ್ಧ ಕೇಸ್ ದಾಖಲಾಗಿತ್ತು. ಆರೋಪಿ ಚಾಮರಾಜನಗರದಲ್ಲಿ ಬಂಧನದಲ್ಲಿದ್ದ. ಈರೋಡ್‌ನಲ್ಲಿಯೂ ಈತನ ಮೇಲೆ ಕಳವು ಪ್ರಕರಣ ದಾಖಲಾಗಿತ್ತು. ಹೀಗಾಗಿ ತಮಿಳುನಾಡು ಸತ್ಯಮಂಗಲಂ ನ್ಯಾಯಾಲಯಕ್ಕೆ ಹಾಜರುಪಡಿಸಲು ಕರೆದುಕೊಂಡು ಹೋಗುವಾಗ ವಿಚಾರಣಾಧೀನ ಕೈದಿ ಪರಾರಿಯಾಗಿದ್ದಾನೆ ಎಂದು ತಿಳಿಸಿದರು.

ಈರೋಡ್ ಎಸ್‌ಪಿ ಅವರಿಗೂ ಮಾಹಿತಿ ನೀಡಿದ್ದೇವೆ. ವಿಚಾರಣಾಧೀನ ಕೈದಿ ಹುಡುಕಾಟಕ್ಕೆ ಜಂಟಿ ಕಾರ್ಯಾಚರಣೆ ನಡೆಸುತ್ತಿದ್ದೇವೆ. ಚಾಮರಾಜನಗರ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ಈತನ ವಿರುದ್ಧ 2 ಸರಗಳ್ಳತನ ಪ್ರಕರಣ ದಾಖಲಾಗಿತ್ತು. ಚಾಮರಾಜನಗರ ಮತ್ತು ಮೈಸೂರು ಸೇರಿ ಈತನ ಮೇಲೆ 7 ಪ್ರಕರಣಗಳಿವೆ. ಪರಾರಿ ಸಂಬಂಧ ಹಾಸನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ತಿಳಿಸಿದರು.

ಪ್ಯಾಸೆಂಜರ್ ಆಟೋ ಹಳ್ಳಕ್ಕೆ ಉರುಳಿ 7 ಮಂದಿಗೆ ಗಾಯ



ಬೇಗೂರು, ಆ.4– ಚಾಲಕನ ನಿಯಂತ್ರಣ ಕಳೆದುಕೊಂಡು ಪ್ಯಾಸೆಂಜರ್ ಆಟೋ ರಸ್ತೆ ಬದಿಯಲ್ಲಿದ್ದ ಸಂಚಾರ ನಿಯಮದ ಎಚ್ಚರಿಕೆ ನಾಮಫಲಕಕ್ಕೆ ಡಿಕ್ಕಿ ಹೊಡೆದು ಪಕ್ಕದಲ್ಲಿದ್ದ ಹಳ್ಳಕ್ಕೆ ಉರುಳಿದ ಪರಿಣಾಮ ಆಟೋದಲ್ಲಿದ್ದ 7 ಮಂದಿ ಗಾಯಗೊಂಡಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಬಿಎಂಪಿ ಪೆಟ್ರೋಲ್ ಬಂಕ್ ಬಳಿ ನಡೆದಿದೆ.

ಗ್ರಾಮದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ಘಟನೆ ನಡೆದಿದ್ದು, ಆಟೋ ಚಾಲಕ ಮಹೇಶ್, ಪ್ರಯಾಣಿಕರಾದ ಮೈಸೂರಿನ ಜನತಾ ನಗರದ ನಿವಾಸಿಗಳಾದ ರತ್ನಮ್ಮ, ಸಾಕಮ್ಮ, ಸೋಮಹಳ್ಳಿ ಶಿವಮ್ಮ, ಮೂಡ್ನಾಕೂಡು ನಿಂಗರಾಜಮ್ಮ, ರಾಘವಾಪುರ ನಾಗಮ್ಮ ಸೇರಿದಂತೆ 7 ಮಂದಿ ಗಾಯಗೊಂಡವರು.

ವಿವರ: ರಾಘವಾಪುರದಿಂದ ಬೇಗೂರು ಕಡೆಗೆ ಬರುತ್ತಿದ್ದ ಪ್ಯಾಸೆಂಜರ್ ಆಟೋ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಎಚ್ಚರಿಕಾ ಫಲಕಕ್ಕೆ ಡಿಕ್ಕಿ ಹೊಡೆದಿದೆ. ಬಳಿಕ ಆಟೋ ರಸ್ತೆ ಪಕ್ಕದ ಹಳ್ಳಕ್ಕೆ ಉರುಳಿ ಬಿದ್ದ ಪರಿಣಾಮ ಚಾಲಕ ಸೇರಿ 7 ಮಂದಿ ಗಾಯಗೊಂಡಿದ್ದಾರೆ. ನಾಮಫಲಕಕ್ಕೆ ಡಿಕ್ಕಿ ಹೊಡೆದ ರಭಸಕ್ಕೆ ಆಟೋ ಮುಂಭಾಗ ನಜ್ಜು ಗುಜ್ಜಾಗಿದೆ ಎನ್ನಲಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಬೇಗೂರು ಪೊಲೀಸ್ ಠಾಣೆ ಎಸ್‌ಐ ಚರಣ್‌ಗೌಡ ಭೇಟಿ ನೀಡಿ, ಸ್ಥಳೀಯರ ಸಹಾಯದಿಂದ ಗಾಯಾಳುಗಳನ್ನು ಬೇಗೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ರವಾನಿಸಿ ಪ್ರಥಮ ಚಿಕಿತ್ಸೆ ಕೊಡಿಸಿ, ತೀವ್ರ ಗಾಯಗೊಂಡ ಕೆಲವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಕರಣ ಸಂಬಂಧ ಆಟೋವನ್ನು ವಶಕ್ಕೆ ಪಡೆಯಲಾಗಿದೆ. ಈ ಸಂಬಂಧ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾರದ ಆಂಬುಲೆನ್ಸ್: ಘಟನೆ ನಡೆದ ಕೂಡಲೇ ಸ್ಥಳೀಯರು 108 ತುರ್ತು ಸಹಾಯವಾಣಿಗೆ ಕರೆ ಮಾಡಿದ್ದಾರೆ. ಆದರೂ ಘಟನೆ ನಡೆದು ಒಂದು ಗಂಟೆಯಾದರೂ ಸ್ಥಳಕ್ಕೆ ಆಂಬುಲೆನ್ಸ್ ಬರಲಿಲ್ಲ. ಈ ವೇಳೆ ಖಾಸಗಿ ವಾಹನದಲ್ಲಿ ಗಾಯಾಳುಗಳನ್ನು ಕರೆದುಕೊಂಡು ಹೋಗಲಾಯಿತು. ರಾಷ್ಟ್ರೀಯ ಹೆದ್ದಾರಿ 766ರಲ್ಲಿ ಆಗಿಂದಾಗ್ಗೆ ಅಪಘಾತಗಳು ಸಂಭವಿಸುತ್ತಿರುವುದರಿಂದ ತುರ್ತು ಚಿಕಿತ್ಸಾ ವಾಹನ ಬೇಗೂರಿನ ಸಮುದಾಯ ಆಸ್ಪತ್ರೆಗೆ ಅಗತ್ಯವಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇತ್ತ ಗಮನಹರಿಸಬೇಕು. ಬೇಗೂರು ಆರೋಗ್ಯ ಕೇಂದ್ರಕ್ಕೆ ಆಂಬುಲೆನ್ಸ್ ನಿಯೋಜಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಬ್ಯೂಟಿಷಿಯನ್‌ಗಳು ಸದಸ್ಯತ್ವ ಪಡೆಯಲು ಮನವಿ



ಮೈಸೂರು, ಆ.4(ಜಿಎ)–ಮೈಸೂರಿನ ಆಲ್ ಇಂಡಿಯಾ ಹೇರ್ ಅಂಡ್ ಬ್ಯೂಟಿ ಅಸೋಸಿಯೇಷನ್‌ನಲ್ಲಿ ಬ್ಯೂಟಿಷಿಯನ್‌ಗಳು ಸದಸ್ಯತ್ವ ಪಡೆದುಕೊಳ್ಳುವಂತೆ ಅಸೋಸಿಯೇಷನ್‌ನ ರಾಷ್ಟ್ರೀಯ ಅಧ್ಯಕ್ಷೆ ಡಾ.ಸಂಗೀತಾ ಚೌಹಾಣ್ ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದೆಲ್ಲೆಡೆ ಪ್ರವಾಸ ಕೈಗೊಂಡಿದ್ದು, ಬ್ಯೂಟಿಷಿಯನ್‌ಗಳಿಗೆ ಹೇರ್, ಸ್ಪಾ, ಕಲರ್‌ಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡಲು ಮೈಸೂರಿನ ಗುರುವಾರ (ಆ.3) ವಿಶೇಷ ಸೆಮಿನಾರ್ ನಡೆಸಿದ್ದು, ಎಲ್ಲರೂ ಆಸಕ್ತಿಯಿಂದ ಭಾಗವಹಿಸಿದ್ದರು. ಆದರೆ, ನಮ್ಮ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಮತ್ತು ಉತ್ಪನಗಳ ಬಳಕೆ ಬಗ್ಗೆ ಮತ್ತಷ್ಟು ತಿಳಿದುಕೊಳ್ಳಬೇಕಿದೆ ಎಂದರು.

ಬ್ಯೂಟಿಷಿಯನ್‌ಗಳ ಸಮಸ್ಯೆಗಳ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಮಾತನಾಡಲು ದೇಶದೆಲ್ಲೆಡೆ ಪ್ರವಾಸ ಮಾಡುತ್ತಿದ್ದೇನೆ. ಆದರೆ, ಎಲ್ಲೆಡೆ ಸದಸ್ಯರ ಸಂಖ್ಯೆ ಕಡಿಮೆ ಇರುವುದರಿಂದ ಇದು ಕಷ್ಟಕರವಾಗಿದೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರಾಗಿ ಇದರಿಂದ ಹೊಸ ಪ್ರತಿಭೆಗಳು ಕ್ಷೇತ್ರಕ್ಕೆ ಬರಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಹೇರ್ ಅಂಡ್ ಬ್ಯೂಟಿ ಅಸೋಸಿಯೇಷನ್ ಅಧ್ಯಕ್ಷೆ ಉಮಾ ಜಾದವ್, ಕಾರ್ಯದರ್ಶಿ ಜ್ಯೋತಿ, ನಂದಿನಿ ಮತ್ತಿತರರು ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಬಾಡಿಗೆಗೆ ಬೇಕಾಗಿದೆ
2BHK ಕುವೆಂಪುನಗರ, ರಾಮಕೃಷ್ಣನಗರ ವಿವೇಕಾನಂದನಗರ ಇಲ್ಲಿ ಸಸ್ಯಹಾರಿಗಳಿಗೆ ಬಾಡಿಗೆಗೆ ಮನೆ ಬೇಕಾಗಿದೆ. (ಸಸ್ಯಹಾರಿ ಮಾಲೀಕರು ಸಂಪರ್ಕಿಸಿ)
9686576399
8861988159

TVS ಪ್ಯಾಸೆಂಜರ್ ಆಟೋ ಬೇಕಾಗಿದೆ
1. ಸಿಂಗಲ್ ಓನರ್ Ownership-01
2) ಲೋನ್ ಇರಬಾರದು
3) No Broker
4) Model 2017-18-19
5) KA09-TVS ಆಟೋ ಮಾತ್ರ
8762916155

SITES FOR SALE
40X60, 30X40, 20X30
Kavery layout, R.R.Nagara, SBM Layout, Judcial Layout and Bogadi Road
9740088990

20.09.2023 ಯಮುನೋತ್ರಿ, ಗಂಗೋತ್ರಿ ಕೇದಾರನಾಥ್, ಬದರಿನಾಥ್, ಹರಿದ್ವಾರ. 22.11.2023 ವಿಜಯವಾಡ ಭದ್ರಾಚಲಂ, ವಾಸವಿ ಪೆನುಗೊಂಡ ಕಲ್ಕತ್ತ ಗಂಗಾ ಸಾಗರ್, ಪೂರಿಜಗನ್ನಾಥ್, ಕೋನಾರ್ಕ್, ಭುವನೇಶ್ವರ್, ಸಂಪರ್ಕಿಸಿ: ಐಶ್ವನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂ.70
9342287551, 8050629305

ಬೇಕಾಗಿದ್ದಾರೆ
ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು 18 ವರ್ಷ ಮೇಲ್ಪಟ್ಟ ಪುರುಷರು ಸಂಬಳ: 15,500 (ESI, PF ಒಳಗೊಂಡು) ಊಟದ ವ್ಯವಸ್ಥೆ ಇರುತ್ತದೆ.
9739688497
9008503554

ಸುವರ್ಣ ಯಾತ್ರ
ಶಿರಡಿ ಪ್ರವಾಸ 3 ಜ್ಯೋತಿರ್ಲಿಂಗ ಸೇರಿ 3 ದಿನಗಳು 18–08–2023,
ಪುರಿ ಭುವನೇಶ್ವರ ಶಕ್ತಿಪೀಠ 4 ದಿನಗಳು 18/08/2023
ಕಾಶಿ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 7 ದಿನಗಳು 30–08–2023
ನೇಪಾಳ ಪ್ರವಾಸ 9 ದಿನಗಳು 08–09–2023
9008381022
9019462508

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
4–9–23: ನೇಪಾಳ್ ಮುಕ್ತಿನಾಥ್, ಪಶುಪತಿನಾಥ್.
29–8–2023: ಕಾಶಿ, ಗಯಾ, ಅಯೋಧ್ಯೆ, ಪ್ರಯಾಗ್‌ರಾಜ್.
29–8–2023: ಶಿರಡಿ, 3 ಜ್ಯೋತಿರ್ಲಿಂಗ ದರ್ಶನ.
17–8–2023: ಪುರಿ ಜಗನ್ನಾಥ್, ಕೋನಾರ್ಕ್, ಚಂದ್ರಭಾಗ್ ಬೀಚ್, ಭುವನೇಶ್ವರ್.
17–8–2023: ರಾಮೇಶ್ವರಂ, ಕನ್ಯಾಕುಮಾರಿ, ಮಧುರೈ.
9591017782, 9964527782

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಕೆಲಸಕ್ಕೆ ಬೇಕಾಗಿದ್ದಾರೆ
ಟಿನರಸೀಪುರದ ಐದು ಮಹಡಿಯ ಫ್ಯಾಮಿಲಿ ಶೋರೂಮ್ ಶ್ರೀ ಮಹದೇಶ್ವರ ಸಿಲ್ಕ್ ಅಂಡ್ ರೆಡಿಮೇಡ್‌ಗೆ ಸೇಲ್ಸ್‌ಮೆನ್ ಸೇಲ್ಸ್‌ಗರ್ಲ್ಸ್ ಹಾಗೂ ಎಕ್ಸೆಲ್ TALLY ಅಲ್ಲಿ ಅನುಭವ ಇರುವ ಅಕೌಂಟೆಂಟ್ ಹಾಗೂ ಬಿಲ್ಲಿಂಗ್ ಹುಡುಗರು ಹುಡುಗಿಯರು ಬೇಕಾಗಿದ್ದಾರೆ. ಸಂದರ್ಶನದ ಸ್ಥಳ : ಶ್ರೀ ಮಹದೇಶ್ವರ ಕಲ್ಯಾಣ ಮಂಟಪ ಟಿನರಸೀಪುರ, ಪೆಟ್ರೋಲ್ ಬಂಕ್ ಎದುರು.
7676685839, 9663015447

ಬೇಕಾಗಿದ್ದಾರೆ
Residential and Regular School Science and Computer Teachers Driver and Cable Helper ಬೇಕಾಗಿದ್ದಾರೆ
9449320140

ಗ್ಯಾಸ್ ಲೈನಿಂಗ್
ಗ್ಯಾಸ್ ಸ್ಟೌವ್, ಗ್ಯಾಸ್ ಗೀಜರ್, ಹಬ್ ಸ್ಟೌವ್, ಚಿಮಿನಿ } 30% Off
22 ವರ್ಷದ ಅನುಭವ
ಮನೆ/ಹೋಟೆಲ್‌ಗಳಿಗೆ ಗ್ಯಾಸ್ ಪೈಪ್ ಲೈನಿಂಗ್ ಮಾಡುತ್ತೇವೆ.
ಸೇಲ್ & ಸರ್ವಿಸ್ ಲಭ್ಯ
8088888115

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

DTCP SITES FOR SALE
DTCP Sites
Rs. 699 per sq.ft., Near Jayapura, H.D. Kote Road, Mysore.
9590491194, 9606783264

ಬೇಕಾಗಿದ್ದಾರೆ
ರಾಯಲ್ ವಾರಿಯರ್ ಬೇಕರಿಗೆ ಅನುಭವವುಳ್ಳ ಸೇಲ್ ಮ್ಯಾನ್‌ಗಳು ಮತ್ತು ಕ್ಯಾಷಿಯರ್‌ಗಳು, ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ ಉತ್ತಮ ಸಂಬಳದೊಂದಿಗೆ ಊಟ ವಸತಿ ಉಚಿತವಾಗಿ ದೊರಕುತ್ತದೆ. ಶ್ರೀ ರಾಯಲ್ ವಾರಿಯರ್ ಬೇಕರಿ ಅಂಡ್ ಫುಡ್ ನೃಪತುಂಗ ರಸ್ತೆ, 2ನೇ ಹಂತ, ಎಂ.ಬ್ಲಾಕ್, ಬಸ್ ಡಿಪೋ ಹತ್ತಿರ.
8310331609
9019876412

3 ಬೆಡ್ರೂಮ್ ಹೊಸ ಮನೆ ಮಾರಾಟಕ್ಕಿದೆ
20x30 ದಟ್ಟಗಳ್ಳಿ, ಮೈಸೂರು, ತ್ರಿವೇಣಿ ಸೂಪರ್ ಮಾರ್ಕೆಟ್ ಹತ್ತಿರ,
Price - 79 Lakhs
ಮಾಲೀಕರು ಸಂಪರ್ಕಿಸಿ:
6361295132

Commercial Space for Rent
In prime area, 1600 sq.feet at Kuvempunagar, Nrupathunga Road, ideal for all kinds of showroom, medical store, clinic, provision store, hotel etc.,
9448047419, 8861377771

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ವರದ ವಿಳಂಬವಾದಲ್ಲಿ ಪರಿಹಾರ ಶತಃಸಿದ್ಧ
ಡಾ. ಗುರೂಜಿ
9448229184
7899625268
Computer ಜ್ಞಾನವುಳ್ಳ Lady Receptionist ಬೇಕಾಗಿದ್ದಾರೆ. ಆಕರ್ಷಕ ಸಂಬಳ

FOR SALE
(40x60) Saraswathipuram (30x40) 2 Sites @ Orange Estate, Mys-B'Lore Highway 3KM Columbia Hospital (26 Lacks Each)
9538839926

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ ವಿದ್ಯಾರ್ಹತೆ : ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ 13,448 + ESI+PF. ಮತ್ತು ಉಚಿತ ಊಟದ ವ್ಯವಸ್ಥೆ ಅಗತ್ಯ ದಾಖಲಾತಿಗಳು : ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502, 9108100117

SITE FOR SALE
30X40 & 20X30 Site at Ramakrishnanagar 40x60 Site at Kuvempunagar 30x40 & 40x60 house Sale at Ramakrishnanagar
9663136318

ಸೈಟ್ಸ್ @ ಮೈಸೂರು
ಟಿ.ನರಸೀಪುರ ರಿಂಗ್ ರೋಡ್‌ನಿಂದ ಸುಮಾರು 1.5 KMS
NORTH FACING SITES
MUDA APPROVED
ಸುತ್ತಮುತ್ತ ಮೂಡಾ ಲೇಔಟ್ಗಳಿವೆ
GSS 89512-76688

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಉತ್ತಮವಾದ ಸಂಬಳ ವಯೋಮಿತಿ 35 ರಿಂದ 48 ರವರೆಗೆ ಮೇಟಗಳ್ಳಿ ವಿ.ವಿ.ಪುರಂ ಹಾಗೂ ಮೈಸೂರಿನ ಸುತ್ತ ಮುತ್ತ ಇರುವ ಪ್ರದೇಶಗಳಿಗೆ (ESI & PF) ಹಾಗೂ ವಾರದ ರಜೆ ಇರುತದೆ.
9538886326, 9538886328
0821-4852002

GSS Property Mall
VERIFIED PROPERTIES IN MYSORE
BUYING & SELLING PROPERTIES IN MYSURU
VISIT OUR WEBSITE: WWW.GSSPROPERTYMALL.COM
96868-25025

ಸೈಟು ಬೇಕಾಗಿದೆ
ಲಾಲ್‌ಬಹದ್ದೂರ್ ಶಾಸ್ತ್ರಿನಗರ, ವಸಂತನಗರ, ಶಾಂತವೇರಿ ಗೋಪಾಲಗೌಡ ನಗರ, ಸಪ್ತ ಮಾತೃಕ ಲೇಔಟ್, ಪೊಲೀಸ್ ಲೇಔಟ್ ಜೆ.ಎಸ್.ಎಸ್.ಲೇಔಟ್
9844436672

30x40 E/F ಸೈಟು @ Rs.15 ಲಕ್ಷ
DTCP APPROVED SITE
ತಕ್ಷಣ ನೋಂದಣಿ/ಬ್ಯಾಂಕ್ ಲೋನ್ ಲಭ್ಯ ಲಲಿತಾದ್ರಿಪುರ ರಿಂಗ್ ರಸ್ತೆ ಯಿಂದ 6 KMS ಮೈಸೂರು ಸಿಟಿ ಇಂದ 15 KMS
9538583377

GSS 25 YEARS
THE MOST TRUSTED REAL ESTATE BRAND IN MYSURU
100 SITES REQUIRED
MUDA OR DTCP • FULLY DEVELOPED • UNDER DEVELOPED • PLAN SANCTIONED
96868-25025

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
9880813586, 6360884930

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಟಿಪ 15,200/- to 86,000/-
9740733021, 9535028750

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

40x60 N/F ಸೈಟು @ Rs.25 ಲಕ್ಷ
DTCP APPROVED SITE
Brahmins Layout 'E' Block
ಸಪ್ತಋಷಿ ನಗರ, ಹೆಚ್.ಡಿ.ಕೋಟೆ ರಸ್ತೆ ದೇವಗಳ್ಳಿ ಗ್ರಾಮ, ಮೈಸೂರು 6 KMS ರಿಂಗ್ ರೋಡ್‌ನಿಂದ
9538583377

ಬೇಕಾಗಿದ್ದಾರೆ
ಡ್ರೈವರ್ 10 ಜನ (ಬೊಲೆರೋ) ಸಂಬಳ: 15000+ಭತ್ಯೆ ಮಾರ್ಕೆಟಿಂಗ್ ಮ್ಯಾನೇಜರ್ ಮತ್ತು ಎಕ್ಸಿಕ್ಯೂಟೀವ್ (ಲಾಜಿಸ್ಟಿಕ್ ಅನುಭವ ಹೊಂದಿರಬೇಕು.) ಮೂವ್ ಮೈ ಗೂಡ್ಸ್
ಆಫೀಸ್ 9019029036
7022920072

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು
INDIAN FAMOUS ASTROLOGER
Mob: 9036984793
ಪಂಡಿತ್: ಕೆ.ಎಸ್. ಪಣಿಕ್ಕರ್ (ಕೇರಳ)
ಜ್ಯೋತಿಷ್ಯ ವಿದ್ವಾನ್ ಶ್ರೀ ಶ್ರೀ ಎಸ್ ಕುಮಾರ್, (ಕೊಳ್ಳೇಗಾಲ)
ಇವರು ಕೇರಳದ ಕುಟ್ಟಿಚಾತನ್ ಕೊಳ್ಳೇಗಾಲದ ಕಳ್ಳಚೌಡಿ ಅಘೋರಚರ ಶಕ್ತಿಯಿಂದ, ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರುದೋಷ, ಇನ್ನೂ ಯಾವುದೇ ನಿಮ್ಮ ಗುಪ್ತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ. ಪರಿಹಾರ ತಿಳಿಸುತ್ತಾರೆ.
ಖಾಯಂ ವಿಳಾಸ: ಪಡುವಾರಹಳ್ಳಿ ಸಿಗ್ನಲ್, ಭೂದೇವಿ ಫಾರ್ಮ್ ಎದುರು, ವಿನೋಬ ರಸ್ತೆ ಮೈಸೂರು–570006

Solarizer
DEPENDABLE DURABLE DISTINCTIVE
HYGIENIC HOT WATER EVERY DAY!
Solar Water Heater SALES & SERVICE
Bajaj Finserv Available
SUNZONE SOLAR SYSTEM
VM Double Road, Kuvempunagar, Mysuru
9845175443

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಏಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸುಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
87490 98879

FOR SALE
Buy & Sell site, house, land
1) 20x30, Duplex House Ramakrishnanagara
2) 14x100 In Ramavilas Road Near
3) 30x40 Duplex Ground and first House Srirampura
4) 12x36 G+2 House Kuvempu Nagar
5) 30x40, 16 lakhs H D Kote Road
Prakruthi Properties
9538690359
9035990359

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ ಫ್ರಂಟ್ ಆಫೀಸ್ ಮತ್ತು ಅಕೌಂಟ್ಸ್ ನಿರ್ವಹಣೆಗಾಗಿ ಬಿ.ಕಾಂ. C.P (Dip) ಮಾಡಿರುವ 25 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕಂಪ್ಯೂಟರ್ ಮತ್ತು ಅಕೌಂಟ್ಸ್‌ನಲ್ಲಿ ಅನುಭವವುಳ್ಳವರಿಗೆ ಹೆಚ್ಚಿನ ಆದ್ಯತೆ
8073393505

Sump & Tank Solar & Cleaning Water Level Controller Service
Mob: 8880558064

ಬೇಕಾಗಿದ್ದಾರೆ
ಬೆಂಗಳೂರು ಜೆ.ಪಿ.ನಗರ ಮಾಂಸಹಾರಿ ಹೋಟೆಲಿಗೆ ಕೆಲಸದವರು ಬೇಕಾಗಿದ್ದಾರೆ. ವಸತಿ ಮತ್ತು ಆಕರ್ಷಕ ಸಂಬಳ
9880059793

HOUSE FOR SALE
20X30 Residential House at Srirampura 2nd Stage, Near to Railway Workshop
Clear Titles
Brokers Excuse
Immediate Registration
Genuine Buyers Only
9141915294

NISARGA ENTERPRISES LOAN OFFICE
MOB: 8296400433
9880436288
New Start of Business Loan Industrial Loan, Machinery Loan, Garments Loan, Business Loan, Home Loan, Home Mortgage Loan, Site Mortgage Loan, Personal Loan 12,000/- Salary above

SITE FOR SALE
60x45, West Face, J.C Nagar, Near Chamundi Hill Main Road, Mysore Opp. Lalithamahal Palace
Rs.3750 per Sqft
Slightly Negotiable
9686720907
9448589862

HOTEL FOR LEASE
Located in Wood Area Commercial Road Mysore
9535601201

ಬೇಕಾಗಿದ್ದಾರೆ
ಆಡಳಿತ ವಿಭಾಗದಲ್ಲಿ (Admin Department) ಕೆಲಸ ನಿರ್ವಹಿಸಲು B.Com/BBA/MSW ಅಭ್ಯರ್ಥಿಗಳು ಬೇಕಾಗಿದ್ದಾರೆ. (4 Wheeler Driving License Compulsory) ಮಾಸಿಕ ಗೌರವ ಧನ: 15000/- +ಉಚಿತ ವಸತಿ+ಸಸ್ಯಾಹಾರಿ ಊಟ.
ದಿವ್ಯ ದೀಪ ಚಾರಿಟಬಲ್ ಟ್ರಸ್ಟ್
ಕೆಂಚಲಗೂಡು, ಮಾನಂದವಾಡಿ ರಸ್ತೆ, ಮೈಸೂರು–08
9341369901,
9538499901, 8088586087
Website: www.divyadeepatrust.org

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡ್ದನ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾಹ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳೆಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

Used Laptops & desktops
EMI available
Pranitha Computers
74068 54998
Saraswathipuram, Mysore

ಬರವಣಿಗೆಯ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409
ಮೈಸೂರು ಅಗ್ರಹಾರ.
9449774835
ಚಾಮರಾಜನಗರ

DOCUMENT LOST
I ZAKAULLA, Residing at # 527, 2nd Cross, KHB Colony, Behind P&T Quaters, M.G.Road, Udayagiri, have lost my Original TITLE DEED/SALE DEED of the Site No. 527, KHB COLONY, Mahadevapura, Udayagiri, Finders Please Contact :
9845366197

S.K.CONSTRUCTION
ಕನಸು ನಿಮ್ಮದು ನನಸು ನಮ್ಮದು ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ, Loan ಮಾಡಿಸಿ ಪ್ರಾರಂಭ 25% ನಾವೇ ಹಾಕಿ 3D Plan ಸಹಿತ ಉತ್ತಮ ಗುಣಮಟ್ಟದ ಮನೆ ಮಾಡಿಕೊಡುತ್ತೇವೆ.
9620528490

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:
(II Marriages Also)
9343175000

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೂಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ.
ವಯಸ್ಸು: 18 ರಿಂದ 40 ವರ್ಷ
ವಿದ್ಯಾರ್ಹತೆ: 7 ರಿಂದ PUC & ITI (Fitter)
9480404036

ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6361276795

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸ್ಥಳ: ರಿಂಗ್ ರೋಡ್ ಹತ್ತಿರ, ಶೇಷಾದ್ರಿಪುರಂ ಕಾಲೇಜ್, ರಾಣಿ ಮದ್ರಾಸ್ ರೋಡ್, ಸಂಪರ್ಕಿಸಿ
9964666460
9164305565

ಬೇಕಾಗಿದ್ದಾರೆ
ಮೈಸೂರಿನ ನಜರ್‌ಬಾದ್‌ನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು/ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 12,000/–
8892258814

HOUSE FOR RENT
4BHK Duplex House For Rent Niveditha Nagar, Mysore
9448053926
9449833926

ಕೆಲಸಕ್ಕೆ ಬೇಕಾಗಿದ್ದಾರೆ
ವಿದ್ಯಾರಣ್ಯಪುರಂ, ಕೂರ್ಗಳ್ಳಿ, ಮೇಟಗಳ್ಳಿ, ಹೂಟ್ಟಳ್ಳಿ (ಕಂಪನಿ, ಕೈಗಾರಿಕಾ ಪ್ರದೇಶ) ಬೋಗಾದಿ ಹಾಗೂ ತಾಂಡವಪುರ ರೆಸಾರ್ಟ್‌ಗಳಲ್ಲಿ ಇಲ್ಲಿ ಕೆಲಸ ಮಾಡಲು 10th Any Degree & ITI Diploma Pass & Fail, (Mechin Operatore, Helper) House Keeping, Helper, Stewards Front Office Manager ಮೇಟಗಳ್ಳಿ ಹೂಟ್ಟಳ್ಳಿ ಇಲ್ಲಿ ಸೆಕ್ಯೂರಿಟಿ ಕೆಲಸ ಮಾಡಲು ಪುರುಷರು ಮಾತ್ರ ವಯಸ್ಸು 40 ರಿಂದ 55ರ ವರೆಗೆ) ಹುಡುಗರು ಮತ್ತು ಹುಡುಗಿಯರು ವಯಸ್ಸು 18 ರಿಂದ 35 ವರ್ಷದ ಒಳಗೆ ಮಾತ್ರ ಕೆಲಸ ಮಾಡಲು ಬೇಕಾಗಿದ್ದಾರೆ. ಭೂಮಿ ಎಂಟರ್‌ಪ್ರೈಸಸ್ ಹಿನಕಲ್ ಇಲ್ಲಿ ಕೆಲಸ ಮಾಡಲು ಫೀಲ್ಡ್ ಆಫೀಸರ್ ಪುರುಷರು & ಮಹಿಳೆಯರು ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಹೊಂದಿರಬೇಕು)
9036461347, 9611208553, 9108180329

SITE FOR SALE
Site No.115, Size 40x40 North - West Corner Nisarga Paradise Near Deccan Nursery (Manuganally Checkpost)
9844495942
7204433446

ಮನೆ ಬಾಡಿಗೆಗೆ ಇದೆ
2BHK, 30x40 ಸೂರ್ಯ ಬೇಕರಿ ಸರ್ಕಲ್ ಹತ್ತಿರ, ಹೆಬ್ಬಾಳ್, ಚಾಮುಂಡೇಶ್ವರಿ ದೇವಸ್ಥಾನದ ಮುಂದೆ, ಅಟಾಚ್ ಬಾತ್ ರೂಂ ವುಳ್ಳ ಸೋಲಾರ್ ಇದೆ
9845480493
7204789481

HOUSE FOR RENT
30X40, North Facing 2 BHK, Ground Floor Opp. Royal Oak, Mysore
9980323708
6366803708

ವಧು ಬೇಕಾಗಿದೆ
ಮೈಸೂರು ಜಿಲ್ಲೆ Age 36, Software Engineer ಹುಡುಗನಿಗೆ SC ಆದಿಕರ್ನಾಟಕ – ಬಲಗೈ Caste / Any ವಧು ಬೇಕಾಗಿದೆ.
7406459293

WANTED
Qualification - PUC above
Sales & Delivery
2 Wheeler D.L. Must
7204368222

MUDA SITE FOR SALE
3 KM From Mysore Palace, City Busstand 40x73 East Facing, 40 Feet Road, Gayathripuram, 1st Stage, Mysore
9743231122

ಹೋಂನರ್ಸಿಂಗ್ ಕೆಲಸ
ಮೈಸೂರಿನ ಹೆಸರಾಂತ ಹೆಲ್ತ್‌ಕೇರ್ ಸಂಸ್ಥೆಗೆ ಹೋಂನರ್ಸಿಂಗ್ ಕೆಲಸಕ್ಕೆ ಮಹಿಳೆಯರು, ವಿಧವೆ, ವಿಚ್ಛೇದಿತೆಯರು, ಯುವಕ, ಯುವತಿಯರು ಬೇಕಾಗಿದ್ದಾರೆ. ಊಟ ವಸತಿಯೊಂದಿಗೆ ಆಕರ್ಷಕ ಸಂಬಳ ಇರುತ್ತದೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಅಗ್ರಹಾರ
9035113222

ಮನೆ ಬಾಡಿಗೆಗೆ ಇದೆ
30x40 ಅಳತೆ ಪೂರ್ವಕ್ಕೆ ಬಾಗಿಲು ಗ್ರೌಂಡ್ ಫ್ಲೋರ್ ನೀರು, ವಾಡ್ರೋಬ್, ಸೋಲಾರ್ ವ್ಯವಸ್ಥೆ ಇದೆ. ಸಸ್ಯಹಾರಿಗಳಿಗೆ ಮಾತ್ರ ಸರ್ಕಾರಿ/ಬ್ಯಾಂಕ್ ಉದ್ಯೋಗಸ್ಥರಿಗೆ ಮೊದಲ ಆದ್ಯತೆ ನಂ.40, ಶಿಕ್ಷಕರ ಬಡಾವಣೆ, ಡಾ|| ರಾಧಾಕೃಷ್ಣನಗರ ವಿವೇಕಾನಂದ ಬ್ಲಾಕ್, ಮೈಸೂರು
9035085532
9480711080

ಟ್ರಾಕ್ಟರ್ ಮಾರಾಟಕ್ಕಿದೆ
1) ಸ್ವರಾಜ್ FE 855, 2007 MDL, ಟ್ರಾಲಿ, 6000 ಲೀ, ಎಂ.ಎಸ್. ಟ್ಯಾಂಕ್, ಡಿಸ್ಕ್, 42 ಬ್ಲೇಡ್, ನೇಗಿಲು, ಸೇರಿ ಬೆಲೆ. 4.50 ಲಕ್ಷರೂ.
2) 14000 ಲೀ. ಡಿಸೇಲ್ /ಆಯಿಲ್ ಟ್ಯಾಂಕ್ ಸೇಲ್ 70,000 ರೂ.
9686677099
9448182899

ತಕ್ಷಣ ಬೇಕಾಗಿದ್ದಾರೆ ಹುಡುಗರಿಗೆ ಮಾತ್ರ
ವಿದ್ಯಾರ್ಹತೆ 7th to Any Degree Pass or Fail ವಯಸ್ಸು 40ರ ಒಳಗೆ ಮಾತ್ರ Tally 5 to 6 ವರ್ಷ Experience ಇರುವವರಿಗೆ ಮಾತ್ರ & Field Work ಗೆ Freshers ಬೇಕಾಗಿದ್ದಾರೆ. ವೇತನ 18000/– ರಿಂದ 22000ರವರೆಗೆ
9880151303
8217557212

ತಕ್ಷಣ ಬೇಕಾಗಿದ್ದಾರೆ
ವಿಜಯನಗರ, ಒಂಟಿಕೊಪ್ಪಲ್ ಮತ್ತು ಯಾದವಗಿರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು, ಸಂಬಳ: 16000 +W/o ಊಟ, ತಿಂಡಿ, ಸೌಲಭ್ಯವಿರುತ್ತದೆ.
9620667819
9880727819

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಆನ್‌ಲೈನ್ ಮೂಲಕ ಎಂಎಲ್‌ಸಿ ವಿಶ್ವನಾಥ್ ಪುತ್ರ ಅಮಿತ್ ದೇವರಹಟ್ಟಿ ಖಾತೆಗೆ ಕನ್ನ

● 1.99 ಲಕ್ಷ ರೂ. ಅಕ್ರಮ ವರ್ಗಾವಣೆ ● ನಾನಾ ಆಮಿಷ ತೋರಿ ಇನ್ನು ಮೂರು ಪ್ರಕರಣದಲ್ಲಿ ಲಕ್ಷಾಂತರ ರೂ. ವಂಚನೆ

ಮೈಸೂರು, ಆ.4–ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರೂ ಆದ ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಪುತ್ರ ಅಮಿತ್ ದೇವರಹಟ್ಟಿ(43) ಅವರ ಬ್ಯಾಂಕ್ ಖಾತೆಯಿಂದ 1.99 ಲಕ್ಷ ರೂ.ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳಲಾಗಿದೆ.

ಇವರು ಜು.28ರಂದು ಬೆಳಗ್ಗೆ ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಹೆಚ್‌ಡಿಎಫ್‌ಸಿ ಬ್ಯಾಂಕ್‌ನ ಎಟಿಎಂನಲ್ಲಿ ಹಣ ಡ್ರಾ ಮಾಡಲು ಹೋಗಿದ್ದು, ಹಣ ಬಂದಿರಲಿಲ್ಲ. ಈ ಹಿನ್ನೆಲೆಯಲ್ಲಿ ಗೂಗಲ್‌ನಲ್ಲಿ ಸರ್ಚ್ ಮಾಡಿದಾಗ ದೊರೆತ ಕಸ್ಟಮರ್ ಕೇರ್‌ಗೆ ಕರೆ ಮಾಡಿದ್ದಾರೆ. ಆಗ ಮಾತನಾಡಿದ ವ್ಯಕ್ತಿ ಇವರ ಬ್ಯಾಂಕ್ ಖಾತೆ ವಿವರಗಳನ್ನು ಪಡೆದಿದ್ದು, ಸ್ವಲ್ಪ ಸಮಯದ ನಂತರ ಇವರ ಮೊಬೈಲ್‌ಗೆ ಓಟಿಪಿ ಬಂದಿದೆ. ಅದನ್ನು ಅವರು ಶೇರ್ ಮಾಡದೇ ಇದ್ದರೂ ಕೂಡ ಬ್ಯಾಂಕ್ ಖಾತೆಯಿಂದ 1,99,989 ರೂ. ಅಕ್ರಮವಾಗಿ ವರ್ಗಾವಣೆಯಾಗಿದೆ.

17.52 ಲಕ್ಷ ವಂಚನೆ: ಸುಲಭವಾಗಿ ಹಣ ಗಳಿಸಬಹುದು ಎಂಬ ಆಮಿಷವೊಡ್ಡಿ ವ್ಯಕ್ತಿಯೋರ್ವರಿಗೆ ಆನ್‌ಲೈನ್ ಮೂಲಕ 17.52 ಲಕ್ಷ ವಂಚಿಸಲಾಗಿದೆ.

ಉದಯಗಿರಿ ನಿವಾಸಿ ಸರ್ಫರಾಜ್(42) ಎಂಬುವರ ಮೊಬೈಲ್‌ಗೆ 9387940096 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ಸುಲಭವಾಗಿ ಹಣ ಗಳಿಸುವ ಬಗ್ಗೆ ಮಾಹಿತಿ ನೀಡಿದ್ದು, ಹೆಚ್ಚಿನ ಮಾಹಿತಿಗಾಗಿ ಮೋಹಿತ್ ಹಾಗೂ ಫಾತಿಮಾ ಎಂಬುವರನ್ನು ಸಂಪರ್ಕಿಸುವಂತೆ ತಿಳಿಸಿ ಟೆಲಿಗ್ರಾಂ ಖಾತೆಯ ಲಿಂಕ್ ಕಳುಹಿಸಿದ್ದಾನೆ. ಮೊದಲು ಕೆಲ ಪ್ರಾಜೆಕ್ಟ್‌ಗಳಿಗೆ ಹಣ ನೀಡಿದ್ದು, ನಂತರ ಬೋನಸ್ ನೀಡುವುದಾಗಿ ನಂಬಿಸಿ 17,52,732 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕುವೆಂಪುನಗರದ ಚೆಲ್ಲಾ ನರಸಿಂಹಲು(39) ಎಂಬುವರನ್ನು ಟೆಲಿಗ್ರಾಂ ಆ್ಯಪ್ ಮೂಲಕ ಸಂಪರ್ಕಿಸಿದ ಪುಷ್ಪಾ ನೀತಾ ಹಾಗೂ ಪ್ರಿಯಾಶರ್ಮಾ ಎಂಬುವರು ಪಾರ್ಟ್‌ಟೈಮ್ ಜಾಬ್ ನೀಡುವುದಾಗಿ ತಿಳಿಸಿ ವೆಬ್‌ಸೈಟ್‌ವೊಂದರಲ್ಲಿ ರಿಜಿಸ್ಟರ್ ಆಗುವಂತೆ ಹೇಳಿ ಕೆಲವು ಟಾಸ್ಕ್‌ಗಳನ್ನು ನೀಡಿದ್ದಾರೆ. ಹಂತ ಹಂತವಾಗಿ ಒಟ್ಟು 10,53,068 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ರಾಜೀವ್‌ನಗರದ ರೂಪೇಶ್ ಗೊನ್ಸಾಲ್ವೆ(36) ಎಂಬುವರನ್ನು ವಾಟ್ಸಾಪ್ ಮೂಲಕ ಸಂಪರ್ಕಿಸಿದ ವಂಚಕರು ಆನ್‌ಲೈನ್ ಟಾಸ್ಕ್ ಕಂಪ್ಲೀಟ್ ಮಾಡಿದರೆ ಕಮೀಷನ್ ನೀಡುವುದಾಗಿ ನಂಬಿಸಿ 5.25 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ. ಇವೆಲ್ಲಾ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ನಕಲಿ ರಸೀದಿ ನೀಡಿ ಖಾಸಗಿ ಕಂಪನಿ ಸಿಬ್ಬಂದಿಯಿಂದ ವಂಚನೆ

ಮೈಸೂರು, ಆ.4–ಖಾಸಗಿ ಕಂಪನಿವೊಂದರ ಮಾರ್ಕೆಟಿಂಗ್ ರೆಪ್ರೆಸೆಂಟೇಟೀವ್ ನಕಲಿ ರಸೀದಿಗಳನ್ನು ನೀಡಿ 45 ಲಕ್ಷ ರೂ. ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಮೈಸೂರಿನ ಟೆರಾಕಾನ್ ಪ್ರಾಜೆಕ್ಟ್ಸ್ ಲ್ಯಾಂಡ್ ಡೆವಲಪರ್ಸ್ ಅಂಡ್ ಬಿಲ್ಡರ್ಸ್‌ನ ಮಾರ್ಕೆಟಿಂಗ್ ರೆಪ್ರೆಸೆಂಟೇಟೀವ್ ಎಂ.ಹೆಚ್.ರಘು(35) ಆರೋಪಕ್ಕೆ ಗುರಿಯಾದವರಾಗಿದ್ದು, ಇವರು ಕಂಪನಿಯು ಬೆಳವಾಡಿ ಗ್ರಾಮದಲ್ಲಿ ನಿರ್ಮಿಸುತ್ತಿರುವ ಟೆರಾಕಾನ್ ರೆಸಿಡೆನ್ಸಿಯಲ್ಲಿ ನಿವೇಶನಗಳನ್ನು ನೀಡುವುದಾಗಿ ತಿಳಿಸಿ ನಕಲಿ ಲೆಟರ್‌ಹೆಡ್ ಕ್ರಿಯೇಟ್ ಮಾಡಿಕೊಂಡು ಗ್ರಾಹಕರಿಂದ ಸುಮಾರು 45 ಲಕ್ಷ ರೂ. ಪಡೆದು ನಕಲಿ ರಸೀದಿಗಳನ್ನು ನೀಡಿದ್ದಾರೆ. ಹಾಗೂ ಕಂಪನಿಯ ಪಾಲುದಾರ ಸಂಜಯ್ ಬಾಬು ಹಾಗೂ ಮೈಸೂರು ಉಸ್ತುವಾರಿ ಶಶಾಂಕ್ ಸಹಿಗಳನ್ನು ನಕಲು ಮಾಡಿ ಸಾರ್ವಜನಿಕರಿಗೆ ಸೈಟ್ ನಂಬರ್‌ಗಳನ್ನು ಹಾಕಿ ರಸೀದಿಗಳನ್ನು ನೀಡಿದ್ದಾರೆ ಎಂದು ಸಂಜಯ್ ಬಾಬು ನೀಡಿದ ದೂರನ್ನು ದಾಖಲಿಸಿಕೊಂಡಿರುವ ನಜರ್‌ಬಾದ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಲಾರಿ ಡ್ಯಾಷ್‌ಬೋರ್ಡ್‌ನಲ್ಲಿದ್ದ ಲಕ್ಷ ರೂ. ಕಳವು

ಮೈಸೂರು, ಆ.4–ಲಾರಿಯ ಡ್ಯಾಷ್ ಬೋರ್ಡ್‌ನಲ್ಲಿದ್ದ ಲಕ್ಷ ರೂ. ಕಳವು ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆ ಸುರತ್ಕಲ್‌ನ ಲಾರಿ ಚಾಲಕ ಟಿಪ್ಪು ಹುಸ್ಸೈನ್(42) ಹಣ ಕಳೆದು ಕೊಂಡವರು. ಡೆನ್‌ಲಾಕ್ ಪ್ಲಾಸ್ಟಿಕ್ ಫ್ಯಾಕ್ಟರಿಯ ಲಾರಿ ಚಾಲಕನಾಗಿರುವ ಇವರು, ಆ.2ರಂದು 1 ಗಂಟೆ ಸುಮಾರಿಗೆ ಪ್ಲಾಸ್ಟಿಕ್ ಪದಾರ್ಥ ಗಳನ್ನು ಶ್ರೀರಂಗಪಟ್ಟಣದ ಸುನಿಲ್ ಎಂಬುವರ ರೂಂ ಬಳಿ ಅನ್‌ಲೋಡ್ ಮಾಡಿ ಅವರಿಂದ ಲಕ್ಷ ರೂ. ಪಡೆದು ಅದನ್ನು ಲಾರಿಯ ಡ್ಯಾಷ್ ಬೋರ್ಡ್‌ನಲ್ಲಿಟ್ಟುಕೊಂಡು ಮಂಗಳೂರಿನತ್ತ ಪ್ರಯಾಣ ಬೆಳೆಸಿದ್ದಾರೆ.

ಲಾರಿಯಲ್ಲಿ ಡೀಸೆಲ್ ಕಡಿಮೆ ಇದ್ದು, ಮೈಸೂರಿನಲ್ಲಿ ಪೆಟ್ರೋಲ್ ಬಂಕ್‌ಗಳು ತೆರೆದಿರದ ಕಾರಣ ಆ.3ರಂದು ಮುಂಜಾನೆ 3.30ರಲ್ಲಿ ನಂಜನಗೂಡು ರಸ್ತೆಯ ಲಾರಿ ಟರ್ಮಿನಲ್ ಕಡೆಯಿಂದ ಮಾಲ್ ಆಫ್ ಮೈಸೂರ್ ಕಡೆಗೆ ಹೋಗುವ ಮಾರ್ಗ ಮಧ್ಯೆ ಲಾರಿ ನಿಲ್ಲಿಸಿ ಶೌಚಾಲಯಕ್ಕೆ ಹೋಗಿ ಬರುವಷ್ಟರಲ್ಲಿ ಲಾರಿಯ ಡ್ಯಾಷ್‌ಬೋರ್ಡ್ ನಲ್ಲಿದ್ದ ಹಣವನ್ನು ಕಳವು ಮಾಡಲಾಗಿದೆ. ಈ ಸಂಬಂಧ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಮಹಿಳೆ ನಾಪತ್ತೆ

ಮೈಸೂರು, ಆ.4(ಬಿಎಲ್‌ಯು)– ಮಹಿಳೆ ನಾಪತ್ತೆಯಾಗಿರುವ ಬಗ್ಗೆ ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಂಡ್ಯ ತಾಲೂಕಿನ ಹೆಬ್ಬಕವಾಡಿ ಗ್ರಾಮದ ಶಾರದಮ್ಮ(42) ಎಂಬವರು ಮೈಸೂರು ತಾಲೂಕು ಹಾರೋಹಳ್ಳಿ ಗ್ರಾಮದ ಪುತ್ರಿಯ ಮನೆಗೆ ಬಂದಿದ್ದು, ಊರಿಗೆ ಹೋಗುವುದಾಗಿ ಹೇಳಿ ಹೋದವರು ನಾಪತ್ತೆಯಾಗಿದ್ದಾರೆ. ಈ ಕುರಿತು ಅವರ ಪುತ್ರಿ ನೀಡಿದ ದೂರನ್ನು ವರುಣ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ದೂ:0821 2594411 ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.



ಎಂಆರ್‌ಸಿಯಲ್ಲಿ ಇಂದು ಆಫ್–ಕೋರ್ಸ್ ರೇಸ್‌ಗೆ ಸರ್ಕಾರದಿಂದ ಪರವಾನಗಿ

ಮುಖ್ಯಮಂತ್ರಿ ಸಿದ್ದರಾಮಯ್ಯರ ಭೇಟಿ ಮಾಡಿದ ಎಂಆರ್‌ಸಿ ನಿಯೋಗ



ಮೈಸೂರು ರೇಸ್ ಕ್ಲಬ್‌ನ ಅಧ್ಯಕ್ಷ ವೈ.ಬಿ.ಗಣೇಶ್, ಆಡಳಿತ ಮಂಡಳಿ ಸದಸ್ಯರಾದ ಸ್ಟೀವರ್ಡ್ ಕೆ.ಎಂ.ಚಂದ್ರೇಗೌಡ, ಹೆಚ್.ಕೆ.ರಮೇಶ್, ಮಾಜಿ ಎಂಎಲ್‌ಸಿ ವೈ.ಮಹೇಶ್, ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಶುಕ್ರವಾರ ಭೇಟಿಯಾಗಿದ್ದರು.

ಮೈಸೂರು, ಆ.4– ಮೈಸೂರು ರೇಸ್ ಕ್ಲಬ್(ಎಂಆರ್‌ಸಿ)ನಲ್ಲಿ ನಿಗದಿಯಂತೆ ಶನಿವಾರ ಆಫ್–ಕೋರ್ಸ್ ರೇಸ್‌ಗಳು ನಡೆಯಲಿವೆ.

ಮೈಸೂರು ರೇಸ್ ಕ್ಲಬ್ ಆಡಳಿತ ಮಂಡಳಿಯವರು ಶುಕ್ರವಾರ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿದ ಹಿನ್ನೆಲೆಯಲ್ಲಿ ಆಫ್–ಕೋರ್ಸ್ ರೇಸ್‌ಗೆ ಪರವಾನಗಿ ದೊರೆತಿದ್ದು, ಶನಿವಾರ ನಿಗದಿಯಾಗಿರುವ ಪುಣೆ ಎ ಕಾರ್ಡ್ ರೇಸ್‌ಗಳು ನಡೆಯಲಿವೆ ಎಂದು ರೇಸ್‌ಕೋರ್ಸ್ ಮೂಲಗಳು ತಿಳಿಸಿವೆ.

ಸರ್ಕಾರದಿಂದ ಪರವಾನಗಿ ದೊರಕದ ಕಾರಣ ಆ.1ರಂದು ನಡೆಯಬೇಕಿದ್ದ ಹೈದರಾಬಾದ್ ಇಂಟರ್‌ವೆನ್ಯೂ ಬೆಟ್ಟಿಂಗ್ (ಐವಿಬಿ) ರೇಸ್ ರದ್ದಾಗಿತ್ತು. ಈ ಹಿನ್ನೆಲೆಯಲ್ಲಿ ಮೈಸೂರು ರೇಸ್ ಕ್ಲಬ್ ಅಧ್ಯಕ್ಷ ವೈ.ಬಿ.ಗಣೇಶ್, ಆಡಳಿತ ಮಂಡಳಿ ಸದಸ್ಯರಾದ ಕೆ.ಎಂ.ಚಂದ್ರೇಗೌಡ, ಸ್ಟೀವರ್ಡ್ ಹೆಚ್.ಕೆ.ರಮೇಶ್ ಹಾಗೂ ಮಾಜಿ ಎಂಎಲ್‌ಸಿ ವೈ.ಮಹೇಶ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ ಮನವಿ ಮಾಡಿದ್ದರು. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಆನ್–ಕೋರ್ಸ್ ಬೆಟ್ಟಿಂಗ್ ಕಾರ್ಯಾಚರಣೆಗೂ ಸರ್ಕಾರ ಅನುಮತಿ ನೀಡಿದೆ ಎನ್ನಲಾಗಿದೆ.

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಪ್ರವಾಸಿ ತಾಣಗಳ ಚಿತ್ರಗಳ ಅನಾವರಣ

● ಸೆಲ್ಫಿ, ಫೋಟೋಗೆ ಪ್ರವಾಸಿಗರ ಆಕರ್ಷಿಸುತ್ತಿರುವ ಸುಂದರ ದೃಶ್ಯಗಳು ● ವಾಟರ್ ಫ್ರೂಫ್ ಕಾರ್ಡ್‌ಬೋರ್ಡ್‌ನಲ್ಲಿ ತಯಾರಿಕೆ ● ಬಿಸಿಲು, ಮಳೆಗೆ ಸ್ವಲ್ಪವೂ ಮಂಕಾಗದ ಚಿತ್ರಗಳು ● ಚಿಮ್ಮುವ ಕಾರಂಜಿ ಮಧ್ಯೆ ಕಣ್ಮನ ಸೆಳೆಯುವ ಚಿತ್ರಗಳು





ಬಿಸಿಲು, ಗಾಳಿ, ಮಳೆಯಿಂದ ಪ್ರವಾಸಿ ತಾಣಗಳ ಚಿತ್ರಗಳು ಮಂಕಾಗದಂತೆ ರೂಪಿಸಲಾಗಿದೆ. ವಾಟರ್ ಫ್ರೂಫ್ ಕಾರ್ಡ್ ಬೋರ್ಡ್‌ನಲ್ಲಿ ರೂಪಿಸಿರುವ ಈ ಪ್ರವಾಸಿ ತಾಣಗಳ ಚಿತ್ರಗಳು ನೈಜತೆಯಿಂದ ಕೂಡಿವೆ.

ಮೈಸೂರು, ಆ.4(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ಅರಮನೆ, ಚಾಮುಂಡಿಬೆಟ್ಟ, ನಂದಿ ಸೇರಿದಂತೆ ಹಲವು ಪ್ರವಾಸಿ ತಾಣಗಳ ಅತ್ಯಾಕರ್ಷಕ ಚಿತ್ರಗಳು ಮೈಸೂರು ರೈಲ್ವೆ ನಿಲ್ದಾಣದಲ್ಲಿ ಅನಾವರಣಗೊಂಡಿವೆ. ಮೈಸೂರು ರೈಲ್ವೆ ನಿಲ್ದಾಣಕ್ಕೆ ಬರುವ ಪ್ರವಾಸಿಗರು, ನೆಚ್ಚಿನ ಪ್ರವಾಸಿತಾಣಗಳ ಚಿತ್ರಗಳ ಮುಂದೆ ನಿಂತು ಸೆಲ್ಫಿ ಹಾಗೂ ಫೋಟೋ ತೆಗೆದುಕೊಂಡು ಮೈಸೂರು ಭೇಟಿಯ ನೆನಪಿನ ಬುತ್ತಿ ಹೊಯ್ಯುತ್ತಿದ್ದಾರೆ.

ಮೈಸೂರು ರೈಲ್ವೆ ನಿಲ್ದಾಣಕ್ಕೆ ಬರುವ ಪ್ರವಾಸಿಗರಿಗೆ ಅತ್ಯಾಕರ್ಷಕ ಪ್ರವಾಸಿ ತಾಣಗಳ ಚಿತ್ರಗಳು ಸ್ವಾಗತಿಸುತ್ತಿವೆ. ಈ ಪ್ರವಾಸಿ ತಾಣಗಳನ್ನು ವೀಕ್ಷಿಸುವ ಮೊದಲೇ ರಾಜರ ಕಾಲದ ಗತವೈಭವ ಹಾಗೂ ಪಾರಂಪರಿಕತೆಯ ಮಹತ್ವವನ್ನು ಈ ಚಿತ್ರಗಳು ಸಾರಿ ಸಾರಿ ಹೇಳುತ್ತವೆ. ಈ ಮೂಲಕ ಮೈಸೂರಿನ ಪ್ರವಾಸಿ ತಾಣಗಳ ಬಗ್ಗೆ ಮಾಹಿತಿ ನೀಡುವ ಹಲವು ಚಿತ್ರಗಳು ಪ್ರವಾಸಿಗರ ಕಣ್ಮನ ಸೆಳೆಯುತ್ತಿವೆ.

ಮೈಸೂರು ರೈಲ್ವೆ ನಿಲ್ದಾಣದ ವಾಹನಗಳ ಪಾರ್ಕಿಂಗ್ ಬಳಿ ಗೋಡೆ ಮೇಲೆ ಮೂಡಿ ಬಂದಿರುವ ಪ್ರವಾಸಿ ತಾಣಗಳ ಚಿತ್ರಗಳು ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿವೆ. ವಿಶ್ವ ಪ್ರಸಿದ್ಧ ಮೈಸೂರು ಅರಮನೆ, ಚಾಮುಂಡಿಬೆಟ್ಟ, ನಂದಿ ಚಿತ್ರಗಳು ನೋಡುಗರನ್ನು ಮನಸೂರೆಗೊಳ್ಳುತ್ತವೆ. ಮೈಸೂರಿನ ಪ್ರವಾಸಿ ತಾಣಗಳ ಚಿತ್ರಗಳ ಮಧ್ಯೆ ಫೌಂಟೇನ್ ನಿರ್ಮಿಸಲಾಗಿದೆ. ಪ್ರಖರ ವಿದ್ಯುತ್ ಬೆಳಕಿನಲ್ಲಿ ಚಿಮ್ಮುವ ಕಾರಂಜಿಯ ಅಕ್ಕ–ಪಕ್ಕದಲ್ಲಿರುವ ಪ್ರವಾಸಿ ತಾಣಗಳ ಚಿತ್ರಗಳು ನೋಡುಗರ ಮನಸಿಗೆ ಮುದ ನೀಡುತ್ತವೆ.

ಪ್ರವಾಸಿಗರು ಆ ಚಿತ್ರಗಳ ಮುಂದೆ ನಿಂತು ಸೆಲ್ಫಿ ಹಾಗೂ ಫೋಟೋ ತೆಗೆದುಕೊಳ್ಳುತ್ತಿದ್ದಾರೆ. ಮೈಸೂರಿಗೆ ಹೊಸದಾಗಿ ಭೇಟಿ ನೀಡುವ ಜನರಂತೂ ಇಲ್ಲಿ ಭೇಟಿ ನೀಡಿ ಪ್ರವಾಸಿ ತಾಣ ಚಿತ್ರಗಳ ಸೊಬಗನ್ನು ನೋಡದೆ ಹೋಗುವುದಿಲ್ಲ. ಅಷ್ಟರ ಮಟ್ಟಿಗೆ ಪ್ರವಾಸಿ ತಾಣಗಳ ಚಿತ್ರಗಳು ಗಮನ ಸೆಳೆಯುತ್ತಿವೆ.

ರೈಲ್ವೆ ನಿಲ್ದಾಣದ ಪ್ರವೇಶ ದ್ವಾರದ ಗೋಡೆ ಮೇಲೆ ಮೈಸೂರು ಪಾರಂಪರಿಕ ನಗರಕ್ಕೆ ಸ್ವಾಗತ ಎಂಬ ಬರಹ ಬರೆಯಲಾಗಿದೆ. ಇದರ ಕೆಳಗೆ ರೈಲ್ವೆ ನಿಲ್ದಾಣದ ಚಿತ್ರ ಬಿಡಿಸಲಾಗಿದ್ದು, ಅದರ ಮಧ್ಯೆ ಪಾರಂಪರಿಕ ಶೈಲಿಯ ತೆರೆದಿರುವ ಮರದ ಬಾಗಿಲು ಅಳವಡಿಸಲಾಗಿದೆ.

ಮತ್ತೊಂದು ಪ್ರವೇಶ ದ್ವಾರದಲ್ಲಿ ಬ್ರಿಟಿಷ್ ಮ್ಯೂಸಿಯಂನಿಂದ ಸಂಗ್ರಹಿಸಿರುವ ರಾಜರ ಕಾಲದ ದಸರಾ ಜಂಬೂ ಸವಾರಿ ಮೆರವಣಿಗೆಯ ಚಿತ್ರ ಬಿಡಿಸಲಾಗಿದೆ. ಅಂಡರ್ ಪಾಸ್ ಮೂಲಕ ರೈಲ್ವೆ ನಿಲ್ದಾಣ ಪ್ರವೇಶಿಸುವ ಅಕ್ಕ ಪಕ್ಕದ ಗೋಡೆಗಳಲ್ಲಿ ಕೂಡ ಮೈಸೂರಿನ ಪ್ರವಾಸಿ ತಾಣಗಳ ರೇಖಾ ಚಿತ್ರಗಳನ್ನು ಬಿಡಿಸಲಾಗಿದೆ.

ಇನ್ನು ರೈಲ್ವೆ ವಿಭಾಗೀಯ ವ್ಯವಸ್ಥಾಪಕರ ಕಚೇರಿಗೆ ಹೋಗುವ ಮೆಟ್ಟಿಲು ಬಳಿಯೂ ಪ್ರಸಿದ್ಧ



ಇಂಗ್ಲಿಷ್ ಕಾದಂಬರಿಕಾರ ಆರ್.ಕೆ. ನಾರಾಯಣರ ಮಾಲ್ಗುಡಿ ಡೇಸ್ ನೆನಪಿಸುವ ಮಾಲ್ಗುಡಿ ರೈಲ್ವೆ ನಿಲ್ದಾಣದ ಮಾದರಿ ರೂಪಿಸಲಾಗಿದೆ.

ಬದುಕಿರುವ ವ್ಯಕ್ತಿಗಳಿಗೆ ಮರಣ ಪ್ರಮಾಣ ಪತ್ರ ನೀಡಿದ

ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳದ ಡಿಸಿ, ಎಸಿ ವಿರುದ್ಧ ಲೋಕಾಯುಕ್ತಕ್ಕೆ ದೂರು



ಮೈಸೂರು, ಆ.4(ಜಿಎ)–ನಂಜನಗೂಡಿನಲ್ಲಿ ಬದುಕಿರುವ ವ್ಯಕ್ತಿಗಳಿಗೆ ಮರಣ ಪ್ರಮಾಣ ಪತ್ರ ನೀಡಿದ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳದ ಮೈಸೂರು ಜಿಲ್ಲಾಧಿಕಾರಿ ಮತ್ತು ಉಪವಿಭಾಗಾಧಿಕಾರಿ ವಿರುದ್ಧ ಲೋಕಾಯುಕ್ತ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗುವುದು ಎಂದು ಜನ ಸಂಗ್ರಾಮ ಪರಿಷತ್ ಮೈಸೂರು ವಿಭಾಗೀಯ ಕಾರ್ಯದರ್ಶಿ ಎಂ.ವಿಜಯಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬದುಕಿರುವ ವ್ಯಕ್ತಿಗಳಿಗೆ ಮರಣ ಪ್ರಮಾಣ ಸೃಷ್ಟಿಸಿ, ಅಕ್ರಮ ಪೌತಿ ಖಾತೆ ಮಾಡಿದ್ದ ನಂಜನಗೂಡು ತಾಲೂಕು ಗೋಳೂರು ವೃತ್ತದ ಲೆಕ್ಕಾಧಿಕಾರಿ ಪ್ರಸ್ತುತ ಹುಣಸೂರು ತಾಲೂಕು ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸು ತ್ತಿರುವ ಮಂಜುನಾಥ್ ಹಾಗೂ ಪ್ರಸ್ತುತ ಹುಣಸೂರು ತಾಲೂಕು ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಪ್ರಕಾಶ್ ವಿರುದ್ಧ ಸಂಪೂರ್ಣ ದಾಖಲೆಗಳೊಂದಿಗೆ ಜಿಲ್ಲಾಧಿಕಾರಿ ಹಾಗೂ ಉಪವಿಭಾಗಾಧಿಕಾರಿಗಳಿಗೆ ಲಿಖಿತ ದೂರು ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

ದೂರು ನೀಡಿ 2 ತಿಂಗಳು ಕಳೆದರೂ ಕಾನೂನು ಕ್ರಮ ಕೈಗೊಳ್ಳದ ಜಿಲ್ಲಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ, ನಂಜನಗೂಡು ತಹಸೀಲ್ದಾರ್ ಹಾಗೂ ಈ ಕ್ರಮ ಕೈಗೊಳ್ಳಲು ವಿಳಂಬಕ್ಕೆ ಕಾರಣರಾದ ಆಡಳಿತ ಇಲಾಖೆ ಅಧಿಕಾರಿ ಮೇಲೆ ಕ್ರಮಕೈಗೊಂಡು ವರ್ಗಾವಣೆ ಮಾಡಿ. ಇಲ್ಲವಾದಲ್ಲಿ ಈ ಎಲ್ಲಾ ಭ್ರಷ್ಟ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗುವುದು ಮತ್ತು ಒಂದು ದಿನ ಉಪವಾಸ ಸತ್ಯಾಗ್ರಹ ಮಾಡುತ್ತೇನೆಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಪರಿಷತ್‌ನ ಉಪಾಧ್ಯಕ್ಷ ಪ್ರಸನ್ನ ಮೈಸೂರು, ಬಸಮ್ಮ, ಸೋಮಣ್ಣ ಮತ್ತು ಮಹದೇವ್ ಉಪಸ್ಥಿತರಿದ್ದರು.

ಪತ್ರಕರ್ತರಿಗೆ ಬೇಸಿಕ್ ಲೈಫ್ ಸೇವಿಂಗ್ ಸ್ಕಿಲ್ಸ್ ತರಬೇತಿ



ಮೈಸೂರು, ಆ.4(ಜಿಎ)– ರಾಷ್ಟ್ರೀಯ ಕೀಲು ಮತ್ತು ಮೂಳೆ ದಿನದ ಅಂಗವಾಗಿ ಪತ್ರಕರ್ತರಿಗೆ ಬೇಸಿಕ್ ಲೈಫ್ ಸೇವಿಂಗ್ ಸ್ಕಿಲ್ಸ್ ತರಬೇತಿ ನೀಡಲಾಯಿತು. ಮೈಸೂರು ಆರ್ಥೋಪೆಡಿಕ್ ಅಸೋಸಿಯೇಷನ್ ವತಿಯಿಂದ ನಗರದ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ತರಬೇತಿಯಲ್ಲಿ ಈ ಬಾರಿ ನಿಗದಿಪಡಿಸಿರುವ ಇಂಡಿಯನ್ ಆರ್ಥೋಪೆಡಿಕ್ ಅಸೋಸಿಯೇಷನ್ 'each one train one save one' ಎಂಬ ವಿಷಯವನ್ನು ವಿವರಿಸಿದ್ದು, ನಗರದ ಡಿಆರ್‌ಎಂ ಆಸ್ಪತ್ರೆಯ ವೈದ್ಯರಾದ ಡಾ.ಪ್ರಶಾಂತ್ ಅಪಘಾತವಾಗಿ ಉಸಿರಾಟ ಸಮಸ್ಯೆ ಎದುರಾದಾಗ ತಕ್ಷಣ ಏನು ಮಾಡಬೇಕು ಎಂಬುದನ್ನು ಪ್ರಾಯೋಗಿಕವಾಗಿ ಪ್ರದರ್ಶಿಸಿ, ಅರಿವು ಮೂಡಿಸಿದರು.

ನಂತರ ಅಸೋಸಿಯೇಷನ್‌ನ ಜಂಟಿ ಕಾರ್ಯದರ್ಶಿ ಡಾ.ರಘುನಂದನ್ ಮಾತನಾಡಿ, 2019ರಲ್ಲಿ ಸುಮಾರು 4,49,002 ಅಪಘಾತಗಳು ಸಂಭವಿಸಿವೆ, ಅದರಲ್ಲಿ 1,51,113 ಜನರು ಪ್ರಾಣ ಕಳೆದುಕೊಂಡಿದ್ದಾರೆ 4,51,361 ಜನರು ಗಾಯಗೊಂಡಿದ್ದಾರೆ. ಹೆಚ್ಚಿನ ಜನರು ಅಪಘಾತದ ಮೊದಲ ಗಂಟೆಯಲ್ಲಿ ಅಂದರೆ ಗೋಲ್ಡನ್ ಅವರ್‌ನಲ್ಲಿ ಸರಿಯಾದ ಚಿಕಿತ್ಸೆ ಸಿಗದೆ ಸಾವನ್ನಪ್ಪಿದ್ದಾರೆ. ಇಂತಹ ಗಾಯಾಳುಗಳಿಗೆ ಸೂಕ್ತ ಪ್ರಥಮ ಚಿಕಿತ್ಸೆ ನೀಡಿದರೆ ಬಹಳಷ್ಟು ಜೀವಗಳನ್ನು ಉಳಿಸಬಹುದು. ಇದನ್ನು ಮಾಡುವಲ್ಲಿ ಸಾಮಾನ್ಯ ಜನರ ಪಾತ್ರ ದೊಡ್ಡದು. ಈ ಹಿನ್ನೆಲೆಯಲ್ಲಿ ಭಾರತೀಯ ಆರ್ಥೋಪೆಡಿಕ್ ಅಸೋಸಿಯೇಷನ್ ಈ ವರ್ಷ 1.4 ಲಕ್ಷ ಮಂದಿಗೆ ಬೇಸಿಕ್ ಲೈಫ್ ಸೇವಿಂಗ್ ಸ್ಕಿಲ್ಸ್ ತರಬೇತಿ ನೀಡುವ ಗುರಿಯನ್ನು ಹೊಂದಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ; ಹರಕೆ ತೀರಿಸಿದ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು



ಮೈಸೂರು, ಆ.4(ಎಂಟಿವೈ)–ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನೆಟ್ಟಾ ಡಿಸೋಜಾ ಮತ್ತು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ. ಪುಷ್ಪಾ ಅಮರನಾಥ್ ನೇತೃತ್ವದಲ್ಲಿ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಹರಕೆ ತೀರಿಸಿದರು.

ಮೊದಲಿಗೆ ಚಾಮುಂಡಿಬೆಟ್ಟದ ಪಾದಕ್ಕೆ ಪೂಜೆ ಸಲ್ಲಿಸಿ ಮೆಟ್ಟಿಲುಗಳ ಮೂಲಕ ಬೆಟ್ಟ ಹತ್ತಿದ ಕಾರ್ಯಕರ್ತರು, ನಂತರ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಈ ವೇಳೆ ಮಾತನಾಡಿದ ನೆಟ್ಟಾ ಡಿಸೋಜಾ, ವಿಧಾನಸಭಾ ಚುನಾವಣೆ ವೇಳೆ ಮೊದಲಿಗೆ ಕರ್ನಾಟಕಕ್ಕೆ ಬಂದಿದ್ದೆ. ಈಗ ಮತ್ತೆ ಇಲ್ಲಿಗೆ ಬಂದು ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದಿರುವುದು ಸಂತೋಷವಾಗಿದೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್‌ಗೆ ದೇವಿಯ ಅನುಗ್ರಹ ಇರಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.

ಪುಷ್ಪಾ ಅಮರನಾಥ್ ಮಾತನಾಡಿ, ಚುನಾವಣಾ ಸಂದರ್ಭದಲ್ಲಿ ಮೈಸೂರಿನಲ್ಲಿ ನಡೆದ ರಾಜ್ಯ ಮಹಿಳಾ ಕಾಂಗ್ರೆಸ್ ಸಮಾವೇಶದಲ್ಲಿ ದೇವಿಗೆ ಹರಕೆ ಹೊತ್ತಿದ್ದೆವು. ಇಂದು ಹರಕೆ ತೀರಿಸುತ್ತಿದ್ದೇವೆ. ರಾಜ್ಯದಲ್ಲಿ ಇನ್ನಷ್ಟು ಅಭಿವೃದ್ಧಿ ಯೋಜನೆಗಳನ್ನು ಸರ್ಕಾರ ಅನುಷ್ಠಾನಕ್ಕೆ ತರಲಿದ್ದು, ಅದಕ್ಕೆ ದೇವಿಯ ಅನುಗ್ರಹ ಇರಲೆಂದು ಪೂಜೆ ಸಲ್ಲಿಸುತ್ತಿದ್ದೇವೆ ಎಂದರು. ಈ ವೇಳೆ ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ನಗರಾಧ್ಯಕ್ಷೆ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಉಪಾಧ್ಯಕ್ಷೆ ಪುಷ್ಪವಲ್ಲಿ, ರಾಜ್ಯ ಮಹಿಳಾ ಕಾಂಗ್ರೆಸ್ ಉಪಾಧ್ಯಕ್ಷೆ ಶುಭದಾಯಿನಿ, ಪದಾಧಿಕಾರಿಗಳಾದ ಸುಜಾತ, ಜಯಲಕ್ಷ್ಮಿ, ಲತಾ ಮೋಹನ್, ಅಂಜನಾ ಶ್ರೀಕಾಂತ್, ಭಾಗ್ಯಮ್ಮ, ರಾಯಚೂರಿನ ಶ್ರೀದೇವಿ, ಹಾಸನದ ತಾರಾ ಚಂದನ್, ತುಮಕೂರಿನ ಗೀತಾ ರಾಜಣ್ಣ, ಮಂಗಳೂರಿನ ಮಂಜುಳಾ ನಾಯಕ್ ಇನ್ನಿತರರು ಉಪಸ್ಥಿತರಿದ್ದರು.

ಭಾವಗೀತೆ, ಜನಪದ ಗೀತೆಗಳ ಶಿಬಿರ

ಮೈಸೂರು, ಆ. 4– ಮೈಸೂರಿನ ಮಹಾರತ್ನ ಟ್ರಸ್ಟ್ ವತಿಯಿಂದ ಆ. 7 ರಿಂದ 11 ರವರೆಗೆ ಖ್ಯಾತ ಗಾಯಕ ಮೈಸೂರು ಮಹಾಲಿಂಗ ಅವರ ನೇತೃತ್ವದಲ್ಲಿ ಭಾವಗೀತೆ, ಜನಪದಗೀತೆಗಳ ಶಿಬಿರವನ್ನು ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಆವರಣದಲ್ಲಿ ಆಯೋಜಿಸಲಾಗಿದೆ. ಶಿಬಿರವು ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9740287860, 9945910706 ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬಹುದು.

ಅನುತ್ತೀರ್ಣಗೊಂಡ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ 10 ದಿನಗಳ ಉಚಿತ ತರಗತಿ



ಮೈಸೂರು, ಆ.4(ಜಿಎ)– ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ 10 ದಿನ ಉಚಿತ ತರಗತಿಗಳನ್ನು ಆಯೋಜಿಸಲಾಗಿದೆ ಎಂದು ರತ್ನ ಕಾಲೇಜು ಆಫ್ ಬಿಸಿನೆಸ್ ಮ್ಯಾನೇಜ್ಮೆಂಟ್‌ನ ನಿರ್ದೇಶಕ ಆರ್.ಮಂಜುನಾಥ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆ.7ರಿಂದ 10 ದಿನಗಳ ಕಾಲ ಕನ್ನಡ, ಇಂಗ್ಲಿಷ್, ವಾಣಿಜ್ಯ ಮತ್ತು ವಿಜ್ಞಾನ ವಿಭಾಗದವರಿಗೆ ಉಚಿತ ತರಗತಿಗಳನ್ನು ಕುವೆಂಪುನಗರದ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ 9886654463, 9632467311 ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಂಶುಪಾಲೆ ಎಂ.ಜೆ.ದೀಪ, ಇಂಗ್ಲಿಷ್ ಪ್ರಾಧ್ಯಾಪಕ ಬಸಮಾಜಪ್ಪ ಕನ್ನಡ ಪ್ರಾಧ್ಯಾಪಕ ಡಾ.ನಾಗೇಶ್ ಮತ್ತು ಅಮರ್‌ನಾಥ್ ಉಪಸ್ಥಿತರಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಆ.4– ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರ ಸಜ್ಜನ ಸಂಘದ ಆಶ್ರಯದಲ್ಲಿ ಆ. 8 ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಂಡಿ ಮೊಹಲ್ಲಾದ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 99161 55453, 94487 38657 ಸಂಪರ್ಕಿಸಬಹುದು.

ಅಕ್ರಮವಾಗಿ ದಾಸ್ತಾನು ಮಾಡಿದ್ದ 4.84 ಲಕ್ಷ ಮೌಲ್ಯದ ಬಿತ್ತನೆ ಭತ್ತ ವಶ

ಮೈಸೂರು, ಆ.4(ಎಂಟಿವೈ)– ರೈತರಿಗೆ ವಿತರಿಸಬೇಕಾದ ವಿವಿಧ ತಳಿಗಳ ಬಿತ್ತನೆ ಭತ್ತವನ್ನು ಅಕ್ರಮವಾಗಿ ದಾಸ್ತಾನು ಮಾಡಲಾಗಿದ್ದ ಗೋದಾಮಿನ ಮೇಲೆ ಕೃಷಿ ಅಧಿಕಾರಿಗಳು ದಾಳಿ ನಡೆಸಿ, 4,84,754 ರೂ. ಮೌಲ್ಯದ ಬಿತ್ತನೆ ಭತ್ತವನ್ನು ವಶಪಡಿಸಿಕೊಂಡಿದ್ದಾರೆ.

ತಿ.ನರಸೀಪುರ ತಾಲೂಕಿನ ಸೋಸಲೆ ಹೋಬಳಿಯ ಎಸ್‌ಕೆಪಿ ಅಗ್ರಹಾರ ಹಾಗೂ ವ್ಯಾಸರಾಜಪುರ ಗ್ರಾಮದ ನಡುವೆ ಇರುವ ಸರ್ವೆ ನಂ.50ರಲ್ಲಿರುವ ಗೋದಾಮಿನಲ್ಲಿ ಮಲ್ಲಿಕಾರ್ಜುನಸ್ವಾಮಿ ಎಂಬುವರು ಬಿತ್ತನೆ ಬೀಜ ಮಾರಾಟದ ಪರವಾನಗಿ ಪಡೆಯದೇ ಅಕ್ರಮವಾಗಿ ಬಿತ್ತನೆ ಭತ್ತವನ್ನು ದಾಸ್ತಾನು ಮಾಡಿದ್ದರು. ವಿಷಯ ತಿಳಿದು ಗೋದಾಮಿನ ಮೇಲೆ ಕೃಷಿ ಅಧಿಕಾರಿಗಳ ತಂಡ ದಾಳಿ ನಡೆಸಿ, ದಬಾಂಗ್ ಪ್ಲಸ್ 810 ಕೆಜಿ, ತುಳಸಿ 160 ಕೆಜಿ, ಆಲ್‌ಬಿನಾ 360 ಕೆಜಿ, ಐಆರ್–64 ತಳಿಯ 125 ಕೆಜಿ ಹಾಗೂ ಎಂಟಿಯು 1010 ತಳಿಯ 25 ಕೆಜಿ ಭತ್ತವನ್ನು ವಶಪಡಿಸಿಕೊಂಡಿದ್ದಾರೆ.



ಗೋದಾಮಿನಲ್ಲಿ ಒಟ್ಟು 1480 ಕೆಜಿ ಭತ್ತದ ಬಿತ್ತನೆ ಬೀಜಗಳನ್ನು ವಶಕ್ಕೆ ಪಡೆಯಲಾಗಿದ್ದು, ಅವುಗಳ ಮೌಲ್ಯ ರೂ 4,84,754 ರೂ. ಎಂದು ಅಂದಾಜಿಸಲಾಗಿದೆ. ಜಿಲ್ಲೆಯಲ್ಲಿ ಬಿತ್ತನೆ ಕಾರ್ಯ ಚುರುಕು ಪಡೆದಿದ್ದು, ಕೆಲವು ನಾಲೆಗಳಿಗೆ ನೀರು ಬಿಟ್ಟ ಬಳಿಕ ಗದ್ದೆಗಳಲ್ಲಿ ಸಸಿ ಮಡಿ ಮಾಡುವ ಕಾರ್ಯ ಆರಂಭವಾಗಲಿದೆ. ಇದಕ್ಕಾಗಿ ಬಿತ್ತನೆ ಭತ್ತ ವಿತರಣಾ ಕಾರ್ಯ ನಡೆಯುತ್ತಿದ್ದರೂ, ಕೆಲವರು ಅಕ್ರಮವಾಗಿ ದಾಸ್ತಾನು ಮಾಡಿ ರೈತರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಂಚು ನಡೆಸುತ್ತಿದ್ದಾರೆ. ಈ ಹಿನ್ನೆಲೆ ಸ್ಥಳೀಯರು ನೀಡಿದ ದೂರಿನ ಮೇರೆಗೆ ಸಹಾಯಕ ಕೃಷಿ ನಿರ್ದೇಶಕಿ ಕೆ.ಎಸ್.ಸುಹಾಸಿನಿ, ತಾಂತ್ರಿಕ ಅಧಿಕಾರಿ ಬಿ.ಪಿ.ರಾಘವೇಂದ್ರ ಹಾಗೂ ಪ್ರಭಾರ ಕೃಷಿ ಅಧಿಕಾರಿ ಶಿವರಾಜು ಅವರನ್ನೊಳಗೊಂಡ ತಂಡ ದಾಳಿ ನಡೆಸಿ ಸದರಿ ಬಿತ್ತನೆ ಬೀಜಗಳ ದಾಸ್ತಾನನ್ನು ವಶಪಡಿಸಿಕೊಂಡು ಬನ್ನೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ.

ವಶಕ್ಕೆ ಪಡೆದ ಭತ್ತದ ಬಿತ್ತನೆ ಬೀಜಗಳ ಗುಣಮಟ್ಟವನ್ನು ಪರೀಕ್ಷಿಸಲು ಭತ್ತದ ತಳಿಗಳ ಮಾದರಿಯನ್ನು ಬೆಂಗಳೂರಿನ ಹೆಬ್ಬಾಳದಲ್ಲಿರುವ ಬೀಜ ಪರೀಕ್ಷಾ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ರೈತ ಬಿತ್ತನೆ ಬೀಜ ಖರೀದಿಸುವಾಗ ಕಡ್ಡಾಯವಾಗಿ ಬಿಲ್ಲನ್ನು ಪಡೆದುಕೊಳ್ಳಲು ಸಹಾಯಕ ಕೃಷಿ ನಿರ್ದೇಶಕರು ರೈತರಲ್ಲಿ ಮನವಿ ಮಾಡಿದ್ದಾರೆ.

ಮೋದಿ ಮತ್ತೆ ಪ್ರಧಾನಿಯಾಗುವುದನ್ನು ತಡೆಯಲು ಆಗದು

ಮಾಜಿ ಸಚಿವ, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಶಿವಣ್ಣ ಭವಿಷ್ಯ



ತಿ.ನರಸೀಪುರ, ಆ.4– ದೇಶದ ಅತ್ಯಂತ ಹೆಮ್ಮೆಯ ಪ್ರಧಾನಿ ಮೋದಿಯವರು ವಿಶ್ವ ನಾಯಕರಾಗಿದ್ದು, ಕಳೆದ 9 ವರ್ಷಗಳಿಂದ ಅವರು ನೀಡಿರುವ ಆಡಳಿತ ಇಡೀ ಪ್ರಪಂಚಕ್ಕೆ ಮಾದರಿಯಾಗಿದೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಮತ್ತೆ ಮೋದಿಯವರು ಪ್ರಧಾನಿಯಾಗುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಮಾಜಿ ಸಚಿವ ಹಾಗೂ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ. ಶಿವಣ್ಣ ಭವಿಷ್ಯ ನುಡಿದಿದ್ದಾರೆ.

ತಾಲೂಕಿನ ವಾಟಾಳು ಗ್ರಾಮದ ಸೂರ್ಯ ಸಿಂಹಾಸನ ಮಠಕ್ಕೆ ಭೇಟಿ ನೀಡಿ ಶ್ರೀ ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿಗಳ ಆಶೀರ್ವಾದ ಪಡೆದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

> ರಾಜ್ಯ ಕಾಂಗ್ರೆಸ್ ಸರ್ಕಾರ ಎಸ್‌ಸಿಪಿಗೆ ಮೀಸಲಿಟ್ಟ 11,500 ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗೆ ಬಳಕೆ ಮಾಡಿಕೊಳ್ಳುತ್ತಿರುವುದು ಸರಿಯಲ್ಲ, ಸಚಿವ ಎಚ್.ಸಿ.ಮಹದೇವಪ್ಪ ಸಹ ಹಣ ಬಳಕೆ ಮಾಡಿಕೊಂಡಿರುವ ಬಗ್ಗೆ ಹೇಳಿಕೆ ನೀಡಿದ್ದು, ಬಳಕೆ ಮಾಡಿ ತಪ್ಪು ಮಾಡಿದ್ದೇವೆ ಎಂದಿದ್ದಾರೆ. ಜನರಿಗೆ ಗ್ಯಾರಂಟಿ ಯೋಜನೆ ನೀಡಿ, ನಮ್ಮದೇನು ಅಭ್ಯಂತರವಿಲ್ಲ. ಆದರೆ ಎಸ್‌ಸಿಪಿ ಹಣವನ್ನು ಬಳಕೆ ಮಾಡುವುದು ಸರಿಯಲ್ಲ.
> – ಕೋಟೆ ಎಂ.ಶಿವಣ್ಣ, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ

ನರೇಂದ್ರ ಮೋದಿಯವರನ್ನು ಎದುರಿಸಲು ಇಂಡಿಯಾ ಎಂಬ ಹೆಸರಿನಲ್ಲಿ ಅನೇಕ ಪಕ್ಷಗಳು ಸೇರಿ ಕಟ್ಟಿಕೊಂಡಿರುವ ಕೂಟದಲ್ಲೇ ಕಿತ್ತಾಟಗಳಿವೆ. ಸ್ಥಳೀಯವಾಗಿ ಅವರವರ ರಾಜ್ಯಗಳಲ್ಲಿ ಒಬ್ಬರನ್ನು ಕಂಡರೆ ಒಬ್ಬರಿಗೆ ಆಗುವುದಿಲ್ಲ. ಇಂತಹವರು ಮೋದಿಯವರನ್ನು ಎದುರಿಸಲು ಹೊರಟಿರುವುದು ಹಾಸ್ಯಾಸ್ಪದವಾಗಿದೆ ಎಂದರು.

ಆರ್ಥಿಕ ಸದೃಢತೆಯಲ್ಲಿ ನಾವು ಬಹಳ ಮುಂದೆ ಇದ್ದೇವೆ ಪಾಕಿಸ್ಥಾನ ಚೀನಾ ಹಾಗೂ ಶ್ರೀಲಂಕಾದಲ್ಲಿ ಆರ್ಥಿಕ ಸದೃಢತೆ ಇಲ್ಲದೇ ಊಟಕ್ಕೂ ಪರದಾಡುವ ಪರಿಸ್ಥಿತಿಯನ್ನು ನಾವು ಕಂಡಿದ್ದೇವೆ. ಹಾಗಾಗಿ ಮೋದಿ ಮತ್ತೆ ಪ್ರಧಾನಿಯಾಗಲಿದ್ದಾರೆ. ಕರ್ನಾಟಕದಲ್ಲೂ ನಾವು ಲೋಕಸಭೆಯಲ್ಲಿ ಹೆಚ್ಚಿನ ಸ್ಥಾನ ಗೆಲ್ಲಲಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ನಾನು ಬಿಜೆಪಿ ಪಕ್ಷದಿಂದ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ ಎಂದು ಇದೇ ವೇಳೆ ತಿಳಿಸಿದರು.

ಕಳೆದ ಲೋಕಸಭಾ ಚುನಾವಣೆಯಲ್ಲೇ ನಾನು ಬಿಜೆಪಿ ಪಕ್ಷದಿಂದ ಟಿಕೆಟ್ ಕೇಳಿದ್ದೆ. ಆದರೆ ವರಿಷ್ಠರು ಶ್ರೀನಿವಾಸ ಪ್ರಸಾದ್ ಹಿರಿಯ ನಾಯಕರಾಗಿದ್ದರಿಂದ ಅವರಿಗೆ ಟಿಕೆಟ್ ನೀಡಿದ್ದರು. ಈಗ ಪ್ರಸಾದ್ ಅವರು ಚುನಾವಣಾ ಕಣದಿಂದ ನಿವೃತ್ತರಾಗಿ ಸ್ಪರ್ಧೆ ಮಾಡುವುದಿಲ್ಲ ಎಂದು ಹೇಳಿರುವುದರಿಂದ ಕ್ಷೇತ್ರದ ಅನೇಕ ಮುಖಂಡರು, ಅಭಿಮಾನಿಗಳು ನನ್ನ ಸ್ಪರ್ಧೆಗೆ ಒತ್ತಾಯ ಮಾಡಿದ್ದರಿಂದ ನಾನು ಪಕ್ಷದ ಪ್ರಬಲ ಆಕಾಂಕ್ಷಿಯಾಗಿದ್ದೇನೆ. ಪಕ್ಷದಲ್ಲಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷನಾಗಿ, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಹಾಗೂ ಮಾಜಿ ಸಚಿವನಾಗಿ ಪಕ್ಷದ ಕೆಲಸ ಮಾಡಿರುವುದರಿಂದ ವರಿಷ್ಠರು ನನ್ನನ್ನು ಗುರುತಿಸಿ ಟಿಕೆಟ್ ನೀಡುತ್ತಾರೆಂಬ ವಿಶ್ವಾಸ ನನಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಜಯಪುರ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷ ಮಹದೇವಯ್ಯ, ಉಪಾಧ್ಯಕ್ಷೆ ರೇಣುಕಾ ಅವರನ್ನು ಮುಖಂಡರಾದ ಅಬ್ದುಲ್ ಮುತಾಲಿಕ್, ಶಿವರಾಜು, ರಾಮೇಗೌಡ ಮತ್ತು ಪಂಚಾಯಿತಿ ಸದಸ್ಯರು ಅಭಿನಂದಿಸಿದರು.

ಕಳಲೆ ಗ್ರಾಪಂನಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ



ನಂಜನಗೂಡು: ತಾಲೂಕಿನ ಕಳಲೆ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷೆಯಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಲತಾ ಮಹೇಶ್, ಉಪಾಧ್ಯಕ್ಷರಾಗಿ ಎನ್.ಹರೀಶ್‌ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

19 ಸದಸ್ಯರ ಬಲವನ್ನು ಹೊಂದಿರುವ ಕಳಲೆ ಗ್ರಾಮ ಪಂಚಾಯಿತಿಯಲ್ಲಿ ಶುಕ್ರವಾರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಸಲಾಯಿತು. ಅಧ್ಯಕ್ಷ ಸ್ಥಾನ ಎಸ್ಸಿ ಮಹಿಳೆಗೆ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾತಿ ನಿಗದಿಪಡಿಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಲತಾ ಮಹೇಶ್, ಉಪಾಧ್ಯಕ್ಷ ಸ್ಥಾನಕ್ಕೆ ಎನ್.ಹರೀಶ್ ಕುಮಾರ್ ಹೊರತುಪಡಿಸಿ ಯಾರೊಬ್ಬರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯಾಗಿದ್ದ ತಾಪಂ ಯೋಜನಾಧಿಕಾರಿ ಗುರು ಮಹದೇವ ಅವಿರೋಧ ಆಯ್ಕೆಯನ್ನು ಘೋಷಿಸಿದರು. ನೂತನ ಅಧ್ಯಕ್ಷ ಲತಾ ಮಹೇಶ್ ಮಾತನಾಡಿ ಗ್ರಾಮ ಪಂಚಾಯಿತಿಗೆ ಎರಡನೇ ಬಾರಿಗೆ ನಾನು ಅಧ್ಯಕ್ಷೆಯಾಗಿ ಆಯ್ಕೆಯಾಗುತ್ತಿರುವುದು ಸಂತಸ ತಂದಿದೆ. ಎಲ್ಲಾ ಸದಸ್ಯರ ಸಹಕಾರ ಪಡೆದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ವಚ್ಛತೆ, ಪರಿಸರ ಸಂರಕ್ಷಣೆಗೆ ಆದ್ಯತೆ ನೀಡುವುದಲ್ಲದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೂ ಮೂಲ ಸೌಕರ್ಯ ಒದಗಿಸಲು ಶ್ರಮಿಸುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಗ್ರಾಪಂ ಸದಸ್ಯರಾದ ಡಿ.ಮಹೇಶ್, ರಾಜಮ್ಮ, ರತ್ನಮ್ಮ, ಶಿವಕುಮಾರಿ, ಪ್ರಸನ್ನ ಕುಮಾರ್, ಮರಿಚಿಕ್ಕಮ್ಮ, ಲಕ್ಷ್ಮಿ, ಪ್ರತಾಪ್, ವಿಶಾಲಕ್ಷಮ್ಮ, ಗೀತಾ, ಶಾಂತಮ್ಮ ಶಿವಣ್ಣ ಶಿವಕುಮಾರ್, ಸಿದ್ದೇಶ್, ಮುಖಂಡರಾದ ಕಳಲೆ ರಾಜೇಶ್, ತಡೂರು ನಾಯಕ, ಪಿಡಿಒ ಮಹೇಶ್, ಗ್ರಾಮಸ್ಥರು ಇದ್ದರು.

ಹೆಗ್ಗನೂರು ಗ್ರಾಪಂನಲ್ಲಿ ಕಾಂಗ್ರೆಸ್, ಜೆಡಿಎಸ್ ಆಡಳಿತ



ಸರಗೂರು: ತಾಲೂಕಿನ ಹೆಗ್ಗನೂರು ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಜೆಡಿಎಸ್‌ನ ಎಚ್.ಎನ್.ಸುಧೀರ್, ಉಪಾಧ್ಯಕ್ಷರಾಗಿ ಕಾಂಗ್ರೆಸ್‌ನ ರುಕ್ಮಿಣಿ ಬಸವರಾಜ್ ಆಯ್ಕೆಯಾಗಿದ್ದಾರೆ.

ಶುಕ್ರವಾರ ಪಂಚಾಯಿತಿ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿ ಎಚ್.ಎನ್.ಸುಧೀರ್, ಚಿಕ್ಕಶಂಭೇಗೌಡ ನಾಮಪತ್ರ ಸಲ್ಲಿಸಿದರು. ಈ ಪೈಕಿ ಜೆಡಿಎಸ್‌ನ ಎಚ್.ಎನ್.ಸುಧೀರ್ 8 ಮತ ಪಡೆದು ವಿಜಯಿಯಾದರೆ ಚಿಕ್ಕಶಂಭೇಗೌಡ 6 ಮತ ಪಡೆದು ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿ ರುಕ್ಮಿಣಿ ಬಸವರಾಜ್ ಅವರು ಒಬ್ಬರೇ ನಾಮಪತ್ರ ಸಲ್ಲಿಸಿದ ಹಿನ್ನಲೆ ಉಪಾಧ್ಯಕ್ಷರಾಗಿ ಕಾಂಗ್ರೆಸ್‌ನ ರುಕ್ಮಿಣಿ ಬಸವರಾಜ್ ಅವರು ಅವಿರೋಧವಾಗಿ ಆಯ್ಕೆಯಾದರು. ನೀರಾವರಿ ಇಲಾಖೆ ಎಂಜಿನಿಯರ್ ಉಷಾ, ಪಿಡಿಒ ಪ್ರಕಾಶ್ ಚುನಾವಣೆ ಪ್ರಕ್ರಿಯೆ ನಡೆಸಿಕೊಟ್ಟರು. ಸದಸ್ಯರಾದ ಡಿ.ಎಂ. ಸವಿತಾ, ಮಂಜುಳ ವಸಂತಕುಮಾರ್, ಶೋಭಾರಾಣಿ ಲೋಕೇಶ್, ಪ್ರಮೀಳಾ ಮಹೇಶ್, ಕಾಟವಾಳು ಮುತ್ತುರಾಜು, ಮಾರಯ್ಯ, ನಾಗಮ್ಮ, ಶಿವಶಂಕರ, ಮಂಜುಳ ಚಲುವರಾಜು, ಎಂ.ಲೋಕೇಶ್, ಬಸವರಾಜು, ಜಯರಾಮೇಗೌಡ, ರವೀಗೌಡ, ಸಣ್ಣಕೂಸೇಗೌಡ, ಚಲುವೇಗೌಡ, ಎಚ್.ಎಸ್. ಗೊವಿಂದೇಗೌಡ, ಮಹೇಶ್, ಕಾಳಪ್ಪ, ನವೀನ್ ಕುಮಾರ್, ಸೋಮೇಶ್, ಶಿವು, ಶಿವಚಂದ್ರಪಾಟೀಲ್ ಉಪಸ್ಥಿತರಿದ್ದರು.

ಅರಗ ಜ್ಞಾನೇಂದ್ರ ವಿರುದ್ಧ ಪ್ರತಿಭಟನೆ



ನಂಜನಗೂಡು, ಆ.4– ನಗರದ ಅಂಬೇಡ್ಕರ್ ಪ್ರತಿಮೆ ಮುಂಭಾಗ ಶುಕ್ರವಾರ ಪ್ರಗತಿಪರ ಚಳುವಳಿಗಳ ವೇದಿಕೆ ಕಾರ್ಯಕರ್ತರು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವ ಶಾಸಕ ಅರಗ ಜ್ಞಾನೇಂದ್ರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಮುಖಂಡರಾದ ಮಲ್ಲಹಳ್ಳಿ ನಾರಾಯಣ ಮಾತನಾಡಿ ಸಂಸದರಾದ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಬಿಜೆಪಿ ಮುಖಂಡ ಹಾಗೂ ಶಾಸಕ ಅರಗ ಜ್ಞಾನೇಂದ್ರ ವಿವೇಚನೆಯಿಲ್ಲದ ಅವಹೇಳನಕಾರಿಯಾಗಿ ಮಾತನಾಡಿ ದಲಿತರ ಸ್ವಾಭಿಮಾನವನ್ನು ಕೆಣಕುತ್ತಿದ್ದಾರೆ, ಶಾಸಕರ ವರ್ತನೆ ಬಿಜೆಪಿಯ ಕೋಮುವಾದಿ ಮನಸ್ಥಿತಿಯನ್ನು ತೋರುತ್ತಿದೆ, ಮಲ್ಲಿಕಾರ್ಜುನ ಖರ್ಗೆಯವರ ವಿರುದ್ದ ಅವಹೇಳನಕಾರಿ ಹೇಳಿಕೆ ನೀಡಿರುವ ಶಾಸಕ ಅರಗ ಜ್ಞಾನೇಂದ್ರ ವಿರುದ್ದ ಎಸ್.ಸಿ, ಎಸ್ಟಿ ಅಸ್ಪೃಶ್ಯತೆ ಕಾಯ್ದೆಯಡಿ ಬಂಧಿಸಿ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ಮುಖಂಡ ಕಾರ್ಯ ಬಸಣ್ಣ ಮಾತನಾಡಿ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಾದ ಎಸ್.ಪಿ, ಟಿ.ಎಸ್.ಪಿ ಯೋಜನೆಯ 11 ಸಾವಿರ ಕೋಟಿಗೂ ಹೆಚ್ಚು ಹಣವನ್ನು ತನ್ನ ಗ್ಯಾಂರಟಿ ಯೋಜನೆಗಳಿಗೆ ಬಳಸುತ್ತಿರುವುದು ಕಂಡುಬಂದಿದೆ, ಯಾವುದೇ ಕಾರಣಕ್ಕೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾದ ಹಣವನ್ನು ಬೇರೆ ಯೋಜನೆಗಳಿಗೆ ಬಳಸಬಾರದು ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಮರಿಸ್ವಾಮಿ,ಶಂಕರಪುರ ಮಂಜು, ಹಲ್ಲರೆ ಮಹೇಶ್,ಹರದನಹಳ್ಳಿ ರಾಜೇಶ್, ಪುಟ್ಟಸ್ವಾಮಿ, ದೇಬೂರು ವಿನೋದ್,ಮಹದೇವಕುಮಾರ್, ನಾರಾಯಣ,ಮುಳ್ಳೂರು ಸ್ವಾಮಿ, ಸಿದ್ದರಾಜು, ಹೋವಯ್ಯ, ಗೋಣ ಹಳ್ಳಿ ನಾರಾಯಣ ಸ್ವಾಮಿ ಉಪಸ್ಥಿತರಿದ್ದರು.

ನಲ್ಲಿತಾಳಪುರ ಗ್ರಾಪಂನಲ್ಲಿ ಬಿಜೆಪಿ ಅಧಿಕಾರಕ್ಕೆ



ಮಲ್ಕುಂಡಿ: ನಂಜನಗೂಡು ತಾಲೂಕಿನ ನಲ್ಲಿತಾಳಪುರ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕೆಂಪಮ್ಮ, ಉಪಾಧ್ಯಕ್ಷರಾಗಿ ನಂಜುಂಡಸ್ವಾಮಿ ಆಯ್ಕೆಯಾಗಿದ್ದಾರೆ.

ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿ ಕೆಂಪಮ್ಮ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಜಯಲಕ್ಷ್ಮಿ ನಾಮಪತ್ರ ಸಲ್ಲಿಸಿದರು. ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿ ಮಾದನಹಳ್ಳಿ ನಂಜುಂಡಸ್ವಾಮಿ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ದೇವಮ್ಮ ನಾಮಪತ್ರ ಸಲ್ಲಿಸಿದರು. ಕೆಂಪಮ್ಮ 15 ಮತ ಪಡೆದು ಆಯ್ಕೆಯಾದರೆ, ಪ್ರತಿಸ್ಪರ್ಧಿ ಜಯಲಕ್ಷ್ಮಿ 5 ಮತ ಪಡೆದು ಪರಾಭವಗೊಂಡರು. ಮಾದನಹಳ್ಳಿ ನಂಜುಂಡಸ್ವಾಮಿ 15 ಮತ ಪಡೆದು ಉಪಾಧ್ಯಕ್ಷೆಯಾಗಿ ಆಯ್ಕೆಯಾದರೆ, ಪ್ರತಿಸ್ಪರ್ಧಿ ದೇವಮ್ಮ 5 ಮತ ಪಡೆದು ಪರಾಭವಗೊಂಡರು. ಇವರ ಆಯ್ಕೆಯನ್ನು ಚುನಾವಣಾಧಿಕಾರಿ ಕೃಷ್ಣ ಘೋಷಣೆ ಮಾಡಿದರು.

ವಿಜೇತ ಅಧ್ಯಕ್ಷ, ಉಪಾಧ್ಯಕ್ಷರನ್ನು ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷೆ ಮಂಗಳ ಸೋಮಶೇಖರ್, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಜಿಪಂ ಮಾಜಿ ಸದಸ್ಯರಾದ ಚಿಕ್ಕರಂಗನಾಯಕ, ಎಸ್.ಎಂ. ಕೆಂಪಣ್ಣ, ಕೆಂಡಗಣ್ಣಪ್ಪ, ಅವರು ಪಕ್ಷದ ಶಾಲು ಹೊದಿಸಿ ಅಭಿನಂದಿಸಿದ್ದರು.

ಗ್ರಾಪಂ ಸದಸ್ಯರುಗಳಾದ ಕೆ.ಟಿ. ಮಲ್ಲೇಶ್, ಪ್ರಕಾಶ್, ಗ್ರಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ನಂದೀನಿ, ಮಣಿ, ವಿಜಯಲಕ್ಷ್ಮಿ, ರಾಜಮ್ಮ, ನಾಗೇಂದ್ರ ನಾಗೇಗೌಡ, ರಾಜೇಂದ್ರ, ಶಿವಮಲ್ಲು,ರವಿ ಸೇರಿದಂತೆ ಪ್ರಮುಖರು ಹಾಜರಿದ್ದರು.



ಕಾರ್ಯ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಮಹೇಶ್ವರಿ ನಿಂಗರಾಜು, ಉಪಾಧ್ಯಕ್ಷರಾಗಿ ಕಾವ್ಯ ಶೇಷಾದ್ರಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಸಿದ್ದಯ್ಯ, ಸ್ವಾಮಿ, ಸೆಂಟ್ರಿ ಕುಮಾರ್, ಮಾಜಿ ಪ್ರಧಾನ ಬಸವಣ್ಣ, ಗುರುಸ್ವಾಮಿ, ಕೆ.ಜಿ. ಸಿದ್ದಮಾದಪ್ಪ, ಬಸಪ್ಪ, ಸೋಮಣ್ಣ, ಪ್ರಕಾಶ್, ರಂಜನ್, ಕುಮಾರ್ ಹಾಗೂ ಸದಸ್ಯರು ಉಪಸ್ಥಿತರಿದ್ದರು.

ದೊಡ್ಡಹೆಜ್ಜೂರು ಗ್ರಾಪಂಗೆ ಅಧ್ಯಕ್ಷೆ, ಉಪಾಧ್ಯಕ್ಷ ಆಯ್ಕೆ



ಹುಣಸೂರು, ಆ.4– ದೊಡ್ಡಹೆಜ್ಜೂರು ಗ್ರಾಪಂ ಎರಡನೇ ಅವಧಿಗೆ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಮುದಗನೂರಿನ ಅಂಬಿಕಾ ಲೋಕೇಶ್ ಹಾಗೂ ಉಪಾಧ್ಯಕ್ಷರಾಗಿ ಭರತವಾಡಿಯ ಯಜಮಾನ್ ವೆಂಕಟೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ನಡೆದ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಗೆ ಹನ್ನೆರಡು ಮಂದಿ ಪಾಲ್ಗೊಂಡಿದ್ದು ಇಬ್ಬರು ಸದಸ್ಯರು ಗೈರು ಹಾಜರಾಗಿದ್ದರು. ಚುನಾವಣಾಧಿಕಾರಿ ರೇಷ್ಮೆ ಇಲಾಖೆಯ ಸಹಾಯಕ ನಿರ್ದೇಶಕ ಉಮೇಶ್ ಕಾರ್ಯನಿರ್ವಹಿಸಿದರು.

ಈ ವೇಳೆ ಶಾಸಕ ಜಿ.ಡಿ.ಹರೀಶ್‌ಗೌಡ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಸನ್ಮಾನಿಸಿ ಮಾತನಾಡಿ ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಹಳ್ಳಿಗಳಲ್ಲಿ ಸಮರ್ಪಕವಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸಿದ್ದಲ್ಲಿ ಮಾತ್ರ ಗ್ರಾಮಗಳ ಅಭಿವೃದ್ಧಿ ಸಾಧ್ಯ. ಆದ್ದರಿಂದ ಚುನಾಯಿತ ಗ್ರಾಮ ಪಂಚಾಯಿತಿ ಸದಸ್ಯರು ಜವಾಬ್ದಾರಿ ಅರಿತು ಕೆಲಸ ಮಾಡಿ ಎಂದರು

ಈ ಪಂಚಾಯಿತಿಯು ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಅಂಚಿನಲ್ಲಿರುವುದರಿಂದ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಅದನ್ನು ತಡೆಯುವುದು ಮತ್ತು ಈ ಭಾಗದಲ್ಲಿ ಸಾಗುವಳಿ ಸಮಸ್ಯೆ, ರಸ್ತೆ ಸಮಸ್ಯೆ ಇನ್ನಿತರ ಸಮಸ್ಯೆಗಳನ್ನು ಪರಿಹರಿಸಲು ಸ್ಥಳಿಯ ಸದಸ್ಯರ ಒಟ್ಟುಗೂಡಿಸಿ ಕ್ರಮ ವಹಿಸುತ್ತೇನೆ ಎಂದರು.

ಈ ಸಮಯದಲ್ಲಿ ಜಿಪಂ ಮಾಜಿ ಸದಸ್ಯ ಕಟ್ಟನಾಯ್ಕ ಎಪಿಎಂಸಿ ಮಾಜಿ ಅಧ್ಯಕ್ಷ ಸುಭಾಷ್ ಗ್ರಾಪಂ ಮಾಜಿ ಅಧ್ಯಕ್ಷ ಶಿವಶಂಕರ್, ದಾ.ರಾ. ಮಹೇಶ್, ಹರವೆ ಶ್ರೀಧರ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಕೆಂಪೇಗೌಡ, ಹನಗೋಡು ಸೊಸೈಟಿ ಅಧ್ಯಕ್ಷ ಹನುಮ (ರವಿಕುಮಾರ್), ಕೊಳವಿಗೆ ದೇವರಾಜ್, ಪಿಡಿಒ ಮಂಜುನಾಥ್, ರಾಜೇಗೌಡ ಇತರರು ಹಾಜರಿದ್ದರು.

ಬಾಚೇಗೌಡನಹಳ್ಳಿ ಗ್ರಾಪಂಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹಂಪಾಪುರ, ಆ.4– ಹೆಚ್.ಡಿ. ಕೋಟೆ ತಾಲೂಕು ಹಂಪಾಪುರ ಹೋಬಳಿಯ ಬಾಚೇಗೌಡನಹಳ್ಳಿ ಗ್ರಾಮ ಪಂಚಾಯಿತಿಯ ಎರಡನೇ ಅವಧಿಗೆ ಅಧ್ಯಕ್ಷರಾಗಿ ಸುವರ್ಣಮ್ಮ ಮತ್ತು ಉಪಾಧ್ಯಕ್ಷರಾಗಿ ಗೌರಮ್ಮ ಆಯ್ಕೆಯಾಗಿದ್ದಾರೆ.

ಒಟ್ಟು ಒಂಬತ್ತು ಸದಸ್ಯರು ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದು, ಅಧ್ಯಕ್ಷೆ ಸ್ಥಾನಕ್ಕೆ ಸ್ಪರ್ಧಿಸಿದ್ದ ಸುವರ್ಣಮ್ಮ 5 ಮತ ಪಡೆದು ಜಯಗಳಿಸಿದರೆ, ಪ್ರತಿಸ್ಪರ್ಧಿ ರೇಜಿನಾ 4 ಮತ ಪಡೆದು ಸೋಲು ಅನುಭವಿಸಿದರು. ಉಪಾಧ್ಯಕ್ಷೆ ಸ್ಥಾನಕ್ಕೆ ಗೌರಮ್ಮ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿಯಾದ ಎ.ಇ.ಇ ನಾಗರಾಜು ಅವಿರೋಧ ಆಯ್ಕೆ ಘೋಷಿಸಿದರು.

ಸದಸ್ಯರಾದ ಚಂದ್ರನಾಯಕ, ಮಲ್ಲಮ್ಮ, ಕರೀನಾಯಕ, ಸುಧಾ, ಯೋಗಾನಂದ, ಪ್ರೇಮ್ ಕುಮಾರ್, ಗೌರಮ್ಮ ಪಿಡಿಓಜೆ ಕೆಂಚೇಗೌಡ, ಗ್ರಾಮ ಪಂಚಾಯಿತಿ ವರ್ಗದವರು ಮತ್ತು ಗ್ರಾಮದ ಮುಖಂಡರು ಹಾಜರಿದ್ದರು.

ಹಾರೋಹಳ್ಳಿ–ಮೆಲ್ಲಹಳ್ಳಿ ಗ್ರಾಪಂ ಕಾಂಗ್ರೆಸ್ ತೆಕ್ಕೆಗೆ



ಮೈಸೂರು, ಆ.4(ಜಿಎ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿನಿಧಿಸುವ ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಾರೋಹಳ್ಳಿ–ಮೆಲ್ಲಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ನಾಗರತ್ನ, ಉಪಾಧ್ಯಕ್ಷರಾಗಿ ಶ್ರೀವಾಣಿ ಆಯ್ಕೆಯಾಗಿದ್ದಾರೆ. ಈ ಇಬ್ಬರೂ ಕಾಂಗ್ರೆಸ್ ಬೆಂಬಲಿತರು.

ಒಟ್ಟು 25 ಸದಸ್ಯ ಬಲವಿರುವ ಪಂಚಾಯಿತಿಯ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಇಂದು ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ನಾಗರತ್ನ 17 ಮತ ಪಡೆದರೆ, ಪ್ರತಿಸ್ಪರ್ಧಿ ಜ್ಯೋತಿ 7 ಮತ ಪಡೆದು ಪರಾಭವಗೊಂಡರು. ಅಂತೆಯೇ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಶ್ರೀವಾಣಿ 14 ಮತ ಪಡೆದರೆ, ಪ್ರತಿಸ್ಪರ್ಧಿ ಎಚ್.ಎಂ. ಶ್ರುತಿ 10 ಮತ ಪಡೆದು, ಸೋಲನುಭವಿಸಿದರು. ಚುನಾವಣಾಧಿಕಾರಿಯಾಗಿ ಸುನೀಲ್ ಕಾರ್ಯ ನಿರ್ವಹಿಸಿದರು.

ಸದಸ್ಯರಾದ ಪ್ರಶಾಂತ್‌ಕುಮಾರ್, ಶಿವಪುರ ಶಂಕರ್, ಎಂ.ಶಂಕರ್, ಮೋಹನ್ ಕುಮಾರ್, ಸಿದ್ದರಾಜು, ಭಾಗ್ಯಮ್ಮ, ಮಂಚಮ್ಮ, ದೇವಮ್ಮ, ಶಾಂತಾ, ಜ್ಯೋತಿ, ನಾಗರತ್ನ, ಕುಮಾರ್, ಜವರಮ್ಮ ಇದ್ದರು. ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ನಾಗರಾಜು, ಗಂಗನ ತಿಮ್ಮಯ್ಯ, ಎಪಿಎಂಸಿ ಮಾಜಿ ಸದಸ್ಯ ಜೆ.ರಮೇಶ್ ಚುನಾವಣೆಯ ಉಸ್ತುವಾರಿ ಹೊತ್ತಿದ್ದರು. ಕಾಂಗ್ರೆಸ್ ಮುಖಂಡರಾದ ಮೆಲ್ಲಹಳ್ಳಿ ರವಿ ಎನ್.ಗೌಡ, ಹರೀಶ್, ಅನುಕುಮಾರ್, ರಾಜೇಶ್ ಸಿ.ಟಿ.ತಿಮ್ಮ, ಪ್ರಸಾದ್, ಮಾದೇಶ್, ಕೃಷ್ಣ, ಮಂಚಯ್ಯ, ಚಂದ್ರಕುಮಾರ್, ಸಿದ್ದಲಿಂಗಯ್ಯನ ಗವಿ, ಪಾಂಡು, ಚಂಡಿ, ರಾಜೇಂದ್ರ, ಕರಿಯಪ್ಪ, ಇತರರಿದ್ದರು. ಫಲಿತಾಂಶ ಹೊರಬೀಳುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಪಟಾಕಿ ಸಿಡಿಸಿ ಸಂಭ್ರಮ ಆಚರಿಸಿದರು.

ಜನರನ್ನು ಆಕರ್ಷಿಸಿದ ಆಹಾರ ಮೇಳ, ಮಕ್ಕಳ ಸಂತೆ

ಚುರುಮುರಿ, ಪಾನಿಪುರಿ, ಎಳನೀರು, ವಿವಿಧ ಖಾದ್ಯಗಳ ಮಾರಾಟ ಮಾಡಿ ಗಮನ ಸೆಳೆದ ಮಕ್ಕಳು

ಹೆಚ್.ಡಿ.ಕೋಟೆ, ಆ.4– ಮಕ್ಕಳಿಗೆ ಅವಕಾಶ ಕೊಟ್ಟರೆ ಏನನ್ನು ಬೇಕಾದರೂ ಸಾಧಿಸುತ್ತಾರೆ ಎಂಬುದಕ್ಕೆ ಈ ಆಹಾರ ಮೇಳ ಹಾಗೂ ಮಕ್ಕಳ ಸಂತೆಯೇ ನಿದರ್ಶನವಾಗಿದೆ ಎಂದು ಆದಿಚುಂಚನಗಿರಿ, ಮೈಸೂರು ಶಾಖ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ತಿಳಿಸಿದ್ದಾರೆ.

ಪಟ್ಟಣದ ಬಿಜಿಎಸ್ ಸಭಾಭವನದ ಆವರಣದಲ್ಲಿ ಆದಿಚುಂಚನಗಿರಿ ಶಾಲೆಯ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲಾ ಮಕ್ಕಳಿಗೆ ಆಯೋಜಿಸಲಾಗಿದ್ದ ಆಹಾರಮೇಳ ಹಾಗೂ ಮಕ್ಕಳ ಸಂತೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಮಕ್ಕಳಿಗೆ ವಿದ್ಯಾಭ್ಯಾಸ, ಕ್ರೀಡಾ ಚಟುವಟಿಕೆಯಲ್ಲಿ, ಇಂಥ ಒಂದು ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಧೈರ್ಯ ತುಂಬಿ ಅವಕಾಶ ನೀಡಬೇಕು ಎಂದರು. ಮಕ್ಕಳು ಸಮಾಜ ಸುಧಾರಕರಾಗಲು, ಸಮಾಜದಲ್ಲಿ ಒಳ್ಳೆಯ ಹೆಸರನ್ನು ಪಡೆಯಲು ಪೋಷಕರ ಜೊತೆ, ಶಿಕ್ಷಕರುಗಳು ಹಾಗೂ ಆದಿಚುಂಚನಗಿರಿ ಸಂಸ್ಥೆ ಮುಖ್ಯಕಾರಣ, ಇಂತಹ ಒಂದು ಕಾರ್ಯಕ್ರಮ ನಡೆಯಲು ಶಿಕ್ಷಕರಗಳ ಶ್ರಮವೇ ಇದಕ್ಕೆ ಮುಖ್ಯ ಕಾರಣ ಎಂದರು.

ಇದೇ ಸಂದರ್ಭದಲ್ಲಿ ಎಲ್‌ಕೆಜಿ, ಯುಕೆಜಿಯಿಂದ ಎಸ್‌ಎಸ್‌ಎಲ್‌ಸಿ ವರೆಗಿನ ಸಾವಿರಾರು ಮಕ್ಕಳು ವಿವಿಧ ಬಗೆ ಬಗೆಯ ಆಹಾರಗಳು ಹಾಗೂ ತರಕಾರಿಗಳು, ವಿಭಿನ್ನ ಖಾದ್ಯಗಳನ್ನು ತಯಾರಿಸಿ ಸಾರ್ವಜನಿಕರನ್ನು ಆಕರ್ಷಿಸಿದರು. ಮಾರುಕಟ್ಟೆಯಲ್ಲಿ ಎಳನೀರು 35 ರೂ.ಗಳಾದರೆ ಮಕ್ಕಳ ಸಂತೆಯಲ್ಲಿ ಕೇವಲ 20 ರೂ.ಗಳಿಗೆ ಮಾರಾಟ ಮಾಡಿದ್ದು ವಿಶೇಷ. ಕೆಲ ಮಕ್ಕಳು ಚುರುಮುರಿ, ಫ್ರೂಟ್ ಸಾಲಡ್, ಪಾನಿಪುರಿ, ವಿವಿಧ ತರಕಾರಿಗಳು ಸೇರಿದಂತೆ ಸಾಕಷ್ಟು ವಿಧದ ವ್ಯಾಪಾರ ನಡೆಸಿದರು. ನಾವು ಸಹ ವ್ಯಾಪಾರ ಮಾಡಿ ಹಣ ಗಳಿಸುವ ಚಾಕಚಕ್ಯತೆ ಹೊಂದಿರುವುದಾಗಿ ಗಮನಸೆಳೆದರು.

ಕಾರ್ಯಕ್ರಮದಲ್ಲಿ ಪ್ರೊ:ಕೆ.ಪಿ.ಬಸವೇಗೌಡ, ವೃತ್ತ ನಿರೀಕ್ಷಕ ಶಬ್ಬೀರ್ ಹುಸೇನ್, ಪಿಎಸ್‌ಐ ರಸುಲ್ ಪಾಗೆವಾಲ, ಚೆಸ್ಕಾಂ ಅಧಿಕಾರಿ ಅರುಣ್ ಕುಮಾರ್, ಎ.ಜೆ.ಕಾಳೇಗೌಡ, ತಾಲೋಕು ಪತ್ರಕರ್ತರ ಸಂಘದ ಅಧ್ಯಕ್ಷ ಸತೀಶ್ ಅರಾಧ್ಯ, ಆದಿಚುಂಚನಗಿರಿ ಶಾಲೆಯ ಮುಖ್ಯ ಶಿಕ್ಷಕಿ ನಂದಿನಿ, ಪ್ರಿನ್ಸಿಪಾಲ್ ವೆಂಕಟೇಶ್, ಶಿಕ್ಷಕರುಗಳಾದ ರಾಜೇಗೌಡ, ಲೋಕೇಶ್, ಸಂತೋಷ್, ರಮೇಶ್ ಚೈತ್ರ, ಶಿಲ್ಪಶ್ರೀ, ಕೈಸರ್ ಪಾಷಾ, ಶಿವಕುಮಾರ್, ಪೋಷಕರು ಭಾಗವಹಿಸಿದ್ದರು.



ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಓಪನ್ಹೈಮರ್ (ಇಂ): ಬೆ.10ಕ್ಕೆ, ಮ.1.35ಕ್ಕೆ, ಸಂ.5.10ಕ್ಕೆ, ರಾ.8.45ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಬಾರ್ಬಿ (ಇಂ): ಬೆ.10.55ಕ್ಕೆ, ರಾ.7.20ಕ್ಕೆ, ಪರಂವಃ (ಕ): ಮ.1.50ಕ್ಕೆ, ದೇವರ ಕನಸು (ಕ): ಸಂ.4.45ಕ್ಕೆ, ಹಿಡಿಂಭ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ವಾಲಟ್ಟಿ (ಮ): ಬೆ.11ಕ್ಕೆ, ಕೊಲೈ (ತ): ಮ.1.25ಕ್ಕೆ, ಬೇಬಿ (ತೆ): ಮ.3.55ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.7.15ಕ್ಕೆ, ಅನೀತಿ (ತ): ರಾ.10.05ಕ್ಕೆ.
ಸ್ಕ್ರೀನ್ 4	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.15ಕ್ಕೆ, ಡೇವಿಡ್ (ಕ): ಮ.1.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.
ಸ್ಕ್ರೀನ್ 3	ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.
ಸ್ಕ್ರೀನ್ 4	ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಮಧುರ ಕಾವ್ಯ (ಕ): ಬೆ.10.45ಕ್ಕೆ, ಮಾವೀರನ್ (ತ): ಮ.1.20ಕ್ಕೆ, ರಾ.9ಕ್ಕೆ, ಪರಂವಃ (ಕ): ಸಂ.4.25ಕ್ಕೆ, ದೇವರ ಕನಸು (ಕ): ಸಂ.6.35ಕ್ಕೆ.
ಸ್ಕ್ರೀನ್ 2	ಓಪನ್ಹೈಮರ್ (ಇಂ): ಬೆ.10.15ಕ್ಕೆ, ಮ.1.45ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಮ.1.05ಕ್ಕೆ, ಸಂ.6.25ಕ್ಕೆ, ಬಾರ್ಬಿ (ಇಂ): ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಬಾರ್ಬಿ (ಇಂ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.10ಕ್ಕೆ, ಸಂ.4ಕ್ಕೆ, ರಾ.6.45ಕ್ಕೆ, ವಾಲಟ್ಟಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, **1 ರಾಬರಿ ಕಥೆ** (ಕ): ಸಂ.4.50ಕ್ಕೆ, **ಚೌಕಾಬಾರ** (ಕ): ರಾ.7.50ಕ್ಕೆ, **ಕ್ರಿಡ್ 3** (ಇಂ): ಬೆ.11.35ಕ್ಕೆ, **ತು ಜೂಥಿ ಮೇನ್ ಮಕ್ಕರ್** (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ತು ಜೂಥಿ ಮೇನ್ ಮಕ್ಕರ್** (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, **ತುರಮುಖಂ** (ಮ): ರಾ.10.30ಕ್ಕೆ, **ಅಜಿಲನ್ ಕಿಂಗ್ ಆಫ್ ದಿ ಓಷನ್** (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಸ್ಕ್ರೀಮ್ 6** (ಇಂ): ಮ.2.45ಕ್ಕೆ, ರಾ.7.45ಕ್ಕೆ, **65** (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಡಿಡಿ ರಿಟರ್ನ್ಸ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬೇಬಿ (ತೆ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ರಾಖಿ ಔರ್ ರಾಣಿ ಪ್ರೇಂ ಖಹಾನಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶೀಲಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಲಾಕ್‌ಡೌನ್ (ತ)	4 ಪ್ರದರ್ಶನಗಳು
ಸಂಗಂ	
ಶೀಲಾ (ಕ)	4 ಪ್ರದರ್ಶನಗಳು
ಲಿಡೋ	
ಕೌಸಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ಪೈ (ಕ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ–2 (ಕ)	4 ಪ್ರದರ್ಶನಗಳು

STAR HYUNDAI
Delivering Miles Of Happiness
NEWLY LAUNCHED HYUNDAI EXTER AVAILABLE FOR TEST DRIVE AT OUR SHOWROOM

ವಿಶೇಷ ಕ್ಯಾಶ್ ರಿಯಾಯಿತಿ
ಸ್ಥಳದಲ್ಲೇ ಬುಕ್ ಮಾಡಿದವರಿಗೆ



ರೂ.43,000/- ದವರೆಗೆ ಉಳಿತಾಯ

ಮೈಸೂರು ಕಾರ್ ಹಬ್ಬ
ಉಚಿತ ಟೆಸ್ಟ್ ಡ್ರೈವ್, ಉಚಿತ ಇವಾಲ್ಯುಯೇಷನ್
ಉಚಿತ ಮಾನ್ಸೂನ್ ಸರ್ವಿಸ್ ತಪಾಸಣೆ
ಉಚಿತ ತೈಲ ಮತ್ತು ಕೂಲೆಂಟ್ ಟಾಪ್ ಅಪ್
0 ಮುಂಗಡ ಪಾವತಿ*
05 ಮತ್ತು 06 ಆಗಸ್ಟ್ 2023
(ಶನಿವಾರ ಮತ್ತು ಭಾನುವಾರ)
ಬೆಳಿಗ್ಗೆ 10 ರಿಂದ ಸಂಜೆ 7 ರವರೆಗೆ
EMI at just ₹1604/-*

ಸ್ಥಳ: ಶ್ರೀ ಬಲಮುರಿ ಗಣಪತಿ ಸಮುದಾಯ ಭವನ ಆವರಣ, ನ್ಯೂ ಕಾಂತರಾಜ ಅರಸ್ ರಸ್ತೆ, ನಿವೇದಿತಾನಗರ, ಮೈಸೂರು
ನಂ.36, ಹೈವೇ ಸರ್ಕಲ್ ಹತ್ತಿರ, ಬಂಬೂ ಬಜಾರ್ ಮುಖ್ಯ ರಸ್ತೆ, ಮೈಸೂರು.
ಸೇಲ್ಸ್ : 95388 79294 ಸರ್ವೀಸ್ : 95380 10000 *T&C Apply

ಮುಡಾ ಅನುಮೋದಿತ ಸೈಟುಗಳು ಮಾರಾಟಕ್ಕಿದೆ
ಶ್ರೀನಿಧಿ ಎನ್‌ಕ್ಲೇವ್
ಬೆಳವಾಡಿ, ಮೈಸೂರು
ಬ್ಯಾಂಕ್ ಲೋನ್ ಸೌಲಭ್ಯವಿದೆ.
ಸಂಪೂರ್ಣ ಅಭಿವೃದ್ಧಿ ಹೊಂದಿದೆ । ಮನೆಗಳು ಕಟ್ಟಲ್ಪಟ್ಟಿವೆ
•20x33 | •20x40 | ಕೆಲವೇ ನಿವೇಶನಗಳು ಲಭ್ಯವಿದೆ.
ಶಾಹಿ ಗಾರ್ಮೆಂಟ್ ಹತ್ತಿರ, ಹುಂಡೈ ಕಾರು ಶೋ ರೂಂ ಹಿಂಭಾಗ
ಎಕ್ಸೆಲ್ ಪಬ್ಲಿಕ್ ಸ್ಕೂಲ್ ರಸ್ತೆ, ಬೆಳವಾಡಿ, ಮೈಸೂರು. 91484 34989

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ

ಶ್ರೀ ಪುಟ್ಟಸ್ವಾಮಿಶೆಟ್ಟಿ
ದಡದಹಳ್ಳಿ, ಜಯಪುರ ಹೋಬಳಿ, ಮೈಸೂರು
ಮಾಡುವ ವಿಜ್ಞಾಪನೆಗಳು
ದಿನಾಂಕ: 26-07-2023 ನೇ ಬುಧವಾರ ನನ್ನ ಶ್ರೀಮತಿಯಾದ
ಶ್ರೀಮತಿ ರುಕ್ಮಣಿರವರು
(ಲೇಟ್ ಶ್ರೀ ಮಾದಶೆಟ್ಟರು ಸೊಸೆ ಮತ್ತು ಶ್ರೀ ಪುಟ್ಟಸ್ವಾಮಿಶೆಟ್ಟಿ ರವರ ಧರ್ಮಪತ್ನಿ)



ಶ್ರೀಮತಿ ರುಕ್ಮಣಿರವರು
ನಿಧನ : 26-07-2023.

ದೈವದೇನರಾಗಿದ್ದಾರೆಂದು ತಿಳಿಸಲು ವಿಷಾಧಿಸುತ್ತೇವೆ. ದಿನಾಂಕ : 05-08-2023 ನೇ ಶನಿವಾರ ಪೂಜೆ 1:00 ಗಂಟೆಗೆ, ಭೋಜನದ ಸಮಯ 2:00 ಗಂಟೆಗೆ ನಮ್ಮ ದಡದಹಳ್ಳಿ ಸ್ವಗೃಹದಲ್ಲಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಹರಿಕಥೆ
ಶಿವರ್‌ಉಮೇಶ್ ರವರಿಂದ
ಸಮಯ: ರಾತ್ರಿ 8.00

ಇಂತಿ ದುಃಖತಪ್ತರು
ಬಿಲ್ಡರ್ ರವಿಚಂದ್ರ, ರೂಪ, ಫೋಟೋ ಮಹೇಶ್, ವೀಣಾ
ಲಕ್ಷ್ಮಿ ಬಸವಯ್ಯ ಮಕ್ಕಳು, ಮೊಮ್ಮಕ್ಕಳು ಹಾಗೂ ದಡದಹಳ್ಳಿ ಗ್ರಾಮಸ್ಥರು

MUDA APPROVED MYSORE
SITES FOR SALE
KBL SILICON CITY
40x60 E/F
NEAR INFOSYS, MYSURU.
Contact: DIRECT OWNER
Mob: 98867-73473

15ನೇ ವರ್ಷದ ಸವಿನೆನಪು



ಶ್ರೀ ಚಿಕ್ಕನೀಲೆಗೌಡರು (ದಾಸನಕೊಪ್ಪಲು)
ಎಸ್‌ಎಲ್‌ವಿ ಬೋರ್ಡಿಂಗ್ & ಲಾಡ್ಜಿಂಗ್, ಎಸ್.ಡಿ.ಆರ್. ಟ್ರೇಡರ್ಸ್ (ಕೆ.ಎಸ್. ಗದ್ದಿಗೆ)

ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀಮತಿ ಸಣ್ಣಮ್ಮ APMC ಮಾಜಿ ಸದಸ್ಯರು, ಹುಣಸೂರು
ಲಕ್ಷ್ಮಿ, ಮಮತ ಮತ್ತು ಕೆಂಚೇಗೌಡ
ಸವಿತ ಮತ್ತು ಸುರೇಶ್ ಎನ್.
ಅನಿತ ಮತ್ತು ಕೃಷ್ಣೇಗೌಡ
ಅಶ್ವಿನಿ ಮತ್ತು ಪ್ರವೀಣ್, ಮನುಪ್ರಿಯ, ಅರುಣ್,
ರೋಹಿತ್, ನಿತಿನ್ ಮತ್ತು ಮೊಮ್ಮಕ್ಕಳು, ದಾಸನಕೊಪ್ಪಲು

ಶ್ರೀಮತಿ ಪ್ರೇಮ ಮತ್ತು ಸಿದ್ದರಾಮೇಗೌಡ,
ಗ್ರಾ.ಪಂ. ಮಾಜಿ ಸದಸ್ಯರು, ಮರಣಿಕ್ಯಾತನಹಳ್ಳಿ
ಪಲ್ಲವಿ ಮತ್ತು ಸಿದ್ದು
ಕಾವ್ಯ ಮತ್ತು ಮಹೇಶ್
ಕೋಮಲ ಮತ್ತು ಪೈ. ಕಿರಣ್
ನಿಶಾಂತ್ ಎಸ್.ಗೌಡ ಮತ್ತು ಮೊಮ್ಮಕ್ಕಳು
ರೂಪನಗರ, ದಾಸನಕೊಪ್ಪಲು

HOUSE FOR SALE
In Sathagalli 'A' Zone.
Newly Built in 20x30 Ground Floor & 1st floor, Fully Furnished. for Immediate Registration. contact
9900321777 | 9448626795

Gopala Gowda Shanthaveri Memorial Hospital, T.N.pura Main Road, Nazarbad, Mysore-570010
Invites application from eligible Candidates for Fellowship in Reproductive Medicine and fellowship in intensive care for the year 2023. last date for applying is 12th August 2023. written test will be held on 15th Aug 2023 at our Centre, To apply Contact:
9494094694 | 0821-2444451

MUDA SITE FOR SALE
30X40 & 30X50
Near Sardar Vallabh Bhai Patel Nagar,
T Narasipura Road
READY FOR REGISTRATION
99458 57017

ಉದ್ಯೋಗ ಅವಕಾಶ
Palli Developers & Consultants LLP
ಪಲ್ಲಿ ಡೆವಲಪರ್ಸ್
1. ಟೆಲಿ ಕಾಲರ್ಸ್ – 02 ಮಹಿಳೆಯರು
(1 ವರ್ಷ ರಿಯಲ್ ಎಸ್ಟೇಟ್‌ನಲ್ಲಿ ಅನುಭವ)
2. ಆಫೀಸ್ ಬಾಯ್ – 01
ಕರೆ ಮಾಡಿ 97420 55560
0821-3551296

COMMERCIAL PROPERTY FOR SALE
in ASHOKA ROAD
EAST FACING
Contact:-
Darshan M.D: 9113903132

3 BHK PREMIUM VILLAS FOR SALE
@ 4th Stage
Vijayanagar
Mysuru
Contact:
96069 07151

INDUSTRIAL WAREHOUSE FOR RENT
Industrial Warehouse available for rent
@ Yadavagiri, Mysore
Plot Area: 5606 Sqft
Built-up Area: 3300 Sqft
Contact:
82966 58879

HOUSE FOR SALE
3-BHK Duplex House, 30x40 North Facing site East Facing Door, Vijaynagar 4th Stage, 1st Phase. (Broker Excuse) Contact
9738383802 | 7483243861



MINIMUM 50% OFF
ON EVERYTHING
NO EXCEPTIONS!
OFFER VALID TILL 18TH AUGUST



50+ sofas starting from ₹24,900

Min 50% off on all Living



Min 50% off on all Dining

35+ dining sets starting from ₹14,900



50+ beds starting from ₹24,900

Min 50% off on all Bedrooms

Min 50% off on all Homeware, Decor & Furnishing



Starting from ₹99

Get free recliner worth ₹49,995 on purchase of homeware*

UNLOCK THE FREEDOM OF SAVINGS!
*T&C Apply

FURNITURE | DECOR | FURNISHINGS | HOMEWARE | MODULAR KITCHENS | HOME INTERIORS

HDFC BANK
Get 5% Instant Discount*
on Easy EMI with HDFC Bank Cards
Minimum transaction. ₹30,000
EMI Options Available Powered By Pinelabs

Mysore - Hunsur Road, Near Aishwarya Petrol Bunk, Vijayanagar, 1st Stage Hinkal, Ph. No.: 08976808306 / 08050400045.
Customer Service Helpline: 08069252525

HomeTown
The Art Of Better Living
www.hometown.in

Free Delivery | Free Installation | Assured Quality | Upto 3 Years Warranty On Furniture | EMI and Easy Finance